ಹುಬ್ಬಳ್ಳಿ: ಕಳೆದ ಹತ್ತು ದಿನಗಳಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಇಲ್ಲಿನ ಪೂರ್ವ ವಿಧಾನ ಸಭಾ ಕ್ಷೇತ್ರದ ವಿವಿಧೆಡೆ ಧರೆಗುರಿಳಿದ ಮನೆಗಳಿಗೆ ಅಧಿಕಾರಿಗಳೊಂದಿಗೆ ಭೇಟಿನೀಡಿದ ಶಾಸಕ ಪ್ರಸಾದ ಅಬ್ಬಯ್ಯ ಅವರು ಸಂತ್ರಸ್ಥರ ಸಮಸ್ಯೆ ಆಲಿಸಿ ಧರ್ಯ ತುಂಬಿದರು.

**ಕುಡಚಿ:-ರಾಯಬಾಗ ತಾಲೂಕಿನ ಕುಡಚಿ ಪಟ್ಟಣದ ವ್ಯಾಪ್ತಿಯಲ್ಲಿ ರೈಲು ಹಳ ಮೇಲೆ ಕುಡಚಿ ಜಮಖಂಡಿ ರಸ್ತೆ ನಿರ್ಮಾಣವಾಗುತ್ತಿರುವ ಹೊಸ ಸೇತುವೆ ಕಾಮಗಾರಿ ಇನ್ನೂ ಪ್ರಗತಿಯಲ್ಲಿದ್ದು, ರೈಲ್ವೇ ಇಲಾಖೆಯವರು ಹೊಸ ಸೇತುವೆ ಕಾಮಗಾರಿ ಪ್ರಗತಿಯಲ್ಲಿ ಇರುವಾಗಲೇ ಹಳೆ ಸೇತುವೆ ಧ್ವಂಸಗೊಳಸಲು ಆದೇಶಿಸಿರುತ್ತಾರೆ.**

**ಗೋಕಾಕ: ತಾಲೂಕಿನ ಕುಂದರಗಿ ಗ್ರಾಮ ಪಂಚಾಯತನ ಎರಡನೇ ಅವಧಿಗೆ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆ ಶಾಸಕ ರಮೇಶ ಜಾರಕಿಹೊಳಿ ಅವರ ಮಾರ್ಗದರ್ಶನದಲ್ಲಿ ಅವಿರೋಧ ಆಯ್ಕೆ ಜರುಗಿತು.**

## ಮೃತ ರೈತರ ಕುಟುಂಬಕ್ಕೆ ಪರಿಹಾರ :ಸವದಿ

ಅಥಣಿ: 2022-23ನೇ ಸಾಲಿನಲ್ಲಿ ಸಾಲಭಾದೆಯಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡ ಅಥಣಿ ತಾಲೂಕಿನ ನಾಲ್ವರು ರೈತರ ಕುಟುಂಬಕ್ಕೆ ಮಾಜಿ ಡಿಸಿಎಂ ಹಾಗೂ ಹಾಲಿ ಶಾಸಕ ಲಕ್ಷ್ಮಣ ಸವದಿ ತಲಾ ಐದು ಪರಿಹಾರ ದೃಢಿಕರಣ ಪ್ರತಿ ವಿತರಿಸಿದರು.ಸತ್ತಿ ಗ್ರಾಮದ ರೈತ ಬಸವರಾಜ ನಾವಿ, ಹುಲಗಬಾಳ ಗ್ರಾಮದ ಅಮೂಲ ಚವ್ಹಾಣ, ಶೇಗುಣಶಿ ಗ್ರಾಮದ ಸಿದ್ದಪ್ಪ ಪೂಜಾರಿ,ಮತ್ತು ಕಕಮರಿ ಗ್ರಾಮದ ಬಸಪ್ಪ ಸಂಕ ಇವರ ಕುಟುಂಬಕ್ಕೆ ಪಟ್ಟಣದ ಪ್ರವಾಶಿ ಮಂದಿರದಲ್ಲಿ ದೃಢಿಕರಣ ಪ್ರತಿ ನೀಡಿದರು.

## ಕೆಂಪವಾಡ ಗ್ರಾ.ಪಂ ಅವಿರೋಧ ಆಯ್ಕೆ



ಕಾಗವಾಡ:ತಾಲ್ಲೂಕಿನ ಕೆಂಪವಾಡ ಗ್ರಾಮ ಪಂಚಾಯತನ ಎರಡನೇ ಅವಧಿಯ ಅಧ್ಯಕ್ಷರಾಗಿ ಅನ್ನಪೂರ್ಣ ಶಂಕರ ಶೇಮಡೆ ಉಪಾಧ್ಯಕ್ಷರಾಗಿ ಸ್ವಾತಿ ಕಾಂಬಳೆ ಅವಿರೋಧವಾಗಿ ಆಯ್ಕೆಯಾದರು.

19 ಸದಸ್ಯ ಬಲದ ಗ್ರಾಮ ಪಂಚಾಯತಗೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ತಲಾ ಒಬ್ಬರು ನಾಮಪತ್ರ ಸಲ್ಲಿಕೆ ಮಾಡಿದ್ದರಿಂದ ಅವಿರೋಧ ಆಯ್ಕೆ ಎಂದು ಚುನಾವಣಾ ಅಧಿಕಾರಿ ಪ್ರವೀಣ ಹುಣಸಿಕಟ್ಟಿ ಘೋಷಿಸಿದರು ಆಯ್ಕೆ ಪ್ರಕ್ರಿಯೆಯಲ್ಲಿ ಒಟ್ಟು 15 ಸದಸ್ಯರು ಪಾಲ್ಗೊಂಡರು ಹಾಗೂ ನಾಲ್ಕು ಸದಸ್ಯರು ಗೈರು ಉಳಿದರು.

ಆಯ್ಕೆ ನಂತರ ಮಾತನಾಡಿದ ಹಿರಿಯ ಸದಸ್ಯ ಮಾಹಾದೇವ ಮಾಳಿ ಮಾತನಾಡಿ ಮೂರು ಕೆಂಪವಾಡ,ನವಲಿಹಾಳ,ಕವಲಗುಡ್ಡ ಗ್ರಾಮಗಳ ಹಿತದೃಷ್ಟಿಯಿಂದ ಎಲ್ಲ ಹಿರಿಯರು ಕೂಡಿಕೊಂಡು ಪಕ್ಷಾತೀತವಾಗಿ ಒಮ್ಮದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ ಅದರಂತೆ ಹಿರಿಯರು ಮಾರ್ಗದರ್ಶನದಲ್ಲಿ ಮೂರು ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ನೂತನ ಅಧ್ಯಕ್ಷ ಉಪಾಧ್ಯಕ್ಷರು ಸದಸ್ಯರ ವಿಶ್ವಾಸಕ್ಕೆ ತೆಗೆದು-ಕೊಂಡು ಕುಡಿಯುವ ನೀರು,ರಸ್ತೆ, ಚರಂಡಿ,ಅಭಿವೃದ್ಧಿ ಪಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಿದ್ದವೆ ಎಂದು ಹೇಳಿದರು.

ಈ ವೇಳೆ ಮುಖಂಡರಾದ ರಮೇಶ ತೇಲಿ,ಸಂಜಯ ಸಾವಂತ,ಪ್ರಕಾಶ ತೇಲಿ,ಅಶೋಕ ಹೇರವಾಡೆ,ಬಬನ್ ಸಾವಂತ,ಭೀಮು ಭಂಡಗರ,ಶಂಕರ ಶೇಮಡೆ,ನಿಲೇಶ ವಾಲಿ,ಸಾವಂತ ಖಾಂಡೇಕರ, ಚನ್ನಬಸವ ಘಾಳಿ,ಮಾರುತಿ ತೇಲಿ,ಶಂಕರ ಶೇಮಡೆ,ಮಾಹಾದೇವ ಭಂಡಗರ,ಹಾಗೂ ಸಿಬ್ಬಂದಿಗಳು ಇದ್ದರು.

## ಇದು ಮಳೆ ಆವಾಂತರ



ಕಾರವಾರ:-ಶಿರಸಿ-ಕುಮಟಾ ಹೆದ್ದಾರಿಯ ರಾಗಿ ಹೊಸಳ್ಳಿ ಬಳಿ ಗುಡ್ಡಕುಸಿದು ಹೆದ್ದಾರಿ ಸಂಪೂರ್ಣ ಕೆಸರುಮಯವಾಗಿದ್ದು, ವಾಹನಗಳು ಕೆಸರಿನಲ್ಲಿ ಸಿಲುಕಿ-ಕೊಂಡು ಪ್ರಯಾಣಿಕರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಕಳೆದ ಕೆಲ ದಿನಗಳಿಂದ ನಿರಂತರಾಗಿ ಸುತಿಯುತ್ತಿರುವ ಮಳೆಯಿಂದಾಗಿ ಶಿರಸಿ-ಕುಮಟಾ ಹೆದ್ದಾರಿಯಲ್ಲಿ ಕಳೆದ ಮೂರು ದಿನಗಳ ಹಿಂದೆ ಗುಡ್ಡ ಕುಸಿತವಾಗಿ ಸಂಚಾರ ಕೆಲ ಗಂಟೆಗಳವರೆಗೆ ಸಂಪೂರ್ಣ ಬಂದಾಗಿತ್ತು. ಬಳಿಕ ಮಣ್ಣು ತೆರವುಗೊಳಿಸಲಾಗಿತ್ತಾದರು ಇದೇ ಪ್ರದೇಶದಲ್ಲಿ ಮತ್ತೆ ಕುಸಿತವಾಗಿ ಮಣ್ಣು ಹೆದ್ದಾರಿಗೆ ಬಂದಿದೆ. ಸದ್ಯ ಜೆಸಿಬಿ ಮೂಲಕ ಮಣ್ಣು ತೆರವು ಮಾಡಿ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ.

ಆದರೆ ಈ ಪ್ರದೇಶದಲ್ಲಿ ಹೆದ್ದಾರಿ ಸಂಪೂರ್ಣ ಕೆಸರುಮಯವಾದ ಕಾರಣ ವಾಹನಗಳು ಸಂಚರಿಸುವಾಗ ಕೆಸರಿನಲ್ಲಿ ಸಿಲುಕಿಕೊಂಡು ಪರದಾಡಬೇಕಾಗಿದೆ. ಬುಧವಾರ ಮುಂಜಾನೆ ಕೂಡ ಕಾರೊಂದು ಕೆಸರಿನಲ್ಲಿ ಸಿಲುಕಿಕೊಂಡಿತ್ತು. ಹೆದ್ದಾರಿ ಕಾಮಗಾರಿಯ ಕಾರ್ಮಿಕರು, ಪ್ರಯಾಣಿಕರು ವಾಹನವನ್ನು ತಳ್ಳಿ ಮೇಲೆತ್ತಲು ಪ್ರಯತ್ನಿಸಿದರು ಕೂಡ ಸಾಧ್ಯವಾಗಿರಲಿಲ್ಲ. ಕೊನೆಗೆ ಜೆಸಿಬಿ ಮೂಲಕ ಸಿಲುಕಿರುವ ವಾಹನಕ್ಕೆ ಹಗ್ಗ ಕಟ್ಟಿ ಎಳೆದು ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ.

## ಅವಿರೋಧ ಆಯ್ಕೆ

**ಗೋಕಾಕ:** ತಾಲೂಕಿನ ಕುಂದರಗಿ ಗ್ರಾಮ ಪಂಚಾಯತನ ಎರಡನೇ ಅವಧಿಗೆ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆ ಶಾಸಕ ರಮೇಶ ಜಾರಕಿಹೊಳಿ ಅವರ ಮಾರ್ಗದರ್ಶನದಲ್ಲಿ ಅವಿರೋಧ ಆಯ್ಕೆ ಜರುಗಿತು.

ನೂತನ ಅಧ್ಯಕ್ಷರಾಗಿ ಶ್ರೀಮತಿ ತಿಪ್ಪವ್ವ ಯಲ್ಲಪ್ಪ ಬಿಪಾಟೀಲ, ಉಪಾಧ್ಯಕ್ಷರಾಗಿ ಶ್ರೀಮತಿ ಭಾರತಿ ಲಕ್ಷ್ಮಣ ಮಾಸ್ತಮರಡಿ ಅವಿರೋಧವಾಗಿ ಆಯ್ಕೆಯಾದರು. ಚುನಾವಣಾ ಅಧಿಕಾರಿಯಾಗಿ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಎಮ್ ಎಮ್ ನದಾಫ ಕಾರ್ಯನಿರ್ವಹಿಸಿದರು.

ಈ ಸಂದರ್ಭದಲ್ಲಿ ಶಾಸಕರ ಆಪ್ತಸಹಾಯಕ ಭೀಮಗೌಡ ಪೋಲಿಸಗೌಡರ, ರಾಮಣ್ಣ ಸುಂಬಳಿ, ಉತ್ತಮಕುಮಾರ ದಂಡಿನ, ಸೇರಿದಂತೆ ಕುಂದರಗಿ ಗ್ರಾಪಂ ಸದಸ್ಯರು ಅನೇಕರು ಇದ್ದರು.



## ಓದಿಗೆ ಪೂರಕ ವಾತಾವರಣ ನಿರ್ಮಿಸಿದ 'ಬೆಳಕು'



**ಕನ್ನಡಮ್ಮ ಸುದ್ದಿ** ಸಂಕೇಶ್ವರ: ಶೈಕ್ಷಣಿಕ ಅಥವಾ ಸ್ಪರ್ಧಾತ್ಮಕ ಯಾವುದೇ ಪರೀಕ್ಷೆ ಇದ್ದರೂ ಅದನ್ನು ಓದಲು ಪೂರಕ ವಾತಾವರಣದ ಅವಶ್ಯಕತೆ ಇರುತ್ತದೆ. ಆದರೆ ಎಷ್ಟೋ ಬಡ ಪ್ರತಿಭಾವಂತ ಮಕ್ಕಳಿಗೆ ಆ ವ್ಯವಸ್ಥೆ ಇರುವುದಿಲ್ಲ. ಆದ್ದರಿಂದ ಅವರಿಗೆ ಓದಿಗೆ ಬೇಕಾದ ಎಲ್ಲ ಸೌಕರ್ಯಗಳನ್ನು ಒದಗಿಸುವ ದೃಷ್ಟಿಕೋನದಿಂದ **'ಬೆಳಕು'** ಸ್ಟಡಿ ಸೆಂಟರ್ ಪ್ರಾರಂಭಿಸಲಾಗಿದೆ ಎಂದಿದ್ದಾರೆ ಸಂಚಾಲಕ ಬೀರು ಹೆಗಡೆ.

ಕಳೆದ ಸೋಮವಾರ ಸಂಕೇಶ್ವರದಲ್ಲಿ 'ಬೆಳಕು' ಅಧ್ಯಯನ ಕೇಂದ್ರ (ಸ್ಟಡಿ ಸೆಂಟರ್) ಉದ್ಘಾಟನೆಗೊಂಡಿದ್ದು ಸಂಕೇಶ್ವರ ಹಾಗೂ ಸುತ್ತಲಿನ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಅನುಕೂಲಕರವಾಗುವ ನಿಟ್ಟಿನಲ್ಲಿ ಈ ಕೇಂದ್ರ ಪ್ರಾರಂಭವಾಗಿದೆ.

ಬೆಳಕು ಅಧ್ಯಯನ ಕೇಂದ್ರವನ್ನು ಸಂಕೇಶ್ವರ ಶಂಕರಾಚಾರ್ಯ ಮಠದ ವಿದ್ಯಾನರಸಿಂಹ ಭಾರತಿ ಮಹಾಸ್ವಾಮೀಜಿ ಹಾಗೂ ನಿಡಸೋಸಿ ಸಿದ್ಧ ಸಂಸ್ಥಾನ ಮಠದ ಉತ್ತರಾಧಿಕಾರಿಗಳಾದ 6ನೇ ನಿಜಲಿಂಗೇಶ್ವರ ಮಹಾಸ್ವಾಮೀಜಿ ಅವರ ಅಮೃತ ಹಸ್ತದಿಂದ ಮಾಡಲಾಯಿತು.

ಪ್ರತಿನಿತ್ಯ ದಿನಪತ್ರಿಕೆಗಳು, ಉಚಿತ ವೈಫೈ, ಮಾಸಿಕ ನಿಯತ ಕಾಲಿಕೆಗಳು, ಪ್ರತಿಯೊಬ್ಬರಿಗೂ ಚಾರ್ಜಿಂಗ್ ಪ್ಲಗ್, ಶುದ್ಧಿಕರಿಸಿದ ಕುಡಿಯುವ ನೀರು, ಓದಿಗೆ ಸಾಂತಿಯುತ ಪರಿಸರವಿದ್ದು ಸಿಟಿ ಅಳವಡಿಸಲಾಗಿದೆ.

ಅತಿಥಿಗಳಾಗಿ ಮಾಜಿ ಪುರಸಭೆ ಅಧ್ಯಕ್ಷರಾದ ಅಪ್ಪಾಸಾಹೇಬ ಶಿರಕೊಳಿ, ಗಜಾನನ ಕ್ವಳ್ಳಿ, ಮುಖಂಡರಾದ ಶಂಕರರಾವ್ ಹೆಗಡೆ, ಅಜಿತ್ ಕರಜಗಿ, ಡಾ.ಜಯಪ್ರಕಾಶ ಕರಜಗಿ, ಸಚಿನ್ ಹೆಗಡೆ, ಡಾ ಮಂದಾರ ಹವಳ, ಡಾ ಸುಂದರವಾಲೆ, ರಾಘವೇಂದ್ರ ನಾಯ್ಡು, ಸಿಪಿಐ ಮಾರುತಿ ಹೆಗಡೆ, ಡಾ. ಸಂತೋಷ್ ಖಜ್ಜಣ್ಣವರ, ಅಜಯ ಸಾರಾಪುರೆ, ಭೀಮರಾವ ಮಲ್ಹಾರಿಗೊಳ, ಜಯವಂತ ಕರಿಗಾರ್, ಶಿವಾನಂದ ಡಂಗ್, ಗಣಪತಿ ಹೆಗಡೆ, ಬೀರಪ್ಪ ಮುಸಾಯಿ, ಸುಭಾಷ ಕಾಸರಕರ, ಮುತ್ತು ಬಂತಿ, ಪ್ರಸಾದ್ ಹನಗಂಡಿ ಮತ್ತಿತರು ಇದ್ದರು.



ಗೋಕಾಕ: ಕಾರ್ಗಿಲ್ ವಿಜಯೋತ್ಸವ ಸವಿನೆನಪಿಗಾಗಿ ನಗರದ ಶ್ರೀ ಚೆನ್ನಬಸವೇಶ್ವರ ವಿದ್ಯಾಪೀಠದ ವಿದ್ಯಾರ್ಥಿಗಳು ತಾಲೂಕಿನ ಲೋಳಸೂರ ಗ್ರಾಮದಲ್ಲಿ ವೀರಯೋಧ ಕಲ್ಲಪ್ಪ ಸಿದ್ದಪ್ಪ ಬಾಂವಚಿ ಅವರ ಪ್ರತಿಮೆಗೆ ಪೂಜೆ ಸಲ್ಲಿಸಿ ಗ್ರಾಮದಲ್ಲಿ ಪಥಸಂಚಲನ ನಡೆಸಿದರು. ಈ ಸಂದರ್ಭದಲ್ಲಿ ಮುಖ್ಯೋಪಾಧ್ಯಾಯ ಜೆ.ಎ ಮುತ್ನಾಳ, ದಾಕ್ಷಾಯಿಣಿ ಮಠಪತಿ ಹಾಗೂ ಶಿಕ್ಷರು ಇದ್ದರು

## ಅಧಿಕಾರಿಗಳೆ, ಹಳ್ಳಿಗಳಿಗೆ ಹೋಗಿ ಜನರ ಸಮಸ್ಯೆ ಕೇಳಿ



**ಕನ್ನಡಮ್ಮ ಸುದ್ದಿ ಧಾರವಾಡ :-** ಜಿಲ್ಲೆಯಲ್ಲಿ ಕೆಲವು ಕಡೆ ಅತಿಯಾದ ಮಳೆ, ಮುಂಗಾರು ಬಿತ್ತನೆ ಇಲ್ಲದೆ ಜನ ತೊಂದರೆಯಲ್ಲಿದ್ದಾರೆ. ಅಧಿಕಾರಿಗಳು ಕಚೇರಿಯಲ್ಲಿ ಕುಳಿತುಕೊಳ್ಳದೇ ಹಳ್ಳಿಗಳಿಗೆ ಹೋಗಿ ಸಾರ್ವಜನಿಕರ ಸಮಸ್ಯೆಗಳನ್ನು ಕೇಳಬೇಕು. ಮತ್ತು ಅವರಿಗೆ ಅಗತ್ಯವಿರುವ ಸರಕಾರದ ನೆರವು, ಸಹಾಯ ಮಾಡಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ಪ್ರಕೃತಿ ವಿಕೋಪಕ್ಕೆ ಸಂಭಂದಿಸಿದ ವಿಷಯಗಳ ಕುರಿತು ಜಿಲ್ಲಾ ಮಟ್ಟದ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳ ಸಭೆ ಜರುಗಿಸಿ, ಮಾತನಾಡಿದರು. ಅಧಿಕಾರಿಗಳು ಕಚೇರಿಯಲ್ಲಿ ಕಾಲ ಕಳೆಯದೆ, ಜನರ ಬಳಿ ಹೋಗಬೇಕು. ಮನೆ ಹಾನಿ ಪ್ರಕರಣಗಳನ್ನು ಅಧಿಕಾರಿಗಳು ಸ್ವತಃ ಭೇಟಿ ನೀಡಿ, ಪರಿಶೀಲಿಸಬೇಕು. ಜನರ ಸಂಚಾರಕ್ಕೆ, ವಿದ್ಯಾರ್ಥಿಗಳ ಓಡಾಟಕ್ಕೆ ಅಡಚಣೆ ಆಗಿರುವ ರಸ್ತೆಗಳ ದುರಸ್ತಿಗೆ ಆದ್ಯತೆ ನೀಡಬೇಕು ಎಂದರು.

ಜಿಲ್ಲೆಯಲ್ಲಿ ಮುಂಗಾರು ಮಳೆ ಅಭಾವದಿಂದ ಮುಂಗಾರು ಬಿತ್ತನೆಗೆ ಹಿನ್ನಡೆ ಆಗಿದೆ. ಬಿತ್ತಿದ ಕೆಲವು ರೈತರ ಬೆಳೆ ಸಕಾಲಕ್ಕೆ ಮಳೆ ಇಲ್ಲದೆ ಹಾಗೂ ಈಗ ಅತಿ ಮಳೆಯಿಂದಾಗಿ ಬೆಳೆ ಕುಂಠಿತವಾಗಿದೆ. ಕೃಷಿ ಇಲಾಖೆ ಅಧಿಕಾರಿಗಳು ರೈತ ಸಂಪರ್ಕ ಕೇಂದ್ರಗಳನ್ನು ಸಕ್ರಿಯವಾಗಿ ತೊಡಗಿಸಬೇಕು. ಪ್ರತಿ ರೈತ ಸಂಪರ್ಕ ಕೇಂದ್ರ ವ್ಯಾಪ್ತಿಯ ರೈತರಲ್ಲಿ ಬೆಳೆ ವಿಮೆ ಬಗ್ಗೆ ಜಾಗೃತಿ ಮೂಡಿಸಬೇಕು. ಉತ್ತಮವಾಗಿ ಮಳೆ ಆಗಿರುವುದರಿಂದ ಬಹುತೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಡಿಮೆ ಆಗಿದೆ. ಜಲ್ ಜೀವನ ಮಿಷನ್ ಮತ್ತು ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಬೇಗ ಪೂರ್ಣಗೊಳಿಸಬೇಕು. ಕಾಮಗಾರಿ ಗುಣಮಟ್ಟ ಕಳಪೆ ಮಾಡಿದರೆ ಸಂಭಂದಿಸಿದವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದರು.

ಜಿಲ್ಲಾಧಿಕಾರಿ ಗುರುದತ್ತ ಹೆಗಡೆ, ಮಹಾನಗರ ಪೊಲೀಸ್ ಆಯುಕ್ತ ಸಂತೋಷ ಬಾಬು, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಸ್ವರೂಪ ಟಿ.ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲೋಕೇಶ್ ಜಗಲಾಸರ್, ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ., ಮಹಾನಗರ ಪಾಲಿಕೆ ಆಯುಕ್ತ ಡಾ.ಈಶ್ವರ ಉಳ್ಳಾಗಡ್ಡಿ, ಜಿಲ್ಲೆಯ ಎಲ್ಲ ತಹಸಿಲ್ದಾರರು ಹಾಗೂ ವಿವಿದ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

# ನವಲಗುಂದ: ಮಳೆಹಾನಿ ಪ್ರದೇಶಗಳಿಗೆ ಭೇಟಿ ನೀಡಿದ : ಲಾಡ್



ನವಲಗುಂದ : ಕಳೆದ 1ವಾರದಿಂದ ಸುರಿದ ಜಿಟಿ-ಜಿಟಿ ಮಳೆಗೆ ಪಟ್ಟಣ ಸೇರಿದಂತೆ ತಾಲೂಕಿನ ಗ್ರಾಮಗಳಲ್ಲಿ ಮಳೆಹಾನಿ ಪ್ರದೇಶಗಳಿಗೆ ಭೇಟಿ ನೀಡಿ ಪರಿವೀಕ್ಷಿಸಿದರು.

ಆರಂಭದಲ್ಲಿ ಪಟ್ಟಣಕ್ಕೆ ಆಗಮಿಸಿದ ಸಚಿವ ಸಂತೋಷ ಲಾಡ್ ಗೆ ಕಾಂಗ್ರೆಸ್ ಕಾರ್ಯಕರ್ತರು ಹೂಗುಚ್ಛ ನೀಡಿ ಸ್ವಾಗತಿಸಿದರು.

ಸಚಿವರು ಶಿರಸಂಗಿ ಲಿಂಗರಾಜ ಮೂರ್ತಿಗೆ ಮಾಲಾರ್ಪಣೆ ಮಾಡಿ ನಂತರ ಮಹದಾಯಿ ಕಳಸಾ -ಬಂಡೂರಿ ರೈತ ಹೋರಾಟ ವೇದಿಕೆ ಭೇಟಿ ನೀಡಿ, ನದಿಜೋಡಣೆ, ರೈತರ ಸಾಲಮನ್ನಾ, ಬೆಳೆವಿಮೆ, ಪರಿಹಾರ ಸೇರಿದಂತೆ ರೈತ ಹೋರಾಟಗಾರರ ಮನವಿ ಸ್ವೀಕರಿಸಿದರು.

ನಂತರ ತಾಲೂಕಿನ ಗುಡಿಸಾಗರ ಗ್ರಾಮಕ್ಕೆ ಭೇಟಿ ನೀಡಿ ಗ್ರಾಮದ ದೇವಸ್ಥಾನದಲ್ಲಿ ಕುಳಿತು ರೈತರ ಅಹ್ವಾಲು ಸ್ವೀಕರಿಸಿದರು. ನಾಗನೂರ ಗ್ರಾಮಕ್ಕೆ ಭೇಟಿ ನೀಡಿ ಸೊರುತ್ತಿರುವ ಸೊಸೈಟಿ ಕಟ್ಟಡ ವೀಕ್ಷಣೆ ಮಾಡಿ, ನಾಗನೂರ ಹಾಗೂ ಕಡದಳ್ಳಿ ಗ್ರಾಮಸ್ಥರು ಸಚಿವರಿಗೆ ರಸ್ತೆ ದುರಸ್ಥಿಯನ್ನ ಸರಿಪಡಿವಂತೆ ಸಚಿವರಿಗೆ ಮನವಿ ನೀಡಿದರು ಮನವಿ ಸ್ವೀಕರಿಸಿದ ನಂತರ ಮಾಧ್ಯಮ ಜೊತೆ ಶೀಘ್ರದಲ್ಲಿ ದುರಸ್ತಿ ಮಾಡಲಾಗುವುದು ಎಂದು ಹೇಳಿದರು.ನಂತರ ಕಡದಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಕೆರೆ ಹೋಳು ಎತ್ತುವ ಕಾಮಗಾರಿ ವೀಕ್ಷಿಸುವ ವೇಳೆಯಲ್ಲಿ ರೈತರು ಕೆರೆ ಹಾಗೂ ರಸ್ತೆ ಸುಧಾರಣೆ ಮಾಡುವಂತೆ ಸಚಿವರಿಗೆ ಮನವಿ ನೀಡಿದರು.

ಇನ್ನೂ ಕಳೆದ ಭಾರಿ ಅತಿವೃಷ್ಟಿಯಿಂದ ಹಳ್ಳ ಕೊರೆದು ಸಾವಿರಾರು ಎಕ-ರೆ ಬೆಳೆ ಹಾನಿಮಾಡಿದ ಅರಹಟ್ಟಿ ಹಾಗೂ ತಡಹಾಳ ಮದ್ಯದಲ್ಲಿರುವ ಹಂದಿಗೇನಹಳ್ಳ ವೀಕ್ಷಿಸಿದರು.

ಈ ಸಂದರ್ಭದಲ್ಲಿ ಶಾಸಕ ಎನ್. ಎಚ್. ಕೋನರಡ್ಡಿ, ವಿನೋದ ಅಸೂಟಿ, ವಿಜಯ ಕುಲಕರ್ಣಿ, ನವೀನ ಕೋನರಡ್ಡಿ, ಚಂಬಣ್ಣ ಹಾಳದೋಟರ, ರಾಘು ಮೇಟಿ, ಸಿರಾಜ ಧಾರವಾಡ, ವಿಜಯಗೌಡ ಪಾಟೀಲ, ನಾರಾಯಣ ಕುರಹಟ್ಟಿ, ಮಂಜು ಮಾಯನ್ನವರ, ನವೀನ ಹೊಸಗೌಡ್ರ, ಹಾಗೂ ತಹಸೀಲ್ದಾರ ಪ್ರಕಾಶ್ ಹೊಳೆಪ್ಪಗೋಳ ಹಾಗೂ ತಾಲೂಕು ಮಟ್ಟದ ಎಲ್ಲ ಆಡಳಿತ ವರ್ಗದ ಅಧಿಕಾರಿಗಳು ಉಪಸ್ಥಿತರಿದ್ದರು

## ಬೆಣ್ಣೆಹಳ್ಳ ವೀಕ್ಷಿಸಿದ ಸಚಿವ ಲಾಡ್



ನವಲಗುಂದ : ಕಾರ್ಮಿಕ ಸಚಿವ ಹಾಗೂ ಜಿಲ್ಲಾ ಉಸ್ತವಾರಿ ಸಚಿವ ಸಂತೋಷ್ ಲಾಡ್ ಅವರು ಯಮನೂರ ಗ್ರಾಮದ ಬೆಣ್ಣೆಹಳ್ಳ ವೀಕ್ಷಣೆ ನಡೆಸಿದರು.

ಈ ವೇಳೆ ಮಾತನಾಡಿದ ಅವರು ಜಿಲ್ಲೆಯಾದ್ಯಂತ ಉತ್ತಮ ಮಳೆಯಾಗುತ್ತಿದ್ದು, ನದಿ ಹಳ್ಳಗಳು ಭಾರಿ ಪ್ರಮಾಣದಲ್ಲಿ ಹರಿಯುತ್ತಿವೆ. ಹಳ್ಳದ ಸೇತುವೆಗಳ ಮೇಲೆ ಸಂಚರಿಸುವಾಗ ಸಾರ್ವಜನಿಕರು ಎಚ್ಚರ ವಹಿಸುವುದು ಅಗತ್ಯ ಎಂದರು.

ಈ ಸಂದರ್ಭದಲ್ಲಿ ಶಾಸಕ ಎನ್ ಎಚ್ ಕೋನರೆಡ್ಡಿ, ವಿಜಯ ಕುಲಕರ್ಣಿ, ವಿನೋದ ಅಸೂಟಿ ಸೇರಿದಂತೆ ತಾಲ್ಲೂಕಾ ಮಟ್ಟದ ಅಧಿಕಾರಿಗಳು ಮತ್ತಿತರರು ಉಪಸ್ಥಿತರಿದ್ದರು.

## ಸತತ ಮಳೆಯಿಂದ 15ಮನೆಗಳಿಗೆ ಹಾನಿ
## ಮಳೆ ಭಾದಿತ ಪ್ರದೇಶಕ್ಕೆ ಶಾಸಕ ಅಬ್ಬಯ್ಯ ಭೇಟಿ



ಹುಬ್ಬಳ್ಳಿ: ಕಳೆದ ಹತ್ತು ದಿನಗಳಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಇಲ್ಲಿನ ಪೂರ್ವ ವಿಧಾನ ಸಭಾ ಕ್ಷೇತ್ರದ ವಿವಿಧೆಡೆ ಧರೆಗುರಿಳಿದ ಮನೆಗಳಿಗೆ ಅಧಿಕಾರಿಗಳೊಂದಿಗೆ ಭೇಟಿನೀಡಿದ ಶಾಸಕ ಪ್ರಸಾದ ಅಬ್ಬಯ್ಯ ಅವರು ಸಂತ್ರಸ್ಥರ ಸಮಸ್ಯೆ ಆಲಿಸಿ ಧರ್ಯ ತುಂಬಿದರು.

ಅವರು, ಮಂಗಳವಾರ ಪೂರ್ವ ವಿಧಾನಸಭಾ ಕ್ಷೇತ್ರದ ಮಸ್ತಾನ ಸೋಫಾ, ಅಕ್ಕಿಪೇಟೆ, ಬಾಗಾರಪೇಟೆ ಸೇರಿದಂತೆ ವಿವಿಧೆಡೆ ಭೇಟಿನೀಡಿ ಸಂತ್ರಸ್ಥರಿಗೆ ಧರ್ಯತುಂಬಿ ಅಧಿಕಾರಿಗಳಿಂದ ಮಾಹಿತಿ ಪಡೆದು, ಮನೆಗಳು ಬಿದ್ದಿರುವ ಸಮಗ್ರ ವರದಿ ಸಿದ್ಧಪಡಿಸಿ ಶೀಘ್ರವೇ ಸರ್ಕಾರಕ್ಕೆ ಕಳುಹಿಸಬೇಕು. ಸರ್ಕಾರದಿಂದ ಪರಿಹಾರ ಧನವನ್ನು ಶೀಘ್ರ ಕೊಡಿಸುವ ಕಾರ್ಯವಾಗಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಪೂರ್ವ ಕ್ಷೇತ್ರ ಕೊಂಚ ತಗ್ಗು ಪ್ರದೇಶವಾದ್ದರಿಂದ ಈ ಹಿಂದೆ ಸ್ವಲ್ಪ ಮಳೆಯಾದರೂ ದೊಡ್ಡಮಟ್ಟದಲ್ಲಿ ಪರಿಣಾಮ ಬೀರುತ್ತಿತ್ತು. ಆದರೆ, ರಾಜ ಕಾಲುವೆ ತಡೆಗೋಡೆ ನಿರ್ಮಾಣ, ಚರಂಡಿ ನಿರ್ಮಾಣ, ಸುಸಜ್ಜಿತ ರಸ್ತೆ ಸೇರಿದಂತೆ ಮೂಲ ಸೌಕರ್ಯ ಒದಗಿಸಲು ಸಾವಿರಾರು ಕೋಟಿ ರೂ. ಅನುದಾನ ತಂದು ಅಭಿವೃದ್ಧಿ ಪಡಿಸಲಾಗಿದೆ. ಹೀಗಾಗಿ ಮಳೆ ಬಂದರೂ ಕ್ಷೇತ್ರದ ಜನರು ನೆಮ್ಮದಿಯ ಜೀವನ ನಡೆಸುವಂತಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಸಾರ್ವಜನಿಕರು, ಸ್ಥಳೀಯ ರಸ್ತೆಗಳು, ಚರಂಡಿ ಹಾಳಾಗಿದ್ದು, ರಸ್ತೆಯಲ್ಲಿ ನೀರು ನಿಂತು ಸಂಚಾರಕ್ಕೆ ಸಮಸ್ಯೆಯಾಗುತ್ತಿರುವ ಬಗ್ಗೆ ಶಾಸಕರ ಗಮನಕ್ಕೆ ತಂದರು. ಸಮಸ್ಯೆ ಆಲಿಸಿದ ಶಾಸಕರು ಈಗಾಲೇ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ರೂಪರೇಶ ಸಿದ್ಧಪಡಿಸಲಾಗುತ್ತಿದೆ. ಬಾಕಿ ಉಳಿದರುವ ರಸ್ತೆ, ಚರಂಡಿ ಸೇರಿದಂತೆ ಇನ್ನುಳಿದ ಸೌಕರ್ಯಗಳನ್ನು ಶೀಘ್ರದಲ್ಲೇ ಒದಗಿಸಲಾಗುವುದು ಎಂದು ಶಾಸಕರು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಆರ್.ಕೆ. ಪಾಟೀಲ, ಕಸಬಾಪೇಟೆ ಪೊಲೀಸ್‌ಠಾಣೆ ಅಧಿಕಾರಿ ರಾಘವೇಂದ್ರ ಹಳ್ಳೂರು, ವಲಯ ಆಯುಕ್ತರಾದ ಬಸವರಾಜ ಲಮಾಣಿ, ಕಂದಾಯ ಅಧಿಕಾರಿ ರವಿ ಬೆಣ್ಣೂರು, ಕಾಂಗ್ರೆಸ್ ಮುಖಂಡರಾದ ಮುನ್ನಾ ಮಾರ್ಕರ್, ಬಸವರಾಜ ಮೆನಸಗಿ ಅವರು ಸೇರಿದಂತೆ ಮೊದಲಾದವರು ಇದ್ದರು.

## 15 ಸ್ಥಾನಗಳಿಗೆ ಅವಿರೋಧ ಆಯ್ಕೆ

**ಬೈಲಹೊಂಗಲ**. ಪಟ್ಟಣದ ಶ್ರೀ ಮಹಾಲಕ್ಷ್ಮೀ ಪಟ್ಟಣ ಸಹಕಾರ ಬ್ಯಾಂಕ ನಿಯಮಿತ ಇದರ ಆಡಳಿತ ಮಂಡಳಿಯ ಚುನಾವಣೆಯಲ್ಲಿ 15 ಸ್ಥಾನಗಳಿಗೆ ಸೋಮವಾರ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ರಿಟರ್ನಿಂಗ ಅಧಿಕಾರಿ ವಿ.ಡಿ.ಲಕ್ವಾಣಿ ತಿಳಿಸಿದ್ದಾರೆ.

ಉಮೇಶ ಮ ತುರಮರಿ, ವೀರನಗೌಡ ಮ. ಪಾಟೀಲ, ಸುಬುದ್ದಿ ಈರಯ್ಯಾ ರುದ್ರಾಪೂರ, ರಾಚಪ್ಪ ಮಲಕಾಜಪ್ಪ ಕರೀಕಟ್ಟಿ, ಅಶೋಕ ಬಸಪ್ಪ ವಾಲಿ, ವೀರುಪಾಕ್ಷ ಚನಬಸಪ್ಪ ವಾಲಿ, ಗುರುಪುತ್ರಪ್ಪ ಮ. ಹೊಸಮನಿ, ರುದ್ರಪ್ಪ ಸಂಗಪ್ಪ ಕಾದ್ರೊಳ್ಳಿ, ಬಸವರಾಜ ರಮೇಶ ಬಾಳೇಕುಂದರಗಿ (ಸಾಮಾನ್ಯ ವರ್ಗ) ಶ್ರೀಮತಿ ವಿಮಲಾ ಬಸವರಾಜ ತಟವಟಿ, ಶ್ರೀಮತಿ ಅನ್ನಪೂರ್ಣಾ ಗುರು ಬಾಳೇಕುಂದರಗಿ ( ಸಾಮಾನ್ಯ ಮಹಿಳೆ) ಅನ್ವರಹುಸೇನ ಖಾ. ಪಾಟೀಲ ( ಹಿಂದುಳಿದ ಅ ವರ್ಗ) ಶ್ರೀಶೈಲ ಸೋಮಪ್ಪ ಗೊರವರ ( ಹಿಂದುಳಿದ ಬ ವರ್ಗ), ಶ್ರೀಮತಿ ಬಸವಣ್ಣೆವ್ವ ಯ. ಭರಮಣ್ಣವರ (ಪರಿಶಿಷ್ಟ ಜಾತಿ) ಬಿಷ್ಟಪ್ಪ ಮ. ನಾಯ್ಕರ ( ಪರಿಶಿಷ್ಠ ಪಂಗಡ) ದಿಂದ ಇವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹಿರಿಯರಾದ ಬಸವರಾಜ ಬಾಳೇಕುಂದರಗಿ, ಮಲ್ಲಪ್ಪ ಮುರಗೋಡ, ಗುರುಪುತ್ರಪ್ಪ ಹೊಸಮನಿ, ರುದ್ರಪ್ಪ ಕಾದ್ರೊಳ್ಳಿ, ವಕೀಲ ರಾಜಶೇಖರ ಎತ್ತಿನಮನಿ ಇವರ ಮಾರ್ಗದರ್ಶನದಲ್ಲಿ 15 ಸ್ಥಾನಗಳಿಗೆ ಆಡಳಿತ ಮಂಡಳಿಯ ಸದಸ್ಯರನ್ನು ಅವಿರೋಧವಾಗಿ ಆಯ್ಕೆ ಜರುಗಿತು.

ಅಶೋಕ ಬಾಳೇಕುಂದರಗಿ, ರಾಜು ಕುಡಸೋಮಣ್ಣವರ, ಪ್ರದೀಪ ವನ್ನೂರ, ಬಸೀರಅಹ್ಮದ ಪಾಟೀಲ, ಬ್ಯಾಂಕಿನ ಕಾರ್ಯದರ್ಶಿ ಎಮ್.ಕೆ. ಸರದಾರ ಸಿಬ್ಬಂದಿ ವರ್ಗ ಇದ್ದರು.

## ಅರ್ಜಿ ಆಹ್ವಾನ

ಹುಬ್ಬಳ್ಳಿ :-ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ 2023-24 ನೇ ಸಾಲಿನಲ್ಲಿ ಹೊಸದಾಗಿ ಪ್ರವೇಶ ಬಯಸುವ ಸಾಮಾನ್ಯ ಪದವಿ ಕೋರ್ಸಿನ್ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಬಯಸುವ ಪ್ರವರ್ಗ-1, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ-ಕ್ಕೆ ಸೇರಿರುವ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ವರಮಾನ ರೂ. 2.50 ಲಕ್ಷ ಮತ್ತು ಪ್ರವರ್ಗ-2ಎ, 2ಬಿ, 3ಎ, 3ಬಿ ವರ್ಗಗಳಿಗೆ ಸೇರಿರುವ ಪೋಷಕರ ವಾರ್ಷಿಕ ವರಮಾನ ರೂ. 1 ಲಕ್ಷದೊಳಗಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. http://shp.karnataka.gov.in ವೆಬ್‌ಸೈಟ್ ಮೂಲಕ ಅರ್ಜಿಗಳನ್ನು ಸಲ್ಲಿಸಬೇಕು. ಆಗಸ್ಟ್ 16 ರೊಳಗಾಗಿ ಅರ್ಜಿಗಳನ್ನು ಭರ್ತಿ ಮಾಡಬೇಕೆಂದು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಾದ ಸಿ.ವಿ. ಕರವೀರಮಠ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕ್ರೀಡಾಪಟು ಶಿವಪ್ಪ ಸಲಕಿಗೆ ಹಣಕಾಸಿನ ನೆರವು ಅಗತ್ಯ

ಕನ್ನಡಮ್ಮ ಸುದ್ದಿ ಧಾರವಾಡ :- ಅಂತರಾಷ್ಟ್ರೀಯ ಕ್ರೀಡಾಪಟು ಶಿವಪ್ಪ ಸಲಕಿ ಅವರು ದುಬೈನಲ್ಲಿ ಜರುಗಲಿರುವ ಹಿರಿಯ ನಾಗರಿಕರ ಕ್ರೀಡಾಕೂಟದಲ್ಲಿ ಭಾಗವಹಿಸುತ್ತಿದ್ದು ಅವರಿಗೆ ಹಣಕಾಸಿನ ನೆರವು ನೀಡಬೇಕು ಎಂದು ಕ್ರೀಡಾಪ್ರೇಮಿ ಈಶ್ವರ ಶಿವಳ್ಳಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಮರೇವಾಡ ಗ್ರಾಮದ ಶಿವಪ್ಪ ಸಲಕಿ ಅವರು ಜು.31 ರಿಂದ ಆ.6 ವರೆಗೆ ದುಬೈನಲ್ಲಿ ಜರುಗಲಿರುವ 75 ಕ್ಕೂ ವರ್ಷ ಮೇಲ್ಪಟ್ಟ ನಾಗರಿಕರ ಕ್ರೀಡಾಕೂಟದಲ್ಲಿ 400 ಮೀ., 800 ಮೀ ಮತ್ತು 1500 ಮೀ. ಓಟದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಅವರಿಗೆ ಹಣಕಾಸಿನ ನೆರವು ಅವಶ್ಯಕವಾಗಿದ್ದು ಸರಕಾರ ಇಂತಹ ಕ್ರೀಡಾಪಟುಗಳಿಗೆ ಆರ್ಥಿಕ ನೆರವು ಕಲ್ಪಿಸುವ ಮುಖಾಂತರ ಪ್ರೋತ್ಸಾಹಿಸುವ ಕೆಲಸವನ್ನು ಮಾಡಬೇಕಿದೆ. ಸದ್ಯ ಶ್ರೀಮತಿ ಶಿವಲೀಲಾ ಕುಲಕರ್ಣಿ, ಈಶ್ವರ ಶಿವಳ್ಳಿ, ಅನಿತಾ ಮಟ್ಟಿ ಸೇರಿದಂತೆ ಹಲವರು ಸಹಾಯ ಮಾಡಿದ್ದಾರೆ ಎಂದರು.

8 ನೇ ನ್ಯಾಶನಲ್ ಗೇಮ್ಸ್ ನಲ್ಲಿ ಭಾಗವಹಿಸಿ 400 ಮೀ., 800 ಮೀ ಮತ್ತು 1500 ಮೀ. ಓಟದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ರಾಜ್ಯಮಟ್ಟದ 26 ಕ್ಕೂ ಅಧಿಕ, ರಾಷ್ಟ್ರ ಮಟ್ಟದ 20 ವಿವಿಧ ಕ್ರೀಟಾಕೂಟಗಳಲ್ಲಿ ಭಾಗವಹಿಸಿದ್ದಾರೆ. ಮಲೇಶಿಯಾ ಅಂತರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಗಿಟ್ಟಿಸಿದ್ದಾರೆ. ದೇಶ-ವಿದೇಶಗಳಲ್ಲಿ ತಮ್ಮ ಸಾಧನೆ ಮೆರೆದಿರುವ ಇವರು ಇದೀಗ ದುಬೈನಲ್ಲಿ ಜರುಗಲಿರುವ ಹಿರಿಯ ನಾಗರಿಕರ ಕ್ರೀಡಾಕೂಟದಲ್ಲಿ ಭಾಗವಹಿಸುತ್ತಿದ್ದಾರೆ ಅವರಿಗೆ ಹಣಕಾಸಿನ ನೆರವು ದೊರೆತರೆ ಮತ್ತಷ್ಟು ಸಾಧನೆ ಮಡಲು ಸಾಧ್ಯವಾಗುತ್ತದೆ. ವಿದೇಶದಲ್ಲಿನ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಅಧಿಕ ಪ್ರಮಾಣದ ಖರ್ಚು ತಗಲುವುದರಿಂದ ಶಿವಪ್ಪ ಸಲಕಿ ಅವರ ಬ್ಯಾಂಕ್ ಖಾತೆ ಸಂ. 12572250022113 ಐಎಫ್‌ಎಸ್‌ಸಿ ನಂಬರ- ಸಿಎನ್‌ಆರ್‌ಬಿ 0011257 ಕೆನರಾ ಬ್ಯಾಂಕ್‌ಗೆ ನೇರವಾಗಿ ಹಣ ಕಟ್ಟಿ ಸಹಾಯ ಮಾಡಬೇಕು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪರಮೇಶ್ವರ ಉಳವಣ್ಣವರ, ಬಸವರಾಜ ಚವಡಿಮನಿ, ಸುರೇಶ ತಡಕೋಡ, ಮುರಘೇಶ ಧನಶೆಟ್ಟಿ, ಅನಿತಾ ಮಟ್ಟಿ, ಶಿವಪ್ಪ ಸಲಕಿ ಇದ್ದರು.



# ಹಳೆ ಸೇತುವೆ ಧ್ವಂಸಗೊಳಿಸದಂತೆ ಗ್ರಾಮಸ್ಥರ ಆಗ್ರಹ



ಕುಡಚಿ:-ರಾಯಬಾಗ ತಾಲೂಕಿನ ಕುಡಚಿ ಪಟ್ಟಣದ ವ್ಯಾಪ್ತಿಯಲ್ಲಿ ರೈಲು ಹಳಿ ಮೇಲೆ ಕುಡಚಿ ಜಮಖಂಡಿ ರಸ್ತೆ ನಿರ್ಮಾಣವಾಗುತ್ತಿರುವ ಹೊಸ ಸೇತುವೆ ಕಾಮಗಾರಿ ಇನ್ನೂ ಪ್ರಗತಿಯಲ್ಲಿದ್ದು, ರೈಲ್ವೇ ಇಲಾಖೆಯವರು ಹೊಸ ಸೇತುವೆ ಕಾಮಗಾರಿ ಪ್ರಗತಿಯಲ್ಲಿ ಇರುವಾಗಲೇ ಹಳೆ ಸೇತುವೆ ಧ್ವಂಸಗೊಳಿಸಲು ಆದೇಶಿಸಿರುತ್ತಾರೆ.

ಈ ರಸ್ತೆ ಮುಖ್ಯವಾಗಿ ಕರ್ನಾಟಕ ಮಹಾರಾಷ್ಟ ಕೂಡುವ ರಾಜ್ಯ ಹೆದ್ದಾರಿಯಾಗಿದ್ದು ಸಹಸ್ರಾರು ವಾಹನಗಳು ಈ ಮಾರ್ಗದಿಂದ ಸಂಚರಿಸುತ್ತವೆ. ಕುಡಚಿಯು ಸುಮಾರು ನಲವತ್ತು ಸಾವಿರ ಜನಸಂಖ್ಯೆ ಇರುವ ಪಟ್ಟಣ ಹಾಗೂ ಗ್ರಾಮಪಂಚಾಯತ್ ಹೊಂದಿದ್ದು ಸೇತುವೆ ಪಕ್ಕ ಪಟ್ಟಣದ ಐದು ವಾರ್ಡ ಹಾಗೂ ಗ್ರಾಮೀಣ ಪ್ರದೇಶ ಇದ್ದು ಬಹುತೇಕ ಯಾವುದೇ ಮೂಲಭೂತ ಕೆಲಸಕ್ಕೆ ಬರಬೇಕಾದರೆ ಸೇತುವೆ ದಾಟುವುದು ಅವಶ್ಯಕವಾಗಿದೆ. ಜೊತೆಗೆ ಹಾರೂಗೇರಿ, ಪರಮಾನಂದವಾಡಿ, ಶಿರಗೂರ, ಗುಂಡವಾಡ, ಸುಟ್ಟಟ್ಟಿ,ನಿಲಜಿ ಹಾಗೂ ಹೆಚ್ಚು ಹಳ್ಳಿಯ ಜನರು ಕುಡಚಿಗೆ ಬರಬೇಕಾದರೆ ಸೇತುವೆಯನ್ನು ಅವಲಂಬಿಸಿದ್ದಾರೆ. ಹಾಗೂ ಅಜಿತ್ ಬಾನೆ,ಲವಡೆಲ, ಡಿಸಿ ದರೂ-ರೆ, ಬಿ.ಶಂಕರಾನಂದ ಪದವಿ ಪೂರ್ವ ಹಾಗೂ ಪದವಿ ಕಾಲೇಜೀನ ಸುಮಾರು 2000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸೇತುವೆಯನ್ನು ಅವಲಂಬಿಸಿರುತ್ತಾರೆ. ಹೊಸ ಸೇತುವೆ ಸಂಪೂರ್ಣ ಸಂಚಾರಕ್ಕೆ ಮುಕ್ತವಾಗದೆ ಹಳೆ ಸೇತುವೆ ಧ್ವಂಸಗೊಳಿಸುವುದರಿಂದ ಮಕ್ಕಳು ಸಾರ್ವಜನಿಕರು 500ಮೀಟರ ಕ್ರಮಿಸುವ ರಸ್ತೆಯ ಬದಲು ಮೂರು ಕಿ.ಮೀ. ಕ್ರಮಿಸುವ ಅನಿವಾರ್ಯವಾಗುತ್ತದೆ. ಸದ್ಯ ಕಳೆದ ವಾರದಿಂದ ಸತತವಾಗಿ ಜಿಟಿಜಿಟಿ ಮಳೆ ಇದ್ದು ಮಹಾರಾಷ್ಟದ ಪಶ್ಚಿಮ ಘಟ್ಟದಲ್ಲಿ ಧಾರಾಕಾರ ಮಳೆಯಾಗುತ್ತಿದ್ದರಿಂದ ಕೃಷ್ಣಾ ನದಿ ಮೇಲ್ಸೇತುವೆ ಮುಳುಗುವ ಹಾಗೂ ಪ್ರವಾಹ ಭೀತಿ ಕೂಡ ಜನರಲ್ಲಿ ಕಾಡುತ್ತಿದೆ, ಪ್ರವಾಹ ಬಂದಲ್ಲಿ ಕುಡಚಿ ಸುತ್ತಮುತ್ತಲಿನ ಗ್ರಾಮಗಳು ಕುಡಚಿ ಪಟ್ಟಣವನ್ನೆ ಅವಲಂಬಿಸಿರುವುದರಿಂದ ಸಮಸ್ಯೆ ದ್ವಿಗುಣವಾಗುವಲ್ಲಿ ಎರಡು ಮಾತಿಲ್ಲ ಕಾರಣ ರೈಲ್ವೆ ಇಲಾಖೆ ಕೂಡಲೇ ಹೊಸ ಸೇತುವೆ ಸಂಚಾರಕ್ಕೆ ಮುಕ್ತವಾಗುವ ಮೊದಲು ಹಳೆಯ ಸೇತುವೆ ಧ್ವಂಸಗೊಳಿಸುವ ವಿಚಾರ ಕೈಬಿಟ್ಟು ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ, ಪ್ರಯಾಣಿಕರಿಗೆ ಹಾಗೂ ವ್ಯಾಪಾರಸ್ಥರಿಗೆ ಅನುಕೂಲ ಮಾಡಿಕೊಡಬೇಕು ಎಂದು ಕುಡಚಿ ಸಮಸ್ತ ನಾಗರಿಕರು, ಕುಡಚಿ ಮರ್ಚೆಂಟ್ ಅಸೋಸಿಯೇಷನ್, ಶಾಲಾ ಕಾಲೇಜುಗಳು ಉಪ ತಹಶೀಲ್ದಾರ್ ಎಸ್.ಜಿ.ದೊಡಮಣಿ, ರೈಲ್ವೆ ಇಲಾಖೆ ಅಭಿಯಂತರ ಮೊಹ್ಮದ್ ಮೂಲಕ ಪಿಡಬ್ಲ್ಯೂಡಿ ಎಇಇ ರಾಯಬಾಗ, ಕುಡಚಿ ಎಸ್.ಇಇ ಕುಡಚಿ ಇವರಿಗೆ ಮನವಿ ಸಲ್ಲಿಸಿದರು. ಎರಡ್ಮೂರು ದಿನಗಳಲ್ಲಿ ಲಿಖಿತ ಉತ್ತರ ನೀಡದಿದ್ದಲ್ಲಿ ಮಿರಜ-ಜಮಖಂಡಿ ರಸ್ತೆ ತಡೆದು ಉಗ್ರ ಹೋರಾಟ ಕೈಗೊಳ್ಳಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಅಲ್ಲಾವುದ್ದೀನ್ ರೋಹಿಲೆ, ಹಮೀದ್ದಿ ರೋಹಿಲೆ, ಮುಸ್ತಾಕ್ ಬಾಗಶಿರಾಜ, ರತ್ನಂಜಯ ಕದ್ದು, ಸಾಹೇಬಲಾಲ ರೋಹಿಲೆ, ಶಾಂತಾರಾಂ ಸಣ್ಣಕ್ಕಿ, ಸಚೀನ ಮನಗುತ್ತಿ, ಶ್ರೀಶೈಲ ದರೂರೆ,ಸಾದೀಕ ರೋಹಿಲೆ, ಮುಷ್ಟೀಕ ಜಿನ್ನಾಬಡೆ, ಏಜಾಜ್ ಬಿಚ್ಚು, ಪುರಸಭೆ, ಗ್ರಾಮ ಪಂಚಾಯಿತ ಸದಸ್ಯರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಶಾಲಾ ಕಾಲೇಜುಗಳ ಸಹಸ್ರಾರು ವಿದ್ಯಾರ್ಥಿಗಳು, ಗ್ರಾಮಸ್ಥರು ಭಾ-ಗಿಯಾಗಿದ್ದರು.

ಕುಡಚಿ ಪಿಎಸ್‌ಐ ಮಾಳಪ್ಪಾ ಪೂಜಾರಿ, ಸಿಬ್ಬಂದಿಗಳಾದ ಸತೀಶ್ ಡಂಗ್ಗೆಣ್ಣವರ, ಅರೀಫ ಮುದ್ನಾಯಾಳ ಸೇರಿದಂತೆ ಇನ್ನಿತರ ಸಿಬ್ಬಂದಿಗಳು ಸೂಕ್ತ ಭದ್ರತೆ ಒದಗಿಸಿದರು.

ಬೆಳಗಾವಿ: ಬೆಳಗಾವಿ ಲಿಂಗಾಯಿತ ಮಹಿಳಾ ಸಮಾಜವು ನೂತನವಾಗಿ ಪದಗ್ರಹಣಗೊಂಡವರಿಗಾಗಿ ಶಿವಬಸವ ನಗರದ ಲಿಂಗಾಯಿತ ಭವನದಲ್ಲಿ ಅಧಿಕ- ಅಧ್ಯಾತ್ಮ ಕಾರ್ಯಕ್ರಮವನ್ನು ಹಮ್ಮಿಕೊಂಡಿತು. ಶೇಗುಣಸಿ ವಿರಕ್ತ ಮಠದ ಡಾ. ಮಹಾಂತಪ್ರಭು ಮಹಾಸ್ವಾಮಿಗಳು ಕಾರ್ಯಕ್ರಮವನ್ನು ಉದ್ಘಾಟಿಸಿ ಆಧ್ಯಾತ್ಮಿಕ ಪ್ರವಚನವನ್ನು ನೀಡಿದರು.

ಬೆಳಗಾವಿ: ಬೆಳಗಾವಿ ನಗರದ ಉದ್ಯಮಬಾಗ ಪೊಲೀಸರು ವ್ಯಕ್ತಿಗೆ ಥಳಿಸಿದ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದ ವಿಡಿಯೋದಲ್ಲಿದ್ದ ವ್ಯಕ್ತಿ ವಿಕಲಚೇತನ. ಇಷ್ಟೊಂದು ಕ್ರೌರ್ಯತನ ಮೆರದ ಪೊಲೀಸರ ವರ್ತನೆಗೆ ಸಾರ್ವಜನಿಕರು ಹಿಡಿಶಾಪ ಹಾಕುತ್ತಿದ್ದಾರೆ.

ಬೆಳಗಾವಿ: ಬೆಳಗಾವಿ ಜಿಲ್ಲೆಯಲ್ಲಿ ಪ್ರತಿವರ್ಷ ಮಳೆಗಾಲದಲ್ಲಿ ಕೆಳಹಂತದ ಸೇತುವೆಗಳು ಮುಳುಗಡೆಯಾಗುತ್ತವೆ. ಆದ್ದರಿಂದ ಜನರಿಗೆ ಅನುಕೂಲವಾಗುವಂತೆ ಶಾಶ್ವತ ಪರ್ಯಾಯ ಮಾರ್ಗ ನಿರ್ಮಾಣದ ಸಾಧ್ಯತೆಗಳನ್ನು ಪರಿಶೀಲಿಸಿ ವರದಿ ಕಳಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದರು.

# ಮನೆಹಾನಿ ತಕ್ಷಣವೇ ಸಮೀಕ್ಷೆ ನಡೆಸಲು ಕಟ್ಟುನಿಟ್ಟಿನ ಪರ್ವೆಜ್ ಸೂಚನೆ

## ಪ್ರವಾಹ ಹಾನಿ ತಡೆಗಟ್ಟಲು ಆದ್ಯತೆ ನೀಡಬೇಕು: ಮರುಬಿತ್ತನೆಗೆ ಬೀಜ ಪೂರೈಕೆಗೆ ಸೂಚನೆ

ಕನ್ನಡಮ್ಮ ಸುದ್ದಿ

ಬೆಳಗಾವಿ: ನದಿಗಳ ಒಳಹರಿವು, ಮಳೆಯ ಪ್ರಮಾಣ, ಜಲಾಶಯ ಮಟ್ಟ ಮತ್ತು ಮಹಾರಾಷ್ಟದಿಂದ ಬಿಡುವ ನೀರಿನ ಪ್ರಮಾಣ ಇವುಗಳ ಮೇಲೆ ನಿಗಾವಹಿಸುವುದರಿಂದ ಅತ್ಯಂತ ವೈಜ್ಞಾನಿಕವಾಗಿ ಮತ್ತು ಪರಿಣಾಮಕಾರಿಯಾಗಿ ಪ್ರವಾಹ ನಿರ್ವಹಣೆಯನ್ನು ಮಾಡಬಹುದು. ಆದ್ದರಿಂದ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಇವುಗಳ ಮೇಲೆ ನಿಗಾ ವಹಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಅಂಜುಮ್ ಪರ್ವೇಜ್ ತಿಳಿಸಿದರು.

ಗುರುವಾರ ಅತಿವೃಷ್ಟಿಯಿಂದ ಬಾಧಿತಗೊಂಡಿರುವ ಗ್ರಾಮಗಳು ಮತ್ತು ಕಾಳಜಿ ಕೇಂದ್ರಕ್ಕೆ ಭೇಟಿ ನೀಡಿದ ಬಳಿಕ ಚಿಕ್ಕೋಡಿಯ ಲೋಕೋಪಯೋಗಿ ಇಲಾಖೆಯ ಸಭಾಂಗಣದಲ್ಲಿ ನಡೆದ ಜಿಲ್ಲಾಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.



ಮಳೆಯ ಪ್ರಮಾಣ ಮತ್ತು ಮಹಾರಾಷ್ಟದಿಂದ ನೀರು ಬಿಡುಗಡೆ ಕುರಿತು ಅಲ್ಲಿಯ ಅಧಿಕಾರಿಗಳೊಂದಿಗೆ ಸತತ ಸಂಪರ್ಕದಲ್ಲಿದ್ದುಕೊಂಡು ಸಮನ್ವಯತೆಯಿಂದ ಕೆಲಸ ಮಾಡಬೇಕು ಎಂದು ತಿಳಿಸಿದರು.

ಪ್ರವಾಹದಿಂದ ಉಂಟಾಗುವ ಮನೆಹಾನಿಯ ಸಮೀಕ್ಷೆಯನ್ನು ಯಾವುದೇ ಕಾರಣಕ್ಕೂ ವಿಳಂಬ ಮಾಡಬಾರದು. ಇದಲ್ಲದೇ ಮಾನವ ಜೀವಹಾನಿ ಹಾಗೂ ಪ್ರಾಣಿಗಳ ಜೀವಹಾನಿಯಾದಾಗ ತುರ್ತಾಗಿ ಪರಿಹಾರಧನವನ್ನು ನೀಡಲು ಕ್ರಮ ವಹಿಸಬೇಕು ಎಂದು ತಿಳಿಸಿದರು.

ಬೆಳಗಾವಿ ದೊಡ್ಡ ಜಿಲ್ಲೆಯಾಗಿರುವುದರಿಂದ ಪ್ರವಾಹದ ಸಂದರ್ಭದಲ್ಲಿ ಸ್ಥಳೀಯ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಎಲ್ಲ ಇಲಾಖೆಯ ಅಧಿಕಾರಿಗಳು ಸಮನ್ವಯದಿಂದ ಕೆಲಸ ಮಾಡುವ ಮೂಲಕ ಪ್ರವಾಹ ಪರಿಸ್ಥಿತಿಯ ಸಮರ್ಪಕ ನಿರ್ವಹಣೆಗೆ ಕೈಜೋಡಿಸಬೇಕು ಎಂದು ತಿಳಿಸಿದರು.

ಪ್ರವಾಹದ ಬಳಿಕ ಪುನರ್ವಸತಿ ಕಲ್ಪಿಸುವುದರ ಬದಲಾಗಿ ಮುಂಚಿತವಾಗಿಯೇ ಹಾನಿ ತಡೆಗಟ್ಟುವ ನಿಟ್ಟಿನಲ್ಲಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಆದ್ಯತೆ ನೀಡಬೇಕು.

ಪಿಡಿಓ, ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಿಗರು ಸೇರಿದಂತೆ ಸ್ಥಳೀಯ ಅಧಿಕಾರಿಗಳು ಪ್ರತಿಯೊಂದು ಗ್ರಾಮಗಳಿಗೆ ಭೇಟಿ ನೀಡಿ ಶಿಥಿಲಗೊಂಡಿರುವ ಮನೆಗಳನ್ನು ಪರಿಶೀಲಿಸಿ ಕುಟುಂಬಗಳಿಗೆ ಈ ಬಗ್ಗೆ ಎಚ್ಚರಿಕೆ ನೀಡಬೇಕು.

ಸಾಧ್ಯವಿರುವ ಕಡೆ ಪರ್ಯಾಯ ವ್ಯವಸ್ಥೆ ಕಲ್ಪಿಸಲು ಪ್ರಯತ್ನಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಅಂಜುಮ್ ಪರ್ವೇಜ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

### ಬಿತ್ತನೆ ಬೀಜ-ಗೊಬ್ಬರ ಪೂರೈಕೆಗೆ ಕ್ರಮ: ಜಿಲ್ಲಾಧಿಕಾರಿ ನಿತೇಶ್ ಪಾಟೀಲ

ಸದ್ಯಕ್ಕೆ 1.61 ಲಕ್ಷ ಕ್ಯೂಸೆಕ್ ನೀರು ಆಲಮಟ್ಟಿ ಜಲಾಶಯದ ಒಳಹರಿವು ಇದೆ. 2.50 ಲಕ್ಷ ಕ್ಯೂಸೆಕ್ ಒಳಹರಿವು ಇದ್ದರೆ ಮಾತ್ರ ಪ್ರವಾಹ ಭೀತಿ ಎದುರಾಗುತ್ತದೆ. ಸದ್ಯಕ್ಕೆ ಅಷ್ಟೊಂದು ಒಳಹರಿವು ಇರುವುದಿಲ್ಲ. ಆದ್ದರಿಂದ ಪ್ರವಾಹ ಭೀತಿ ಸದ್ಯಕ್ಕಿಲ್ಲ ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ತಿಳಿಸಿದರು.

ಜಿಲ್ಲೆಯಲ್ಲಿ 30 ಕೆಳಹಂತದ ಸೇತುವೆಗಳು ಮುಳುಗಡೆಯಾಗಿವೆ. ಎಲ್ಲ ಕಡೆ ಪರ್ಯಾಯ ಮಾರ್ಗಗಳಿವೆ. ಆದಾಗ್ಯೂ ಮುಖ್ಯಮಂತ್ರಿಗಳು ನೀಡಿರುವ ಸೂಚನೆ ಮೇರೆಗೆ ಶಾಶ್ವತ ಪರ್ಯಾಯ ಮಾರ್ಗ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗುತ್ತಿದೆ ಎಂದರು.

ಮಣ್ಣಿನ ಮನೆಗಳು ಕುಸಿಯುವ ಸಾಧ್ಯತೆಗಳು ಹೆಚ್ಚಾಗಿರುವುದರಿಂದ ಇಂತಹ ಮನೆಗಳಲ್ಲಿ ವಾಸಿಸುವ ಕುಟುಂಬಗಳು ಸುರಕ್ಷಿತ ಮನೆಗಳಲ್ಲಿ ವಾಸಿಸಬೇಕು ಎಂದು ಪ್ರತಿಯೊಂದು ಪಂಚಾಯಿತಿಗಳಲ್ಲಿ ಡಂಗುರದ ಮೂಲಕ ಅರಿವು ಮೂಡಿಸಲಾಗುತ್ತಿದೆ.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹರ್ಷಲ್ ಭೋಯರ್, ಪ್ರೊಬೇಷನರಿ ಐ.ಎ.ಎಸ್ ಅಧಿಕಾರಿ ಶುಭಂ ಶುಕ್ಲಾ, ಚಿಕ್ಕೋಡಿ ಉಪ ವಿಭಾಗಾಧಿಕಾರಿ ಮಾಧವ ಗಿತ್ತೆ ಸೇರಿದಂತೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಈಗಾಗಲೇ ಬಿತ್ತನೆ ಮಾಡಿ ಬೆಳೆಹಾನಿಯಾಗಿರುವುದರಿಂದ ಕೆಲ ರೈತರು ಮತ್ತೊಮ್ಮೆ ಬಿತ್ತನೆ ಬೀಜ ಒದಗಿಸುವಂತೆ ಕೋರುತ್ತಿದ್ದಾರೆ. ಆದ್ದರಿಂದ ಅಂತಹ ರೈತರಿಗೆ ಅಗತ್ಯವಿರುವ ಬಿತ್ತನೆ ಬೀಜಗಳನ್ನು ಒದಗಿಸಬೇಕು ಎಂದು ಅಂಜುಮ್ ಪರ್ವೇಜ್ ಅವರು ಕೃಷಿ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲೆಯಲ್ಲಿ ಶೇ.100 ರಷ್ಟು ಬಿತ್ತನೆ ಆಗಬೇಕು. ಯಾವುದೇ ಕಾರಣಕ್ಕೂ ರೈತರಿಗೆ ಬೀಜ ಪೂರೈಕೆಯಲ್ಲಿ ತೊಂದರೆಯಾಗಬಾರದು. ಆದ್ದರಿಂದ ಅಗತ್ಯ ಬೀಜ-ಗೊಬ್ಬರಗಳ ದಾಸ್ತಾನು ಇಟ್ಟುಕೊಳ್ಳಬೇಕು ಎಂದು ಹೇಳಿದರು.

# ಲಿಂಗಾಯತ ಸಮಾಜದ ನೂತನ ಅಧಿಕಾರಿಗಳ ಪದಗ್ರಹಣ

ಬೆಳಗಾವಿ: ಬೆಳಗಾವಿ ಲಿಂಗಾಯಿತ ಮಹಿಳಾ ಸಮಾಜವು ನೂತನವಾಗಿ ಪದಗ್ರಹಣಗೊಂಡವರಿಗಾಗಿ ಶಿವಬಸವ ನಗರದ ಲಿಂಗಾಯಿತ ಭವನದಲ್ಲಿ ಅಧಿಕ-ಅಧ್ಯಾತ್ಮ ಕಾರ್ಯಕ್ರಮವನ್ನು ಹಮ್ಮಿಕೊಂಡಿತು. ಶೇಗುಣಸಿ ವಿರಕ್ತ ಮಠದ ಡಾ. ಮಹಾಂತಪ್ರಭು ಮಹಾಸ್ವಾಮಿಗಳು ಕಾರ್ಯಕ್ರಮವನ್ನು ಉದ್ಘಾಟಿಸಿ ಆಧ್ಯಾತ್ಮಿಕ ಪ್ರವಚನವನ್ನು ನೀಡಿದರು.

ಧರ್ಮದ ಕುರಿತು ಮಾತನಾಡುತ್ತಾ, ನಿಜವಾದ ಧರ್ಮವೆಂದರೆ ಪರರ ಕಷ್ಟಗಳಿಗೆ ನೆರವಾಗುವುದು, ಕಷ್ಟದಲ್ಲಿರುವವನ ಕಣ್ಣೀರು ಒರೆಸುವುದೇ ನಿಜವಾದ ಧರ್ಮ. ಸಕಲ ಪ್ರಾಣಿಗಳಲ್ಲಿ ಪ್ರೀತಿ ಅಂತ ಕರಣ ತೋರಿಸುವುದರ ಮೂಲಕ ಮನುಷ್ಯ ತನ್ನ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬೇಕು. ಮನುಷ್ಯ ಜೀವನದ ಉನ್ನತಿಗೆ ಶರಣ ಸಾಹಿತ್ಯವು ಮಾರ್ಗವನ್ನು ತೋರಿಸುತ್ತದೆ. ಶರಣರ ನುಡಿಗಳು ನಮ್ಮೆಲ್ಲರನ್ನು ಸನ್ಮಾರ್ಗದಲ್ಲಿ ಸಾಗಿಸುತ್ತದೆ. ಶರಣ ಸಾಹಿತ್ಯವನ್ನು ಸಮೀಕರಿಸಿಕೊಂಡು ಇವತ್ತು ನಾವೆಲ್ಲರೂ ಬದುಕಬೇಕಾಗಿದೆ. ಇಂದು ನಾವು ಚಿಕ್ಕ ಮಕ್ಕಳಿಗೆ, ಯುವ ಜನತೆಗೆ ಧರ್ಮದ ತಿರುಳನ್ನು ತಿಳಿಸಬೇಕಾಗಿದೆ. ಅವರಲ್ಲಿ ನಮ್ಮ ಸಂಸ್ಕೃತಿಯ ಬೇರುಗಳು ಆಳವಾಗಿ ನೆಲೆವೂರುವಂತೆ ಮಾಡಬೇಕು. ಹಾಗಾಗಿ ಇಂತಹ ಕಾರ್ಯಕ್ರಮಗಳು ಮೇಲಿಂದ ಮೇಲೆ ಜರುಗಬೇಕು ಎಂದರು. ಇಂತಹ ವಿಶೇಷ ಕಾರ್ಯಕ್ರಮಗಳನ್ನು ಲಿಂಗಾಯಿತ ಮಹಿಳಾ ಸಮಾಜದ ಮೂಲಕ ಮಾಡುತ್ತ, ಸಮಾಜಮುಖಿಯಾಗಿ ಸಂಸ್ಥೆಯನ್ನು ನಡೆಸುತ್ತಿರುವ ಸಂಸ್ಥಾಪಕಿ ಶೈಲಜಾ ಬಿಂಗೆಯವರನ್ನು ಅಭಿನಂದಿಸಿದರು.

ಹಾವೇರಿ ವಿಶ್ವವಿದ್ಯಾಲಯದಲ್ಲಿ ಮೌಲ್ಯಮಾಪನ ಕುಲ ಸಚಿವೆಯಾಗಿ ನಿಯೋಜನೆಗೊಂಡ ಡಾ. ವಿಜಯಲಕ್ಷ್ಮಿ, ತಿರ್ಲಾಪುರ್ ಪುಟ್ಟಿ ಹಾಗೂ ಆಲ್ ಇಂಡಿಯಾ ಲೆವೆಲ್ ನಲ್ಲಿ ಸಾಧನೆಗೈದ ಕುಮಾರಿ ಪ್ರೀತಿ ಅವರನ್ನು ಸತ್ಕರಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ. ವಿಜಯಲಕ್ಷ್ಮಿ,



ತಿರ್ಲಾಪುರ್ ಪುಟ್ಟಿ ಅವರು ಪುರುಷ ಪ್ರಧಾನವಾದ ಕುಟುಂಬದಲ್ಲಿ ಪ್ರತಿಯೊಬ್ಬ ಪುರುಷನು ಮಹಿಳೆಯರ ಉನ್ನತಿಗೆ ಸಹಕರಿಸಬೇಕು. ತಂದೆ, ಅಣ್ಣ, ತಮ್ಮ, ಗಂಡ, ಮಾವ,.. ಎಲ್ಲರಾದಿಯಾಗಿ ಮಹಿಳೆಯ ವಿದ್ಯಾಭ್ಯಾಸಕ್ಕೆ ಪೂರಕವಾದಂತ ವಾತಾವರಣವನ್ನು ಸೃಷ್ಟಿ ಮಾಡಬೇಕು, ಅಂದಾಗ ಮಾತ್ರ ಮಹಿಳೆಯರು ಉನ್ನತವಾದ ಸ್ಥಾನಗಳನ್ನು ಅಲಂಕರಿಸಲು ಸಾಧ್ಯ ಎಂದರು.

ನಾಗನೂರು ಮಠದ ಡಾ ಅಲ್ಲಮಪ್ರಭು ಮಹಾ ಸ್ವಾಮೀಜಿಯವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಾ, ಈ ಮಹಿಳಾ ಸಮಾಜದಲ್ಲಿ ಐದು ನೂರಕ್ಕೂ ಹೆಚ್ಚು ಮಹಿಳಾ ಸದಸ್ಯರು ಇದ್ದು, ಪ್ರತಿಯೊಬ್ಬ ಸದಸ್ಯೆಯು ಒಂದೊಂದು ಸಂಸ್ಥೆ ಇದ್ದ ಹಾಗೆ. ಹಾಗಾಗಿ ಒಟ್ಟು 500 ಸಂಸ್ಥೆಗಳು ಇಲ್ಲಿ ಸಮಾಜಮುಖಿಯಾಗಿ ಕೆಲಸವನ್ನು ನಿರ್ವಹಿಸುತ್ತಿವೆ. ಅಂತೆಯೇ ಸಮಾಜದ ಪ್ರಗತಿ, ಕುಟುಂಬದ ಉದ್ಧಾರ ಮಹಿಳೆಯಿಂದಲೇ ಸಾಧ್ಯ ಎಂದು ಆಶೀರ್ವಚನ ನೀಡಿದರು.

ಲಿಂಗಾಯಿತ ಮಹಿಳಾ ಸಮಾಜ ಅಧ್ಯಕ್ಷೆಯಾದ ನೈನಾ ಗಿರಿಗೌಡರ್ ಸ್ವಾಗತಿಸಿದರು, ಸಂಸ್ಥಾಪಕಿ ಶೈಲಜಾ ಬಿಂಗೆ ಪ್ರಾಸ್ತಾವಿಕ ನುಡಿಗಳನ್ನು ಆಡಿದರು. ಸಂಘದ ಕಾರ್ಯದರ್ಶಿ ಕಾವೇರಿ ಕಿಲಾರಿ ನಿರೂಪಿಸಿದರು. ಲಿಂಗಾಯಿತ ಸಮಾಜದ ಸದಸ್ಯರು ಪ್ರಾರ್ಥನೆ ಸಲ್ಲಿಸಿದರು.

ಸಹಕಾರ್ಯದರ್ಶಿ ಸುಕೇಶಿನಿ ಪಾಟೀಲ್ ಶರಣು ಸಮರ್ಪಣೆಯನ್ನು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಸಂಘದ ಸದಸ್ಯರು, ಭಕ್ತರು ಉಪಸ್ಥಿತರಿದ್ದರು.

# ಜಿಲ್ಲೆಯ ಫಾಲ್ಸ್ ಗಳ ಭೇಟಿಗೆ ನಿರ್ಬಂಧ

ಬೆಳಗಾವಿ: ಜಿಲ್ಲೆಯಾದ್ಯಂತ ಹಲವಾರು ದಿನಗಳಿಂದ ವ್ಯಾಪಕವಾಗಿ ಮಳೆಯಾಗುತ್ತಿರುವುದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲೆಯ ಎಲ್ಲ ವಾಟರ್ ಫಾಲ್ಸ್ ಗಳ ಸಮೀಪ ಸಾರ್ವಜನಿಕರು ತೆರಳುವುದನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿರುತ್ತದೆ ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ತಿಳಿಸಿದ್ದಾರೆ.

ಫಾಲ್ಸ್ ಸಮೀಪಕ್ಕೆ ತೆರಳಿದಾಗ ಕಾಲುಜಾರಿ ಬಿದ್ದು ಅನೇಕ ಜನರು ಪ್ರಾಣ ಕಳೆದುಕೊಂಡ ಘಟನೆಗಳು ರಾಜ್ಯದಾದ್ಯಂತ ಸಂಭವಿಸುತ್ತಿರುವುದು ವರದಿಯಾಗಿದೆ. ಇಂತಹ ದುರ್ಘಟನೆಗಳನ್ನು ತಪ್ಪಿಸುವ ಉದ್ದೇಶದಿಂದ ಜಿಲ್ಲೆಯಲ್ಲಿರುವ ಫಾಲ್ಸ್ ಸಮೀಪ ತೆರಳುವುದಕ್ಕೆ ನಿರ್ಬಂಧ ವಿಧಿಸಲಾಗಿದೆ. ಇದಲ್ಲದೇ ಅರಣ್ಯ ಪ್ರದೇಶದಲ್ಲಿರುವ ಫಾಲ್ಸ್ ಗಳಿಗೆ ಯಾವುದೇ ಸಾರ್ವಜನಿಕರು ಭೇಟಿ ನೀಡುವುದನ್ನು ಈಗಾಗಲೇ ನಿರ್ಬಂಧಿಸಲಾಗಿರುತ್ತದೆ.

ಗೋಕಾಕ ಸೇರಿದಂತೆ ಜಿಲ್ಲೆಯ ಕೆಲವು ಪ್ರಸಿದ್ಧ ಫಾಲ್ಸ್ ಗಳನ್ನು ಪ್ರವಾಸಿಗರು ದೂರದಿಂದ ವೀಕ್ಷಿಸಲು ಅವಕಾಶ ಕಲ್ಪಿಸಲಾಗುತ್ತದೆ ಎಂದು ತಿಳಿಸಿದ್ದಾರೆ. ಫಾಲ್ಸ್ ಬಳಿ ನಿಗಾ ವಹಿಸಲು ಅರಣ್ಯ ಇಲಾಖೆಯ ಸಿಬ್ಬಂದಿ, ಪ್ರವಾಸಿಮಿತ್ರರು, ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿರುತ್ತದೆ.

ಫಾಲ್ಸ್ ವೀಕ್ಷಣೆಗೆ ಆಗಮಿಸುವ ಪ್ರವಾಸಿಗರು ಕೂಡ ಅಪಾಯಕಾರಿ ಸ್ಥಳಗಳ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಮನವಿ ಮಾಡಿಕೊಂಡಿದ್ದಾರೆ.

## ರಾಜ್ಯವನ್ನು ತಾಲಿಬಾನ ಮಾಡಲು ಹೊರಟ ಕಾಂಗ್ರೆಸ್ ಸರಕಾರ: ಸಂಜಯ

ಬೆಳಗಾವಿ: ಶಾಂತಿಯ ನಾಡು ಕರ್ನಾಟಕ ರಾಜ್ಯವನ್ನು ತಾಲಿಭಾನ ಮಾಡಲು ಹೊರಟ ಕಾಂಗ್ರೇಸ್ ಸರ್ಕಾರ ಕೆಲವೆ ದಿನಗಳಲ್ಲಿ ಜನಮನ್ನಣೆ ಕಳೆದುಕೊಳ್ಳಲಿದೆ ಎಂದು ಬೆಳಗಾವಿ ಗ್ರಾಮಾಂತರ ಬಿಜೆಪಿ ಜಿಲ್ಲಾಧ್ಯಕ್ಷ ಸಂಜಯ ಪಾಟೀಲ ಅಕ್ರೋಶ ವ್ಯಕ್ತಪಡಿಸಿದ್ದಾರೆ.

ವಿದ್ಯಾಸಂಸ್ಥೆಯಲ್ಲಿ ವಿದ್ಯೆಯನ್ನ ಕಲೆಯುವದನ್ನ ಬಿಟ್ಟು ಸಹವರ್ತಿ ವಿದ್ಯಾರ್ಥಿನಿಯರ ಖಾಸಗಿ ಸ್ಥಳದಲ್ಲಿ ವಿಡಿಯೋ ರಿಕಾರ್ಡ್ ಮಾಡುವ ಗಂಭೀರ ಅರೋಪವನ್ನು ಮಕ್ಕಳ ಆಟ ಎನ್ನುತ್ತಿರುವ ಇವರ ನಿಲುವು ಎನು? ಡಿ.ಜೆ.ಹಳ್ಳಿ ಹಾಗೂ ಕೆ.ಜಿ.ಹಳ್ಳಿ ಪ್ರಕರಣದಲ್ಲಿ ದೊಂಬೆ ಎಬ್ಬಿಸಿ ಪೋಲಿಸ ಠಾಣೆಗೆ ಬೆಂಕಿ ಹಚ್ಚಿ ನಾಗರಿಕ ಸಮಾಜಕ್ಕೆ ಭಯವನ್ನುಂಟು ಮಾಡಿದವರು ಅಮಾಯಕರು ಎಂದು ಹೇಳುವ ಇವರ ಬುದ್ದಿಗೆ ಏನು ಹೇಳಬೇಕು. ಕರ್ನಾಟಕವನ್ನು ತಾಲಿಬಾನ ರಾಜ್ಯ ಮಾಡಲು ಹೋರಟಿರುವ ಇವರ ಕ್ರಮವನ್ನು ಬಿಜೆಪಿ ಉಗ್ರವಾಗಿ ಖಂಡಿಸುತ್ತದೆ.

ಉಡುಪಿಯ ಘಟನೆಯಿಂದ ದೇಶವೆ ತಲೆ ತಗ್ಗಿಸುವಂತಾಗಿದೆ. ಇಂತಹ ಘಟನೆಯನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಮುಚ್ಚಿ ಹಾಕಲು ಎಲ್ಲಾ ರೀತಿಯ ಸಕಲ ಪ್ರಯತ್ನ ನಡೆಸುತ್ತಿರುವದು ಖಂಡನೀಯ. ತನ್ನ ಮತ ಒಲೈಕೆಯ ರಾಜಕಾರಣಕ್ಕಾಗಿ ಹಿಂದೂ ವಿದ್ಯಾರ್ಥಿನಿಯರ ಮೇಲೆ ನಡೆದ ಮಾನಹರಣದ ಪ್ರಕರಣವನ್ನು ಪೊಲೀಸರ ಮೇಲೆ ಒತ್ತಡ ಪೂರ್ವಕವಾಗಿ ತಿರುಚುತ್ತಿದೆ.

ಜಿಹಾದಿ ಮನಸ್ಥಿತಿಯ ಮೂವರು ವಿದ್ಯಾರ್ಥಿನಿಯರ ದುರ್ವರ್ತನೆ ಬಗ್ಗೆ ಕಾಲೇಜು ಆಡಳಿತ ಮಂಡಳಿ ಪೊಲೀಸರಿಗೆ ಈ ಮೊದಲೇ ತಿಳಿಸಿದ್ದು ಕಾಲೇಜಿನಿಂದ ಅಮಾನತು ಮಾಡಲಾಗಿತ್ತು. ಆದರೆ, 24 ಗಂಟೆಗಳ ನಂತರ ಪ್ರಕರಣಕ್ಕೆ ಹೊಸ ತಿರುವನ್ನೇ ಕೊಡಲಾಗಿದ್ದು, ಈ ವಿಡಿಯೋಗಳು ಎಲ್ಲಿಯೂ ಹರಿದಾಡಿಯೇ ಇಲ್ಲ ಎಂದು, ವಿಡಿಯೋ ಮಾಡಿದ್ದು "ಮಕ್ಕಳಾಟ"ಕ್ಕಾಗಿ ಎಂದು ಈ ಕೇಸ್ ಅನ್ನು ತರಾತುರಿಯಲ್ಲಿ ಮುಚ್ಚಿ ಹಾಕಲಾಗುತ್ತಿದ

ಒದೂ ವಿದ್ಯಾರ್ಥಿನಿಯರ ವಿಡಿಯೋ ಆಗಿಲ್ಲ ಹೀಗಾಗಿ ಇದು ಅಪರಾಧವಲ್ಲ ಎಂದು ಸಿದ್ದರಾಮಯ್ಯರವರ ಸರ್ಕಾರ ಪೊಲೀಸರ ಮೇಲೆ ಒತ್ತಡ ಹಾಕಿ ಈ ಪ್ರಕರಣಕ್ಕೆ ತಿಲಾಂಜಲಿ ಇಡುತ್ತಿರುವದನ್ನು ನೋಡಿದರೆ ಪ್ರಜ್ಞಾವಂತ ನಾಗರಿಕರು ಈ ವಿಷಯವನ್ನು ಸುಕ್ಷ್ಮವಾಗಿ ಗಮನಿಸುತ್ತಿದೆ.



ಹಿಂದೂ ಯುವತಿಯರು ಶೌಚಾಲಯದಲ್ಲಿರುವಾಗ ವಿಡಿಯೋ ಮಾಡಿರುವದು ಅಪರಾಧ ಅಲ್ಲವೇ.?

ಪ್ರಕರಣದ ನಿಜವಾದ ಅಪರಾಧಿಗಳನ್ನು ಬಂಧಿಸಿ ಸಮಗ್ರ ತನಿಖೆ ಮಾಡುವ ಬದಲು ಮಾನಕ್ಕಾಗಿ ದೂರ ಕೊಡದ ಹಿಂದೂ ಯುವತಿಯ ಮನೆಗೆ ಪೋಲಿಸರ್ ಯಾವ ಪುರಷಾರ್ಥಕ್ಕೆ ತೆರಳಿದರು. ಅವರ ಪಾಲಕರ ಮೇಲೆ ಒತ್ತಡ ತರುವುದರ ಹಿಂದೆ ಇರುವ ಕಾಣದ ಕೈಗಳು ಯಾವುವು ಎನ್ನುವುದನ್ನು ಜನರಿಗೆ ತಿಳಿಸಬೇಕು.

ಆ ವಿಡಿಯೋ ಸಮಾಜಘಾತುಕರ ಕೈಗೆ ಸಿಕ್ಕರೆ ಮುಂದೆ ನಡೆಯಬಹುದಾದ ಅನಾಹುತಗಳನ್ನು ತಡೆಯುವುದರಲ್ಲೂ ಸರ್ಕಾರ ವಿಫಲವಾಗಿದೆ.

ಕಾಂಗ್ರೆಸ್ ಸರ್ಕಾರ ತುಷ್ಟೀಕರಣ ರಾಜಕೀಯಕ್ಕಾಗಿ, ಜಿಹಾದಿ ಮನಸ್ಥಿತಿಗಳನ್ನು ರಕ್ಷಣೆ ಮಾಡುವುದಕ್ಕಾಗಿ ಈ ಪ್ರಕರಣವನ್ನು ಜಗತ್ತಿಗೆ ಬಯಲು ಮಾಡಿದ ಹಿಂದೂ ಯುವತಿಯ ಮನೆಗೆ ರಾತ್ರೋ ರಾತ್ರಿ ಪೊಲೀಸರನ್ನು ನುಗ್ಗಿಸಿ ಕಿರುಕುಳ ನೀಡುವ ಕೆಲಸ ಮಾಡಿದೆ.

ರಾಜ್ಯ ಸರ್ಕಾರ ಸಂಪೂರ್ಣವಾಗಿ ಪ್ರಕರಣವನ್ನು ಹಳ್ಳ ಹಿಡಿಸುವ ಕೆಲಸಕ್ಕೆ ಕೈ ಹಾಕಿರುವುದರಿಂದ ಈಗ ರಾಷ್ಟ್ರೀಯ ಮಹಿಳಾ ಆಯೋಗ ಖುದ್ದು ತನಿಖೆಗೆ ಇಳಿದಿದೆ.

ರಾಜ್ಯದಲ್ಲಿ ಮಹಿಳಾ ಸಬಲೀಕರಣದ ಬಗ್ಗೆ ಪುಂಖಾನುಪುಂಖವಾಗಿ ಪುಂಗಿ ಊದುವ ಸಿದ್ದರಾಮಯ್ಯರವರ ಸರ್ಕಾರ ಒಂದು ಕಣ್ಣಿಗೆ ಬೆಣ್ಣೆ ಮತ್ತೊಂದು ಕಣ್ಣಿಗೆ ಸುಣ್ಣ ಎರಚುವ ಕೆಲಸ ಮಾಡುತ್ತಿದೆ.

ಒಂದು ಕಡೆ ಹಿಂದೂ ಯುವತಿಯರ ಮೇಲೆ ನಡೆದ ದೌರ್ಜನ್ಯಗಳನ್ನು ಮುಚ್ಚಿಹಾಕುವ ಕೆಲಸ ಮಾಡುತ್ತಿದ್ದರೆ, ಮತ್ತೊಂದಡೆ ಜಿಹಾದಿ ಮನಸ್ಥಿತಿಯ ಸಮಾಜಘಾತುಕರನ್ನು ರಕ್ಷಣೆ ಮಾಡಿ ಪ್ರೋತ್ಸಾಹ ನೀಡುತ್ತಿರುವುದು ಸರ್ವ ಜನಾಂಗದ ಶಾಂತಿಯ ತೋಟಕ್ಕೆ ಬಹುದೊಡ್ಡ ಅಪಾಯತಂದೊಡ್ಡುತ್ತಿದೆ. ಸರ್ಕಾರ ನಿಷಪಕ್ಷ ಪಾತವಾಗಿ ಉಡಪಿ ಕಾಲೇಜು ಪ್ರಕರಣವನ್ನು ತನಿಖೆ ನಡಿಸಬೇಕು. ಅಪರಾಧ ಮನೋಭಾ ನೆಯುಳ್ಳ ಮಾನ ಹಾನಿಗೆ ಕಾರಣರಾದ ಮೂರು ಜನ ಯುವತಿಯರನ್ನ ಬಂಧಿಸಬೇಕು. ಡಿಜಿ ಹಳ್ಳಿ ಹಾಗೂ ಕೆಜಿ ಹಳ್ಳಿ ಪ್ರಕರಣದಲ್ಲಿ ಭಾಗಿಯಾದವರನ್ನು ಯಾವುದೆ ಕಾರಣಕ್ಕು ಶಿಕ್ಷಿಸದೆ ಬಿಡಬಾರದು. ಗಂಭೀರ ಪ್ರಕರಣವನ್ನು ಹಿಂಪಡೆದರೆ ರಾಜ್ಯಾಧ್ಯಂತ ಉಗ್ರ ಹೋರಾಟ ಮಾಡಬೇಕಾದಿತು ಎಂದಿದ್ದಾರೆ.

# ಉದ್ಯಮಬಾಗ ಪೊಲೀಸರು ಥಳಿಸಿದ್ದ ವ್ಯಕ್ತಿ ವಿಕಲಚೇತನ !

## ಊಟ ತರಲು ಹೋದ ವೇಳೆ ಹಲ್ಲೆ-ನಗರ ಜನತೆಯ ತೀವ್ರ ಆಕ್ರೋಶ

ಕನ್ನಡಮ್ಮ ಸುದ್ದಿ

ಬೆಳಗಾವಿ: ಬೆಳಗಾವಿ ನಗರದ ಉದ್ಯಮಬಾಗ ಪೊಲೀಸರು ವ್ಯಕ್ತಿಗೆ ಥಳಿಸಿದ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದ ವಿಡಿಯೋದಲ್ಲಿದ್ದ ವ್ಯಕ್ತಿ ವಿಕಲಚೇತನ. ಇಷ್ಟೊಂದು ಕ್ರೌರ್ಯತನ ಮೆರದ ಪೊಲೀಸರ ವರ್ತನೆಗೆ ಸಾರ್ವಜನಿಕರು ಹಿಡಿಶಾಪ ಹಾಕುತ್ತಿದ್ದಾರೆ.

ಪೊಲೀಸರು ಥಳಿಸಿದ ವ್ಯಕ್ತಿಯನ್ನು ನಿರಂಜನ ಚೌಗುಲೆ ಇತ ಒಬ್ಬ ವಿಕಲಚೇತನ ವ್ಯಕ್ತಿಯಾಗಿದ್ದಾನೆ. ಉದ್ಯಮಬಾಗ ಪೊಲೀಸ್ ಠಾಣೆಯ ಪಿಎಸ್ಐ ಸರ್ದಾರ್ ಮತ್ತಟ್ಟಿ ಹಾಗೂ ಮಲ್ಲಪ್ಪ ಪೂಜಾರಿ ಸೇರಿದಂತೆ ಇಬ್ಬರು ಪೊಲೀಸ್ ಪೇದೆಗಳು ಖಾನಾಪುರ ರಸ್ತೆಯಲ್ಲಿರುವ ಹೋಟೆಲ್ ಒಂದರಲ್ಲಿ ತಡರಾತ್ರಿ ಊಟ ತೆಗೆದುಕೊಂಡು ಮನೆಗೆ ಹೊರಟ್ಟಿದ್ದ ವಿಕಲಚೇತನ ನಿರಂಜನ ಚೌಗುಲೆ ಮೇಲೆ ದರ್ಪ ಮೆರೆದಿದ್ದ ಪೊಲೀಸರು ಆತನ ಬಳಿ ಇದ್ದ ಮೊಬೈಲ್ ಹಾಗೂ ಬೈಕ್ ನ್ನು ವಶಕ್ಕೆ ಪಡೆದು ನಡು ರಸ್ತೆಯಲ್ಲಿಯೇ ಲಾಠಿ ಹಾಗೂ ಬೂಟ್ ಏಟು ನೀಡಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆದ ವಿಡಿಯೋದಲ್ಲಿ ವಿಕಲಚೇತನ ಎಷ್ಟು ನರಳಾಡಿದರೂ ಬಿಡದ ಪೊಲೀಸರು ಮನಸೋ ಇಚ್ಛೆ ಥಳಿಸಿರುವುದು ಎಂಥವರ ಕರಳು ಹಿಂಡುವಂತಿದೆ.



ನಾನು ಅಂದು ಊಟ ಪಾರ್ಸಲ್ ತೆಗೆದುಕೊಳ್ಳಲು ಹೋಟೇಲ್‌ಗೆ ಹೋಗಿದ್ದೆ. ಊಟ ಕಟ್ಟಿಸಿಕೊಂಡು ಹೊರಡುವಾಗ ಪೋಲಿಸರು ಬಂದು ತಡೆದರು.

> ಉದ್ಯಮಬಾಗದಲ್ಲಿ ಪೊಲೀಸರು ಥಳಿಸಿದ್ದಾರೆ ಎನ್ನುತ್ತಿರುವ ವಿಡಿಯೋದಲ್ಲಿದ್ದ ವ್ಯಕ್ತಿ ವಿಕಲಚೇತನನಲ್ಲ. ಆತನ ಮೇಲೆಯೂ ಉದ್ಯಮಬಾಗ ಪೊಲೀಸ್ ಠಾಣೆಯಲ್ಲಿ ಸಾರ್ವಜನಿಕರು ದೂರು ದಾಖಲಿಸಿದ್ದಾರೆ. ಈ ಕುರಿತು ಎಸಿಪಿ ನೇತೃತ್ವದಲ್ಲಿ ತನಿಖೆ ನಡೆಸಲು ತಿಳಿಸಲಾಗಿದೆ.
>
> **-ಎಸ್.ಎನ್.ಸಿದ್ದರಾಮಪ್ಪ, ನಗರ ಪೊಲೀಸ್ ಆಯುಕ್ತ**

ಇಷ್ಟೊತ್ತಿಗೆ ಇಲ್ಲೇಕೆ ನಿಂತಿಯಾ ಎಂದು ಏಕಾಏಕಿ ಹಲ್ಲೆ ಮಾಡಲು ಶುರು ಮಾಡಿದರು. ನಾನು ಅಂಗವಿಕಲ, ಸರಿಯಾಗಿ ನಡೆಯಲು ಬರಲ್ಲ ಬಿಟ್ಟು ಬಿಡಿ ಎಂದು ಅಗಲಾಚಿದರೂ ಬಿಡದ ಪೊಲೀಸರು ಸುರಿಯುವ ಮಳೆಯಲ್ಲಿ ನೆಲಕ್ಕೆ ಕೆಡವಿ ಬೂಟಿನಿಂದ ಒದ್ದರು, ಎರಡು ಲಾಠಿ ಮುರಿಯುವವರೆಗೆ ಹೊಡೆದರು. ಕೈ ಮುಗಿದರೂ ಕೇಳಲಿಲ್ಲ, ಹೊಡೆದು ಮೊಬೈಲ್ , ಬೈಕ್ ಕಸಿದುಕೊಂಡು ಹೋದರು. ರಾತ್ರಿ ನಡೆಯಲಾಗದೇ ಬೀದಿಯಲ್ಲಿ ಮಲಗಿ, ಬೆಳಿಗ್ಗೆ ಮನೆಗೆ ಬಂದೆ

ನನ ಜೊತೆ ಪೊಲಿಸರು ಕೆಟ್ಟದ್ದಾಗಿ ನಡೆದುಕೊಂಡಿದ್ದಾರೆ. ನನ್ನ ಮೇಲೆ ಒಂದು ಅಪಘಾತದ ಪ್ರಕರಣ ಬಿಟ್ಟರೆ ಯಾವ ಪ್ರಕರಣವೂ ಇಲ್ಲ.ಘಟನೆ ನಡೆದ್ದಾಗ ಕುಡಿದಿದ್ದು ನಿಜ, ಟೈಂ ಸಹ ಹೆಚ್ಚಾಗಿತ್ತು, ಆದರೆ ಹೊಡೆಯುವಂತಹ ತಪ್ಪು ಮಾಡಿರಲಿಲ್ಲ ಎಂದು ನಿರಂಜನ ಚೌಗುಲೆ ಪೊಲೀಸರ ದೌರ್ಜನ್ಯದ ಬಗ್ಗೆ ಎಳೆಎಳೆಯಾಗಿ ಬಿಚ್ಚಿಟ್ಟರು.

ವಿಕಲಚೇತನನ ಬೈಕ್ ಸ್ಟಾರ್ಟ್ ಆಗದ ಹಿನ್ನೆಲೆಯಲ್ಲಿ ರಸ್ತೆಯಲ್ಲಿ ಬೈಕ್ ಕಿಕ್ ಹೊಡೆಯುವ ವೇಳೆ ಬಂದ ಪೊಲೀಸರು ಮನಸೋ ಇಚ್ಛೆ ಥಳಿಸಿದ್ದು ಯಾವ ನ್ಯಾಯ ?

# ಯುವಪಡೆಯಲ್ಲಿ ರಾಷ್ಟ್ರಾಭಿಮಾನವನ್ನು ತುಂಬಿ: ಡಾ. ನಿರ್ಮಲಾ ಬಟ್ಟಲ

ಬೆಳಗಾವಿ: ಸ್ಮಯಾ ಫೌಂಡೇಶನ್‌ದವರು ಕಾರ್ಗಿಲ್ ವಿಜಯೋತ್ಸವ ದಿನಾಚರಣೆಯನ್ನಿಂದು ಆಚರಿಸುವ ಮೂಲಕ ದೇಶಾಭಿಮಾನವನ್ನು ಮೆರೆದಿದ್ದಾರೆ. ನಮ್ಮ ಮುಂದಿನ ಪೀಳಿಗೆಯವರಲ್ಲಿ ರಾಷ್ಟ್ರಾಭಿಮಾನವನ್ನು ತುಂಬುವ ಕಾರ್ಯ ನಮ್ಮಿಂದಾಗಬೇಕಾಗಿದೆ. ತಾನು ತನ್ನದು ಎಂಬ ವಿಚಾರವನ್ನು ಬದಿಗಿಟ್ಟು ನಾನು ನನ್ನ ದೇಶ, ದೇಶದ ಅಭಿವೃದ್ಧಿಯ ಕುರಿತಾದ ಆಲೋಚನೆಗಳನ್ನ ನಮ್ಮ ಯುವಪಡೆಯಲ್ಲಿ ತುಂಬಬೇಕು ಎಂದು ಮನರಸ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ನಿರ್ಮಲಾ ಬಟ್ಟಲ ಇಂದಿಲ್ಲಿ ಹೇಳಿದರು.

ನಗರದ ಚೆನ್ನಮ್ಮ ವೃತ್ತದ ಬಳಿಯಿರುವ ಕನ್ನಡ ಸಾಹಿತ್ಯ ಭವನ ಸಭಾಭವನದಲ್ಲಿ ಸ್ಮಯಾ ಫೌಂಡೇಶನ್ ಕಾರ್ಗಿಲ್ ವಿಜಯ ದಿನಾಚರಣೆಯನ್ನು ಹಮ್ಮಿಕೊಂಡಿದ್ದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ.ನಿರ್ಮಲಾ ಬಟ್ಟಲ ಅವರು ಮೇಲಿನಂತೆ ಅಭಿಪ್ರಾಯ ಪಟ್ಟಲು.



ಈ ಕಾರ್ಯಕ್ರಮವು ತಮ್ಮ ಪ್ರಾಣ ಭಯವನ್ನು ತೊರೆದು ದೇಶಕ್ಕಾಗಿ ತಮ್ಮ ಜೀವವನ್ನೆ ಅರ್ಪಿಸಿರುವ ಯೋಧರಿಗೆ ಸಲ್ಲಿಸುತ್ತಿರುವ ಗೌರವವಾಗಿದೆ. ನಾವೆಲ್ಲರೂ ತಮ್ಮ ತಮ್ಮ ಮನೆಯಲ್ಲಿ ಸುರಕ್ಷಿತವಾಗಿರಲು ಮುಖ್ಯವಾಗಿ ಯೋಧರು ಕಾರಣವೆಂಬುದನ್ನು ಮರೆಯಬಾರದು ಎಂದು ಹೇಳಿದರು.

ಅತಿಥಿಗಳಾಗಿ ಆಗಮಿಸಿದ್ದ ಡಾ. ಪಾರ್ವತಿದೇವಿ ಪಾಟೀಲ ಮಾತನಾಡಿ, ವೀರಾಧಿವೀರರಿಗೆ ಜನ್ಮಕೊಟ್ಟ ರಾಷ್ಟ್ರವಿದು. ಹುಟ್ಟಿನೊಂದಿಗೆ ಮಕ್ಕಳಲ್ಲಿ ರಾಷ್ಟ್ರ ಭಕ್ತಿಯನ್ನು ಧಾರೆಯೆರೆದ ತಾಯಿಂದರ ನಾಡಿದು. ವೀರಯೋಧ ನನ್ನ ಮಗನಲ್ಲ ಭಾರತಾಂಬೆ ಪುತ್ರ ಎಂದು ಹೇಳುವ ರಾಷ್ಟ್ರಭಕ್ತಿಯನ್ನು ಹೊಂದಿರುವ ತಾಯಂದಿರ ನಾಡಿದು. ದೇಶದ ನೆಲ, ಜಲದ ರಕ್ಷಣೆಯಲ್ಲಿ, ವೀರಯೋಧರ ನಿರ್ಮಾಣದಲ್ಲಿ ಮಹಿಳೆಯರ ಪಾತ್ರವೂ ಮಹತ್ವದ್ದಾಗಿದೆ ಎಂದು ಹೇಳಿದರು.

ಎಸ್. ವಿ. ಎಮ್. ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಶ್ರೀಮತಿ ಹೇಮಾ ಕುಲಕರ್ಣಿ, ಇಂದಿನ ಜನರಲ್ಲಿ ದೇಶಾಭಿನ ಮರೆಯಾಗುತ್ತಿದ್ದು ಇಂತಹ ಕಾರ್ಯಕ್ರಮಗಳ ಅವಶ್ಯಕತೆಯಿದೆ. ಸ್ಮಯಾ ಸಂಘಟನೆ ಕಾರ್ಯ ಶ್ಲಾಘನೀಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ಉದ್ಘಾಟಕರಾಗಿ ಆಗಮಿಸಿದ್ದ ಕಾರ್ಗಿಲ್ ಯದ್ಧದಲ್ಲಿ ಭಾಗಿಯಾಗಿದ್ದ ಯೋಧ ಸತೀಶ ಶೆಟ್ಟಿಯವರನ್ನು ಸಂಘಟಕ, ಲೇಖಕ ಗುಂಡೇನಟ್ಟಿ ಮಧುಕರ ಮಾಲೆ ಹಾಕಿ ಫಲಪುಷ್ಪ ಮತ್ತು ನೆನಪಿನ ಕಾಣಿಕೆ ನೀಡಿ ಗೌರವಿಸಿದರು.

ಶ್ರೀಮತಿ ವಿಜಯಲಕ್ಷ್ಮೀ ಕುಲಕರ್ಣಿ ಅಧ್ಯಕ್ಷತೆಯನ್ನು ವಹಿಸಿದ್ದರು. ಪ್ರೀತಿ ಕುಲಕರ್ಣಿ ನಿರೂಪಿಸಿದರು. ಸಂಜೀವ ಕುಲಕರ್ಣಿ, ವನಿತಾ ಲೋಕಾಪುರ, ಪ್ರೊ. ಜಿ. ಕೆ. ಕುಲಕರ್ಣಿ, ಜಯಶ್ರೀ ಕುಲಕರ್ಣಿ, ವಿದ್ಯಾ ಜೋಶಿ, ಸಿ. ಬಿ. ಕುಲಕರ್ಣಿ, ಅರ್ಚನಾ ಕುಲಕರ್ಣಿ, ವತ್ಸಲಾ ಭಟ್, ವಿಜಯಲಕ್ಷ್ಮೀ ಕುಲಕರ್ಣಿ, ಸ್ನೇಹಾ ಕರ್ಜಗಿ, ಪೃರ್ಥಿ ಲೋಕಾಪುರ, ವೀಣಾ ಕುಲಕರ್ಣಿ ಮುಂತಾದವರು ಉಪಸ್ಥಿತ ರಿದ್ದರು. ಕೊನೆಯಲ್ಲಿ ಎಸ್. ವಿ. ಪ್ರೌಢಶಾಲೆ ವಿದ್ಯಾರ್ಥಿ,ವಿದ್ಯಾರ್ಥಿನಿಯರಿಂದ ಹಾಡು, ನೃತ್ಯ ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

# ಸೇತುವೆಗಳ ಮುಳುಗಡೆ: ಶಾಶ್ವತ ಪರ್ಯಾಯ ಮಾರ್ಗ ನಿರ್ಮಾಣ ಸಾಧ್ಯತೆ ಪರಿಶೀಲಿಸಲು ಸಿಎಂ ಸೂಚನೆ

ಬೆಳಗಾವಿ: ಬೆಳಗಾವಿ ಜಿಲ್ಲೆಯಲ್ಲಿ ಪ್ರತಿವರ್ಷ ಮಳೆಗಾಲದಲ್ಲಿ ಕೆಳಹಂತದ ಸೇತುವೆಗಳು ಮುಳುಗಡೆಯಾಗುತ್ತವೆ. ಆದ್ದರಿಂದ ಜನರಿಗೆ ಅನುಕೂಲವಾಗುವಂತೆ ಶಾಶ್ವತ ಪರ್ಯಾಯ ಮಾರ್ಗ ನಿರ್ಮಾಣದ ಸಾಧ್ಯತೆಗಳನ್ನು ಪರಿಶೀಲಿಸಿ ವರದಿ ಕಳಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದರು.

ರಾಜ್ಯದ ಹವಾಮಾನ ಮತ್ತು ಮಳೆ-ಬೆಳೆಗಳಿಗೆ ಸಂಬಂಧಿಸಿದಂತೆ ಎಲ್ಲ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ನಡೆದ ವಿಡಿಯೋ ಸಂವಾದದಲ್ಲಿ ಅವರು ಮಾತನಾಡಿದರು.

ಪ್ರತಿವರ್ಷ 30 ಕೆಳಹಂತದ ಸೇತುವೆಗಳು ಮುಳುಗಡೆಯಾಗುವುದರಿಂದ ಶಾಶ್ವತ ಪರ್ಯಾಯ ಮಾರ್ಗ ನಿರ್ಮಿಸುವುದು ಸೂಕ್ತವಾಗಿದೆ. ಆದ್ದರಿಂದ ಈ ಕುರಿತು ಪರಿಶೀಲಿಸಿ ವಿಸ್ತೃತವಾದ ವರದಿ ಕಳಿಸಬೇಕು. ಇದನ್ನು ಸರಕಾರದ ಹಂತದಲ್ಲಿ ಪರಿಶೀಲಿಸಲಾಗುವುದು ಎಂದು ತಿಳಿಸಿದರು.

ಕೃಷ್ಣಾ, ಮಲಪ್ರಭಾ, ಘಟಪ್ರಭಾ, ಭೀಮಾ ಸೇರಿದಂತೆ ಪ್ರಮುಖ ನದಿಗಳ ವ್ಯಾಪ್ತಿಯಲ್ಲಿ ಹೆಚ್ಚಿನ ನಿಗಾ ವಹಿಸಬೇಕು. ಯಾವುದೇ ರೀತಿಯ ತೊಂದರೆ-ಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದರು.

ಅತಿವೃಷ್ಟಿ ಮತ್ತು ಪ್ರವಾಹ ಸಂದರ್ಭಗಳಲ್ಲಿ ಮಾನವ ಜೀವಹಾನಿ ತಡೆಗಟ್ಟಲು ರಾಜ್ಯದ ಎಲ್ಲ ಜಿಲ್ಲೆಗಳ ಅಧಿಕಾರಿಗಳು ತಕ್ಷಣವೇ ಎಲ್ಲ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು.

ಅಪಾಯದಮಟ್ಟ ಮೀರಿ ಹರಿಯುವ ನದಿಗಳು ಮತ್ತು ಅಪಾಯಕಾರಿ ಸ್ಥಳಗಳನ್ನು ಗುರುತಿಸಿ ಅವುಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಇದಲ್ಲದೇ ಅಪಾಯಕಾರಿ ಸ್ಥಳಗಳಿಗೆ ತೆರಳದಂತೆ ನಿರ್ಬಂಧ ವಿಧಿಸಬಹುದು ಎಂದರು.

ಕಂದಾಯ, ಗ್ರಾಮೀಣಾಭಿವೃದ್ಧಿ, ಪೊಲೀಸ್ ಸೇರಿದಂತೆ ಸಂಬಂಧಿಸಿದ ಇಲಾಖೆಗಳು ಪರಸ್ಪರ ಸಮನ್ವಯದೊಂದಿಗೆ ಕೆಲಸ ಮಾಡುವ ಮೂಲಕ ಮಾನವ ಜೀವಹಾನಿ ಕಡಿಮೆಗೊಳಿಸುವುದು ಸಾಧ್ಯವಾಗಲಿದೆ.



ಪ್ರತಿವರ್ಷ ಮುಳುಗಡೆಯಾಗುವ ನದಿತೀರದ ಗ್ರಾಮಗಳ ಶಾಶ್ವತ ಸ್ಥಳಾಂತರಕ್ಕೆ ಕ್ರಮ ವಹಿಸಬೇಕು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

**ಕಟ್ಟಡಗಳ ದುರಸ್ತಿಗೆ ಕಟ್ಟುನಿಟ್ಟಿನ ಸೂಚನೆ:**

ಜಿಲ್ಲಾ-ತಾಲ್ಲೂಕು ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು, ಶಾಲೆಗಳು, ಅಂಗನವಾಡಿ ಕೇಂದ್ರಗಳು, ವಸತಿನಿಲಯಗಳು ಸೇರಿದಂತೆ ಸರಕಾರಿ ಕಟ್ಟಡಗಳನ್ನು ಪರಿಶೀಲಿಸಿ ಅಗತ್ಯವಿರುವ ಕಡೆಗಳಲ್ಲಿ ಕೂಡಲೇ ದುರಸ್ತಿ ಮಾಡಲು ಕ್ರಮ ಕೈಗೊಳ್ಳಬೇಕು. ಒಂದು ವೇಳೆ ಏನಾದರೂ ಸಮಸ್ಯೆಯಾದರೆ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದರು.

ರಾಜ್ಯ ವಿಪತ್ತು ನಿರ್ವಹಣಾ ಅನುದಾನದಡಿ ಕಟ್ಟಡಗಳ ದುರಸ್ತಿಗೆ ಅವಕಾಶವಿದ್ದು, ಈ ಅನುದಾನ ಬಳಸಿಕೊಂಡು ತಕ್ಷಣವೇ ದುರಸ್ತಿಗೊಳಿಸಬೇಕು ಎಂದು ಕಂದಾಯ ಇಲಾಖೆಯ ಸಚಿವರಾದ ಕೃಷ್ಣ ಭೈರೇಗೌಡ ತಿಳಿಸಿದರು. ಎಸ್.ಡಿ.ಆರ್.ಎಫ್ ಹಾಗೂ ಎನ್.ಡಿ.ಆರ್.ಎಫ್. ಕೈಗೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು ಎಂದರು.

ರೈತರ ಸಾಲ ವಸೂಲಿಗೆ ಬಲವಂತ ಮಾಡುವಂತಿಲ್ಲ: ಖಾಸಗಿ ಸೇರಿದಂತೆ ಯಾವುದೇ ಬ್ಯಾಂಕುಗಳಿಂದ ರೈತರು ಪಡೆದುಕೊಂಡಿರುವ ಸಾಲವನ್ನು ಬಲವಂತವಾಗಿ ವಸೂಲಿ ಮಾಡುವಂತಿಲ್ಲ.

ಈ ಬಗ್ಗೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ನಿಗಾ ವಹಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಪ್ರವಾಹ ಸಂದರ್ಭದಲ್ಲಿ ಮಾನವ ಜೀವಹಾನಿ, ಜಾನುವಾರುಗಳ ಜೀವಹಾನಿ, ಸಾರ್ವಜನಿಕರ ಆಸ್ತಿ ರಕ್ಷಣೆಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿಗಳು ನಿರ್ದೇಶನವನ್ನು ನೀಡಿದರು

ಕೆಲವೆಡೆ ಇನ್ನೂ ಬಿತ್ತನೆ ನಡೆಯಲಿರುವುದರಿಂದ ಅಗತ್ಯವಿರುವ ಬೀಜ, ಗೊಬ್ಬರವನ್ನು ಒದಗಿಸಬೇಕು ಎಂದು ಅವರು ತಿಳಿಸಿದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಾತನಾಡಿ, ಪ್ರತಿಯೊಬ್ಬ ಅಧಿಕಾರಿಗಳು ಕೇಂದ್ರ ಸ್ಥಾನಗಳಿಯೇ ಇರಬೇಕು ಎಂದು ಸೂಚನೆ ನೀಡಿದರು.

**ಬೆಳಗಾವಿ ಜಿಲ್ಲೆಯಲ್ಲಿ ಪ್ರವಾಹ ಭೀತಿ ಇಲ್ಲ:** ಕೃಷ್ಣಾ ನದಿಯಲ್ಲಿ 1 ಲಕ್ಷಕ್ಕೂ ಅಧಿಕ ಕ್ಯೂಸೆಕ್ ನೀರು ಒಳಹರಿವು ಇರುತ್ತದೆ. ಸದ್ಯಕ್ಕೆ ಪ್ರವಾಹ ಭೀತಿ ಇರುವುದಿಲ್ಲ. ಬೈಲಹೊಂಗಲ ಮನೆ ಕುಸಿದು ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವೃದ್ಧೆಯೊಬ್ಬರು ಮೃತಪಟ್ಟಿದ್ದು, ಕುಟುಂಬದ ವಾರಸುದಾರರಿಗೆ ಐದು ಲಕ್ಷ ರೂಪಾಯಿ ಪರಿಹಾರ ನೀಡಲಾಗಿದೆ ಎಂದು ಬೆಳಗಾವಿ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಮುಖ್ಯಮಂತ್ರಿಗಳಿಗೆ ಮಾಹಿತಿಯನ್ನು ನೀಡಿದರು.

ಜಿಲ್ಲೆಯಲ್ಲಿ ಇದುವರೆಗೆ ಐದು ಮನೆಗಳು ಪೂರ್ಣವಾಗಿ ಕುಸಿದಿವೆ. 102 ಮನೆಗಳು ಭಾಗಶಃ ಹಾನಿಯಾಗಿರುತ್ತವೆ. ಸಂಪೂರ್ಣವಾಗಿ ಕುಸಿದಿರುವ ಮನೆಗಳಿಗೆ ಎನ್.ಡಿ.ಆರ್.ಎಫ್. ಮಾರ್ಗಸೂಚಿ ಪ್ರಕಾರ ತಲಾ 1.20 ಲಕ್ಷ ರೂಪಾಯಿ ಪರಿಹಾರ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ಮಾಹಿತಿಯನ್ನು ನೀಡಿದರು.

ಜಿಲ್ಲೆಯಲ್ಲಿ ಒಟ್ಟು 30 ಕೆಳಹಂತದ ಸೇತುವೆಗಳು ಮುಳುಗಡಯಾಗಿರುತ್ತವೆ. ಆದರೆ ಪರ್ಯಾಯ ಮಾರ್ಗಗಳು ಇರುವುದರಿಂದ ಸಂಚಾರಕ್ಕೆ ಯಾವುದೇ ರೀತಿಯಾಗಿರುವುದಿಲ್ಲ.

ನಿಪ್ಪಾಣಿಯಲ್ಲಿ ವೇದಗಂಗಾ-ದೂಧಗಂಗಾ ನದಿಯ ಒಳಹರಿವು ಹೆಚ್ಚಾಗಿರುವುದರಿಂದ ಅಗತ್ಯವಿರುವ ಎರಡು ಕಡೆಗಳಲ್ಲಿ ಕಾಳಜಿ ಕೇಂದ್ರಗಳನ್ನು ಆರಂಭಿಸಲಾಗಿದೆ. ಕುಟುಂಬಗಳನ್ನು ಕೂಡ ಸ್ಥಳಾಂತರಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

## ಇಂದು ವಿಶ್ವ ಪ್ರಕೃತಿ ಸಂರಕ್ಷಣಾ ದಿನ

# ಈ ದಿನದ ಉದ್ದೇಶ, ಮಹತ್ವ ಮತ್ತು ಇತಿಹಾಸ



**ಬೆಂಗಳೂರು:** ವಿಶ್ವ ಪ್ರಕೃತಿ ಸಂರಕ್ಷಣಾ ದಿನವನ್ನು ಆಚರಿಸುವ ಮುಖ್ಯ ಉದ್ದೇಶವೆಂದರೆ ಭೂಮಿಯ ನೈಸರ್ಗಿಕ ಪರಿಸರದಿಂದ ದೂರವಾಗುತ್ತಿರುವ ಅಥವಾ ಅಳಿವಿನಂಚಿನಲ್ಲಿರುವ ಪ್ರಾಣಿ-ಪಕ್ಷಿಗಳು ಮತ್ತು ಮರಗಳನ್ನು ಸಂರಕ್ಷಿಸುವುದು.

ಮಾನವ ಆರೋಗ್ಯಯುತವಾಗಿ ಜೀವನ ನಡೆಸಲು ಪ್ರಕೃತಿಯಲ್ಲಿನ ನೀರು, ಗಾಳಿ, ಗಿಡ, ಮರ ಪ್ರತಿಯೊಂದು ಮುಖ್ಯ. ಹೀಗಾಗಿಯೇ ಆರೋಗ್ಯಕರ ಪರಿಸರವು, ಸ್ಥಿರ ಮತ್ತು ಆರೋಗ್ಯಯುತ ಮಾನವ ಸಮಾಜಕ್ಕೆ ಅಡಿಪಾಯವಾಗಿದೆ ಎಂದು ಹೇಳಲಾಗುತ್ತದೆ. ಆದರೆ ಇತ್ತೀಚೆಗೆ ಈ ಪರಿಸ್ಥಿತಿ ಬದಲಾಗಿದ್ದು, ತೀವ್ರವಾಗಿ ಜನಸಂಖ್ಯೆ ಹೆಚ್ಚಾಗುತ್ತಿರುವುದರ ಜತೆಗೆ, ಪರಿಸರದ ಮೇಲಿನ ಕಾಳಜಿ ದೂರವಾಗುತ್ತಿದೆ. ಪ್ಲಾಸ್ಟಿಕ್ ಬಳಕೆ, ಮರಗಳ ನಾಶ, ನೀರಿನ ಮಿತ ಬಳಕೆ ಇಲ್ಲದೆ ಭೂಮಿ ಬರಡಾಗುವ ಸ್ಥಿತಿ ನಿರ್ಮಾಣವಾಗುತ್ತಿದೆ. ಹೀಗಾಗಿ ಈ ಸಮಸ್ಯೆಗಳನ್ನು ಸುಧಾರಿಸಲು ಮತ್ತು ಜನರನ್ನು ಈ ಕುರಿತು ಜಾಗೃತರನ್ನಾಗಿ ಮಾಡಲು, ಪ್ರತಿ ವರ್ಷ ಜುಲೈ 28 ಅನ್ನು ವಿಶ್ವ ಪ್ರಕೃತಿ ಸಂರಕ್ಷಣಾ ದಿನವನ್ನಾಗಿ ಆಚರಿಸಲಾಗುತ್ತದೆ.

**ವಿಶ್ವ ಪ್ರಕೃತಿ ಸಂರಕ್ಷಣಾ ದಿನದ ಉದ್ದೇಶ:** ವಿಶ್ವ ಪ್ರಕೃತಿ ಸಂರಕ್ಷಣಾ ದಿನವನ್ನು ಆಚರಿಸುವ ಮುಖ್ಯ ಉದ್ದೇಶವೆಂದರೆ ಭೂಮಿಯ ನೈಸರ್ಗಿಕ ಪರಿಸರದಿಂದ ದೂರವಾಗುತ್ತಿರುವ ಅಥವಾ ಅಳಿವಿನಂಚಿನಲ್ಲಿರುವ ಪ್ರಾಣಿ-ಪಕ್ಷಿಗಳು ಮತ್ತು ಮರಗಳನ್ನು ಸಂರಕ್ಷಿಸುವುದು.

**ಮಹತ್ವ:** ಭೂ ತಾಯಿಯನ್ನು ರಕ್ಷಿಸುವಲ್ಲಿ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಮಾಡುವುದು ಬಹಳ ಮುಖ್ಯ. ನೀರು, ಗಾಳಿ, ಮಣ್ಣು, ಸಸ್ಯವರ್ಗ, ಖನಿಜಗಳು, ಪ್ರಾಣಿ ಹೀಗೆ ಪ್ರಕೃತಿಯ ವಿವಿಧ ಸಂಪನ್ಮೂಲಗಳನ್ನು ಸಂರಕ್ಷಿಸುವ ಮೂಲಕ ಭೂಮಿಯ ನೈಸರ್ಗಿಕ ಸೌಂದರ್ಯದಲ್ಲಿನ ಸಮತೋಲನವನ್ನು ಕಾಪಾಡಿಕೊಳ್ಳಬಹುದು.

ಖ್ಯಾತ ರಷ್ಯಾದ ಬರಹಗಾರ ಲಿಯೋ ಟಾಲ್‌ಸ್ಟಾಯ್ ಅವರ ಪ್ರಕಾರ, ಮನುಷ್ಯ ಮತ್ತು ಪ್ರಕೃತಿಯ ನಡುವಿನ ಸಂಪರ್ಕವನ್ನು ಮುರಿಯಬಾರದು ಎಂಬುವುದು ಪ್ರಕೃತಿ ಸಂರಕ್ಷಣೆಯ ಮೊದಲ ಷರತ್ತಾಗಿದೆ.

ಆರೋಗ್ಯಕರ ಪರಿಸರವು ಸ್ಥಿರ ಮತ್ತು ಉತ್ತಮ ಸಮಾಜಕ್ಕೆ ಅಡಿಪಾಯವಾಗಿದೆ. ಪ್ರಸ್ತುತ ಹಾಗೂ ಭವಿಷ್ಯದ ಪೀಳಿಗೆಯ ಯೋಗಕ್ಷೇಮವನ್ನು ಖಚಿತಪಡಿಸಿಕೊಳ್ಳಲು ವಿಶ್ವ ಪ್ರಕೃತಿ ಸಂರಕ್ಷಣಾ ದಿನವು ಮಹತ್ವದ ಪಾತ್ರ ವಹಿಸುತ್ತದೆ. ನಮ್ಮ ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸಲು, ಸಂರಕ್ಷಿಸಲು ಮತ್ತು ಸುಸ್ಥಿರವಾಗಿ ಅದನ್ನು ನಿರ್ವಹಿಸಲು ನಾವೆಲ್ಲರೂ ಕೈ ಜೋಡಿಸಬೇಕು. ಆಗ ಮಾತ್ರ ಪರಿಸರದ ಕಾಳಜಿ ಸಾಧ್ಯ. ಅಲ್ಲದೇ ಕೇವಲ ಒಂದು ದಿನಕ್ಕೆ ಮಾತ್ರ ಪರಿಸರ ಉಳಿಸುವ ಮತ್ತು ಮರ-ಗಿಡಗಳನ್ನು ಬೆಳೆಸುವ ಕಾರ್ಯ ಆಗಬಾರದು ಎಂಬ ಕಾಳಜಿ ಇದ್ದರೆ, ನೈಸರ್ಗಿಕ ಸಂಪತ್ತು ಸದಾ ಸಮತೋಲನವನ್ನು ಕಾಯ್ದುಕೊಳ್ಳುತ್ತದೆ.

**ಇತಿಹಾಸ:** ವಿಶ್ವ ಪ್ರಕೃತಿ ಸಂರಕ್ಷಣಾ ದಿನದ ಇತಿಹಾಸ ಮತ್ತು ಮೂಲದ ಬಗ್ಗೆ ಸ್ಪಷ್ಟವಾದ ಮಾಹಿತಿ ಇಲ್ಲ. ಆದರೆ ಜುಲೈ 28 ರಂದು ಇದನ್ನು ಆಚರಿಸುವ ಮುಖ್ಯ ಉದ್ದೇಶವೆಂದರೆ, ಜನರು ಪ್ರಕೃತಿಯನ್ನು ಹೇಗೆ ಬಳಸಿಕೊಳ್ಳುತ್ತಿದ್ದಾರೆ ಎಂಬುದರ ಬಗ್ಗೆ ಆತ್ಮಾವಲೋಕನ ಮಾಡುವುದು ಮತ್ತು ಅದನ್ನು ಸಂರಕ್ಷಿಸಲು ಕ್ರಮಗಳನ್ನು ತೆಗೆದುಕೊಳ್ಳುವುದು.

ನೈಸರ್ಗಿಕ ಸಂಪನ್ಮೂಲಗಳ ಅತಿಯಾದ ದುರುಪಯೋಗದಿಂದಾಗಿ ಜಾಗತಿಕ ತಾಪಮಾನ ಏರಿಕೆ, ವಿವಿಧ ರೋಗಗಳು, ನೈಸರ್ಗಿಕ ವಿಕೋಪಗಳು ಇತ್ಯಾದಿ ಸಮಸ್ಯೆಗಳನ್ನು ಎದುರಿಸುವಂತಾಗಿದೆ. ಹೀಗಾಗಿ ಇದನ್ನು ತಡೆಯುವುದು ಈಗ ಅನಿವಾರ್ಯ ಎಂಬುವುದನ್ನು ಮನವರಿಕೆ ಮಾಡಿಕೊಡುವುದು ಈ ದಿನದ ಮುಖ್ಯ ಉದ್ದೇಶ.

# ಪ್ರಕೃತಿ ವಿಕೃತಿ; ಮನುಕುಲ ನಾಶಕ್ಕೆ ನಾಂದಿ

**ಬೆಂಗಳೂರು:** ಮನುಷ್ಯನು ಬದುಕುಳಿಯಲು ಪ್ರಕೃತಿಯಲ್ಲಿ ದೊರೆಯುವ ನೀರು, ಗಾಳಿ, ಮಣ್ಣು, ಖನಿಜಗಳು, ಗಿಡ ಮರಗಳು, ಪ್ರಾಣಿಗಳು, ಆಹಾರ, ಅನಿಲ ಹೀಗೆ ಹಲವಾರು ಸಂಪನ್ಮೂಲಗಳ ಮೇಲೆ ಅವಲಂಬಿತನಾಗಿದ್ದಾನೆ. ಒಂದು ವೇಳೆ ಈ ಸಂಪನ್ಮೂಲಗಳಲ್ಲಿ ಯಾವುದಾದರೊಂದು ಕೊರತೆಯಾದರೂ ಮನುಷ್ಯನ ಬದುಕು ದುಸ್ತರವಾಗುತ್ತದೆ ಹಾಗೂ ಅಂತಹ ಬದುಕನ್ನು ಕಲ್ಪಿಸುವುದು ಸಹ ಭಯಾನಕವೆಂದೇ ಹೇಳಬಹುದು.

ಆದರೆ ಇತ್ತೀಚಿನ ದಿನಗಳಲ್ಲಿ ತೀವ್ರವಾದ ಜನಸಂಖ್ಯೆ ಏರಿಕೆಯಿಂದಾಗಿ ಹಾಗೂ ಅವಿವೇಕದಿಂದ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸುತ್ತಿರುವುದರಿಂದ ಪ್ರಕೃತಿಯ ಮೇಲೆ ತೀವ್ರವಾದ ಒತ್ತಡ ಉಂಟಾಗಿದ್ದು, ಪರಿಸ್ಥಿತಿ ಹೀಗೆ ಮುಂದುವರೆದರೆ ಭೂಮಿ ಬರಡಾಗುವ ಭಯಾನಕ ದಿನಗಳೇನೂ ದೂರವಿಲ್ಲವೆಂದು ಹೇಳಬಹುದಾಗಿದೆ. ಆದ್ದರಿಂದ ಇಂತಹ ಜ್ವಲಂತ ಸಮಸ್ಯೆಗಳ ಕುರಿತು ಜನರಿಗೆ ಜಾಗೃತಿ ಮೂಡಿಸುವ ಸಲುವಾಗಿ ಪ್ರತಿ ವರ್ಷ ಜುಲೈ 28ಅನ್ನು ವಿಶ್ವ ಪ್ರಕೃತಿ ಸಂರಕ್ಷಣಾ ದಿನವನ್ನಾಗಿ ಆಚರಿಸಲಾಗುತ್ತದೆ.

1970ರಿಂದ ಮಾನವನ ಅಹಿತಕರ ಚಟುವಟಿಕೆಗಳ ಮೂಲಕ ಭೂಮಿಯ ಮೇಲಿನ ನೈಸರ್ಗಿಕ ಸಂಪನ್ಮೂಲಗಳ ಬಳಕೆ ಎರಡು ಪಟ್ಟು ಹೆಚ್ಚಾಗಿದ್ದು, ಮಾನವ ಯಾವ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಅತಿಯಾಗಿ ಅವಲಂಬಿತನಾಗಿದ್ದನೋ, ಆ ಸಂಪನ್ಮೂಲಗಳು ಅಂದಿನಿಂದ ಇಲ್ಲಿಯವರೆಗೆ ಶೇ 33ರಷ್ಟು ಕ್ಷೀಣಿಸುತ್ತ ಸಾಗುತ್ತಿವೆ. ಕೆಲವು ನೈಸರ್ಗಿಕ ಸಂಪನ್ಮೂಲಗಳು, ಪ್ರಕೃತಿಯ ಮಡಿಲಿಗೆ ಸುಲಭವಾಗಿ ಮರಳಿ ಬರುತ್ತವೆ. ಅವುಗಳನ್ನು ನವೀಕರಣಗೊಳ್ಳುವ ನೈಸರ್ಗಿಕ ಸಂಪನ್ಮೂಲಗಳು ಎನ್ನುವರು. ಅವುಗಳೆಂದರೆ ಸೌರಶಕ್ತಿ, ಗಾಳಿ, ನೀರು, ಅರಣ್ಯಗಳು, ಕೃಷಿ ಬೆಳೆಗಳು ಮುಂತಾದವುಗಳು.

ಕೆಲವು ನೈಸರ್ಗಿಕ ಸಂಪನ್ಮೂಲಗಳು ಭೂಮಿಯ ಅಂತರಾಳದಲ್ಲಿ ಬಿಲಿಯನ್ ಗಟ್ಟಲೆ ವರ್ಷಗಳ ಹಿಂದೆ ಉಂಟಾಗಿವೆ. ಉದಾಹರಣೆಗೆ ಪಳೆಯುಳಿಕೆ ಇಂಧನಗಳು ಮತ್ತು ಖನಿಜಗಳು. ಅಂತಹ ಸಂಪನ್ಮೂಲಗಳು ಉಂಟಾಗುತ್ತಿರುವ ವೇಗವು, ಅವುಗಳನ್ನು ಮಾನವರು ಬಳಸುತ್ತಿರುವ ವೇಗಕ್ಕಿಂತ ಕಡಿಮೆ ಇದೆ. ಹೀಗಾಗಿ ಪ್ರಮಾಣ ಕಡಿಮೆಯಾಗುವ ಇಂಥ ಸಂಪನ್ಮೂಲಗಳನ್ನು ಮತ್ತೆ ಕೂಡಲೇ ಪಡೆಯುವುದು ಸಾಧ್ಯವಿಲ್ಲ. ಅಂದರೆ ಒಮ್ಮೆ ಕ್ಷೀಣಿಸಿ, ಪುನರ್‌ಭರ್ತಿ ಮಾಡಲಾಗದ ಇಂಥ ಸಂಪನ್ಮೂಲಗಳನ್ನು ನವೀಕರಣಗೊಳ್ಳದ ನೈಸರ್ಗಿಕ ಸಂಪನ್ಮೂಲಗಳು ಎನ್ನುವರು.



ನಮ್ಮ ಬೇಕು ಬೇಡಿಕೆಗಳನ್ನು ಪೂರೈಸುವ ಈ ನೈಸರ್ಗಿಕ ಸಂಪನ್ಮೂಲಗಳನ್ನು ನಾವು ಪರಿಸರದಿಂದಲೇ ಪಡೆದುಕೊಳ್ಳುವುದರಿಂದ ಇವುಗಳ ಉಳಿವಿಗಾಗಿ ಪ್ರಕೃತಿ/ಪರಿಸರವನ್ನು ರಕ್ಷಿಸಲು ಪ್ರತಿಯೊಬ್ಬರು, ಪ್ರತಿ ಕ್ಷಣವೂ ಆಲೋಚಿಸಬೇಕಾದ ತುರ್ತು ಅಗತ್ಯತೆ ಇದೆ.

**ಪರಿಸರ ರಕ್ಷಣೆಗಾಗಿ ಐದು ಆರ್‌ಗಳನ್ನು ಅನುಸರಿಸಬೇಕಾಗಿದೆ. ಅವುಗಳೆಂದರೆ...**

**1) ನಿರಾಕರಣೆ :** ನಿಮಗೆ ಅಗತ್ಯವಿಲ್ಲದ ವಸ್ತುಗಳನ್ನು ಜನರು ಕೊಡಲು ಬಂದಾಗ ಬೇಡವೆಂದು ಹೇಳುವುದು. ನಿಮಗೆ ಮತ್ತು ಪರಿಸರಕ್ಕೆ ಹಾನಿ ಉಂಟು ಮಾಡುವ ವಸ್ತುಗಳನ್ನು ಕೊಂಡುಕೊಳ್ಳುವುದನ್ನು ನಿರಾಕರಿಸುವ ಪ್ರವೃತ್ತಿ ಬೆಳೆಸಿಕೊಳ್ಳುವುದು. ಒಮ್ಮೆ ಮಾತ್ರ ಬಳಸಬಹುದಾದ ಪ್ಲಾಸ್ಟಿಕ್ ಚೀಲಗಳನ್ನು ತಿರಸ್ಕರಿಸುವುದು.

**2) ಮಿತಬಳಕೆ :** ಆಹಾರ ವ್ಯರ್ಥವಾಗದಂತೆ ಕಾಳಜಿ ವಹಿಸುವುದು. ಸೋರುತ್ತಿರುವ ನಲ್ಲಿಗಳನ್ನು ದುರಸ್ತಿ ಮಾಡಿಸುವುದು. ದೀಪ, ಫ್ಯಾನ್‌ಗಳ ಅನವಶ್ಯಕವಾಗಿ ಉರಿಸುವುದನ್ನು ನಿಲ್ಲಿಸುವುದು. ಶಕ್ತಿ ಸಂಪನ್ಮೂಲಗಳ ನ್ಯಾಯಯುತ ಬಳಕೆಗೆ ಆದ್ಯತೆ ನೀಡಬೇಕು.

**3) ಮರುಬಳಕೆ :** ಬಳಸಿದ ವಸ್ತುಗಳನ್ನೇ ಮತ್ತೆ ಮತ್ತೆ ಬಳಸುವುದು. ಉದಾ: ಬಳಸಿದ ಲಕೋಟೆಗಳನ್ನು ಎಸೆಯುವುದರ ಬದಲು ಅದನ್ನು ತಿರುಗಿಸಿ ಮತ್ತೆ ಪುನಃ ಬಳಸುವುದು. ಜಾಮ್ ಅಥವಾ ಉಪ್ಪಿನಕಾಯಿಯಂತಹ ವಸ್ತುಗಳನ್ನು ತುಂಬಿರುವ ಬಾಟಲಿಗಳನ್ನು ಅಡುಗೆ ಮನೆಯಲ್ಲಿ ಇತರೆ ವಸ್ತುಗಳನ್ನು ತುಂಬಿಡಲು ಬಳಸಬಹುದಾಗಿದೆ.

**4) ಮರು ಉದ್ದೇಶ :** ಒಂದು ವಸ್ತುವನ್ನು ಅದರ ಮೂಲ ಉದ್ದೇಶಕ್ಕೆ ಬಳಸಲು ಸಾಧ್ಯವಾಗದೇ ಇದ್ದರೆ ಎಚ್ಚರಿಕೆಯಿಂದ ಯೋಚಿಸಿ ಅದನ್ನು ಬೇರೆ ಯಾವುದೇ ಉದ್ದೇಶಕ್ಕೆ ಬಳಸಬಹುದು. ಉದಾ- ಖಾಲಿಯಾದ ಚಾಕ್ ಡಬ್ಬವನ್ನು, ಅದರಲ್ಲಿ ಚಿಕ್ಕ ಚಿಕ್ಕ ರಂಧ್ರಗಳನ್ನು ಕೊರೆದು ಟೆಸ್ಟ್‌ಟ್ಯೂಬ್ ಸ್ಟ್ಯಾಂಡ್ ಆಗಿ ಬಳಸಿಕೊಳ್ಳಬಹುದು. ಬಿರುಕು ಬಿಟ್ಟ ಮಣ್ಣಿನ ಪಾತ್ರೆಗಳನ್ನು ಸಣ್ಣ ಸಸ್ಯಗಳನ್ನು ಬೆಳೆಸಲು ಬಳಸಬಹುದು.

**5) ಮರುಚಕ್ರೀಕರಣ:** ಉಪಯೋಗಿಸಿದ ಪ್ಲಾಸ್ಟಿಕ್, ಕಾಗದ, ಗಾಜು, ಲೋಹಗಳನ್ನು ಸಂಗ್ರಹಿಸಿ ಮರುಚಕ್ರೀಕರಣ ಮಾಡಿ ಮತ್ತೆ ಅಗತ್ಯ ವಸ್ತುಗಳನ್ನು ತಯಾರಿಸಬಹುದು. ಮರುಬಳಕೆ ಮಾಡುವ ಮೊದಲು ನಾವು ತ್ಯಾಜ್ಯ ಪದಾರ್ಥಗಳನ್ನು ಬೇರ್ಪಡಿಸಬೇಕು. ಆದ್ದರಿಂದ ಮರುಚಕ್ರೀಕರಣ ಮಾಡಬಹುದಾದ ವಸ್ತುಗಳನ್ನು ಇತರ ತ್ಯಾಜ್ಯ ವಸ್ತುಗಳ ಜೊತೆಗೆ ರಾಶಿ ಹಾಕಬಾರದು.

ಸುಸ್ಥಿರ ಅಭಿವೃದ್ಧಿಯ ಪರಿಕಲ್ಪನೆಯು ಭವಿಷ್ಯದ ಪೀಳಿಗೆಗಳ ಮೂಲ ಅಗತ್ಯಗಳನ್ನು ಪೂರೈಸಲು ಸಂಪನ್ಮೂಲಗಳನ್ನು ಸಂರಕ್ಷಿಸುತ್ತಲೇ ಮಾನವನ ಪ್ರಸ್ತುತ ಮೂಲಭೂತ ಅಗತ್ಯಗಳನ್ನು ಪೂರೈಸುವ ವಿಧಾನಗಳನ್ನು ಪೂರೈಸುವ ವಿಧಾನಗಳನ್ನು ಪ್ರೋತ್ಸಾಹಿಸುತ್ತದೆ. ಆರ್ಥಿಕ ಅಭಿವೃದ್ಧಿಯು ಪರಿಸರ ಸಂರಕ್ಷಣೆಯೊಂದಿಗೆ ಜೋಡಣೆಗೊಂಡಿದೆ.

ನೈಸರ್ಗಿಕ ಸಂಪನ್ಮೂಲಗಳನ್ನು ನಿರ್ವಹಿಸುವ ಅಗತ್ಯವೇನಿದೆ? ಜಗತ್ತಿನಾದ್ಯಂತ ಜನಸಂಖ್ಯೆಯು ತೀವ್ರವಾಗಿ ಬೆಳೆಯುತ್ತಿರುವುದರಿಂದ ನೈಸರ್ಗಿಕ ಸಂಪನ್ಮೂಲಗಳ ಬೇಡಿಕೆಯೂ ಹೆಚ್ಚುತ್ತಿರುವುದರಿಂದ, ಬೇಡಿಕೆ ಪೂರೈಸಿಕೊಳ್ಳಲು ತೀವ್ರವಾದ ಮಾನವನ ಹಸ್ತಕ್ಷೇಪದಿಂದ ಪರಿಸರದ ನಾಶ ಉಂಟಾಗುತ್ತಿದೆ. ಪರಿಸ್ಥಿತಿ ಇದೇ ವೇಗದಲ್ಲಿ ಮುಂದುವರೆದರೆ ಕೆಲವೇ ಕೆಲವು ವರ್ಷಗಳಲ್ಲಿ ಸಂಪೂರ್ಣವಾಗಿ ನೈಸರ್ಗಿಕ ಸಂಪನ್ಮೂಲಗಳು ಬರಿದಾಗುವ ಭೀತಿ ಎದುರಾಗಿದೆ. ಪಳೆಯುಳಿಕೆ ಇಂಧನಗಳು ಬೇಕೆಂದಾಗ ತಕ್ಷಣ ರೂಪುಗೊಳ್ಳುವಂತಹುಗಳಲ್ಲ. ಅವುಗಳು ರೂಪುಗೊಳ್ಳಲು ಮಿಲಿಯನ್‌ಗಟ್ಟಲೇ ವರ್ಷಗಳೇ ಬೇಕಾಗುತ್ತವೆ.

ಅಪಾಯಕಾರಿ ಕೊಳ್ಳುಬಾಕುತನ ಸಂಸ್ಕೃತಿ- ತನಗೆ ಅವಶ್ಯಕತೆ ಇರುವುದಕ್ಕಿಂತಲೂ ಹೆಚ್ಚು-ಹೆಚ್ಚಾಗಿ ವಸ್ತುಗಳನ್ನು ಕೊಳ್ಳುತ್ತಿರುವುದು ಪರಿಸರಕ್ಕೆ ಕೊಟ್ಟ ದೊಡ್ಡ ಕೊಡಲಿ ಪೆಟ್ಟಾಗಿದೆ. ಇಂದಿನ ಆಧುನಿಕ ಸಮಾಜದಲ್ಲಿ ಮನುಷ್ಯ ವಸ್ತುಗಳನ್ನು ಅತೀಯಾಗಿ ಪ್ರೀತಿಸುತ್ತಿದ್ದಾನೆಯೇ ಹೊರತು ಜೀವಿಗಳನ್ನಲ್ಲ. ವಸ್ತುಗಳನ್ನು ಬಳಸಬೇಕು, ಆದರೆ ಜೀವಿಗಳನ್ನು ಪ್ರೀತಿಸಬೇಕು.

ಸಂಪನ್ಮೂಲಗಳ ಅತಿಯಾದ ಬಳಕೆಯಿಂದ ಮಣ್ಣು, ಗಾಳಿ ತೀವ್ರ ಮಾಲಿನ್ಯವಾಗಿದ್ದು, ಕಾಡಿನ ತೀವ್ರ ನಾಶ, ನದಿ ಮತ್ತು ನೀರಿನ ಮೂಲಗಳ ತೀವ್ರ ಮಾಲಿನ್ಯವಾಗಿದೆ. ಆಕರ್ಷಕ ಜಾಹೀರಾತುಗಳಿಂದಲೂ ಕೊಳ್ಳು ಬಾಕುತನ ಹೆಚ್ಚಲು ಕಾರಣವಾಗಿದೆ. ಈ ಎಲ್ಲ ಕಾರಣಗಳಿಂದ ನೈಸರ್ಗಿಕ ಸಂಪನ್ಮೂಲಗಳ ಬಳಕೆ ಮಿತಿ ಮೀರಿ ಬಳಸಲ್ಪಡುತ್ತಿದ್ದು, ಈ ಎಲ್ಲದರ ದುಷ್ಪರಿಣಾಮಗಳು ಮುಂದೊಂದು ದಿನ ಮನುಷ್ಯನ ಅಸ್ತಿತ್ವವನ್ನೇ ಅಲ್ಲಾಡಿಸಬಹುದು.

## ಚಹಾದ ಜೊತೆ ಎಲ್ಲಾ ವಸ್ತುಗಳನ್ನು ಸೇವಿಸುವಂತಿಲ್ಲ



**ಬೆಂಗಳೂರು:** ಕೆಲವರಿಗೆ ನಿದ್ದೆ ಓಡಿಸಬೇಕೆಂದರೆ ಚಹಾ ಬೇಕು. ಇನ್ನು ಕೆಲವರಿಗೆ ಕೆಲಸ ಮಾಡುವ ಮೂಡ್ ಇಲ್ಲ ಎಂದಾದರೆ ಚಹಾ ಬೇಕು. ಹೀಗೆ ನಾನಾ ಕಾರಣಗಳನ್ನು ಇಟ್ಟು ಕೊಂಡೆ ಚಹಾ ಕುಡಿಯುತ್ತೇವೆ. ಹೀಗೆ ಚಹಾ ಕುಡಿಯುವಾಗ ಬರೀ ಚಹಾ ಕುಡಿಯುವ ಬದಲು ಜೊತೆಯಲ್ಲಿ ಏನನ್ನಾದರೂ ತಿನ್ನುವ ಅಭ್ಯಾಸವೂ ಇರುತ್ತದೆ. ಆದರೆ ಚಹಾದ ಜೊತೆ ಎಲ್ಲಾ ವಸ್ತುಗಳನ್ನು ಸೇವಿಸುವಂತಿಲ್ಲ. ಕೆಲವೊಂದು ವಸ್ತುಗಳನ್ನು ಚಹಾದ ಜೊತೆ ತಿಂದರೆ ಆರೋಗ್ಯಕ್ಕೆ ಹಾನಿಯುಂಟಾಗುತ್ತದೆ.

ಲೆಮನ್ ಟೀ :

ಕೆಲವರು ತೂಕ ಇಳಿಸಿಕೊಳ್ಳಲು ಲೆಮನ್ ಟೀ ಕುಡಿಯುತ್ತಾರೆ. ಆದರೆ ಇದು ಆರೋಗ್ಯಕ್ಕೆ ಒಳ್ಳೆಯದಲ್ಲ ಎಂದು ಹೇಳಲಾಗುತ್ತದೆ. ಹೆಚ್ಚಿನ ಜನರಿಗೆ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಲೆಮನ್ ಟೀ ಕುಡಿಯುವ ಅಭ್ಯಾಸ ಇರುತ್ತದೆ. ಚಹಾದೊಂದಿಗೆ ನಿಂಬೆ ರಸವನ್ನು ಬೆರೆಸಿದರೆ ಚಹಾವನ್ನು ಆಮ್ಲೀಯಗೊಳಿಸುತ್ತದೆ. ಇದರಿಂದ ಹೊಟ್ಟೆ ಉಬ್ಬುವ ಅಪಾಯ ಎದುರಾಗುತ್ತದೆ. ಖಾಲಿ ಹೊಟ್ಟೆಯಲ್ಲಿ ನಿಂಬೆ ಚಹಾವನ್ನು ಸೇವಿಸಿದರೆ, ಎದೆಯುರಿ ಮತ್ತು ಆಸಿಡ್ ರಿಫ್ಲಕ್ಸ್‌ನಂತಹ ಸಮಸ್ಯೆಗಳು ಉಂಟಾಗಬಹುದು.

ಕಡಲೆ ಹಿಟ್ಟಿನಿಂದ ಮಾಡಿದ ಆಹಾರ :

ಹೆಚ್ಚಿನ ಜನರು ಚಹಾದೊಂದಿಗೆ ಪಕೋಡಾ, ಚೌ ಚೌ ತಿನ್ನಲು ಇಷ್ಟಪಡುತ್ತಾರೆ. ಚಹಾದೊಂದಿಗೆ ಸೇವಿಸುವ ಉಪಹಾರವು ಹೆಚ್ಚಾಗಿ ಕಡಲೆ ಹಿಟ್ಟಿನಿಂದ ಮಾಡಲ್ಪಟ್ಟಿರುತ್ತದೆ. ಕಡಲೆ ಹಿಟ್ಟಿನಿಂದ ಮಾಡಿದ ವಸ್ತುಗಳು ಜೀರ್ಣಕಾರಿ ಸಮಸ್ಯೆಗಳನ್ನು ಉಂಟುಮಾಡುತ್ತದೆ. ಚಹಾದೊಂದಿಗೆ ಈ ಆಹಾರಗಳನ್ನು ಸೇವಿಸುವುದರಿಂದ ಆಹಾರದಿಂದ ಪಡೆಯಬಹುದಾದ ಪೋಷಕಾಂಶಗಳ ಪ್ರಮಾಣ ಕಡಿಮೆಯಾಗುತ್ತದೆ. ಏಕೆಂದರೆ ಇದು ಪೋಷಕಾಂಶಗಳನ್ನು ಹೀರಿಕೊಳ್ಳುವ ಸಾಮರ್ಥ್ಯವನ್ನು ಕಡಿಮೆ ಮಾಡುತ್ತದೆ.

ಐರನ್ ಅಂಶವಿರುವ ಪದಾರ್ಥ :

ಐರನ್ ನಲ್ಲಿ ಸಮೃದ್ಧವಾಗಿರುವ ಆಹಾರವನ್ನು ಚಹಾದೊಂದಿಗೆ ತಿನ್ನಬಾರದು ಎಂದು ಗಮನಿಸಬೇಕಾದ ಅಂಶವಾಗಿದೆ. ಅದು ಆರೋಗ್ಯಕ್ಕೆ ಹಾನಿ ಮಾಡುತ್ತದೆ. ಚಹಾದಲ್ಲಿ ಆಕ್ಸಲೇಟ್ ಮತ್ತು ಟ್ಯಾನಿನ್ ಎಂಬ ಅಂಶ ಇರುತ್ತದೆ. ಇವೆರಡೂ ಆಹಾರದಲ್ಲಿರುವ ಐರನ್ ಅಂಶವನ್ನು ಹೀರಿಕೊಳ್ಳಲು ಅಡ್ಡಿಪಡಿಸುತ್ತದೆ. ಹಸಿರು ಎಲೆಗಳ ತರಕಾರಿಗಳು, ಮಸೂರ, ಧಾನ್ಯಗಳು ಮತ್ತು ಬೀಜಗಳಂತಹ ಆಹಾರಗಳನ್ನು ಚಹಾದೊಂದಿಗೆ ಸೇವಿಸಬಾರದು.

## ಹಸಿ ಬಾಳೆಹಣ್ಣಿನ ಸೇವನೆ ಆರೋಗ್ಯಕ್ಕೆ ತುಂಬಾ ಹಿತಕಾರಿ



**ಬೆಂಗಳೂರು:** ಹಸಿ ಬಾಳೆಹಣ್ಣಿನ ಸೇವನೆ ಆರೋಗ್ಯಕ್ಕೆ ತುಂಬಾ ಹಿತಕಾರಿಯಾಗಿದೆ. ಅನೇಕ ಪೌಷ್ಟಿಕಾಂಶಗಳು ಹಸಿ ಬಾಳೆಹಣ್ಣಿನಲ್ಲಿ ಕಂಡುಬರುತ್ತವೆ, ಇದು ಅನೇಕ ಸಮಸ್ಯೆಗಳನ್ನು ನಿವಾರಿಸಲು ಸಹಾಯ ಮಾಡುತ್ತದೆ. ಹಸಿ ಬಾಳೆಹಣ್ಣಿನ ಸೇವನೆಯು ರಕ್ತದೊತ್ತಡವನ್ನು ನಿಯಂತ್ರಿಸಲು ತುಂಬಾ ಪ್ರಯೋಜನಕಾರಿಯಾಗಿದೆ. ಇನ್ನೊಂದೆಡೆ, ಬಾಳೆಕಾಯಿ ಫೈಬರ್ ನ ಸಮೃದ್ಧ ಮೂಲವಾಗಿದೆ, ಇದು ಹೊಟ್ಟೆಯ ಆರೋಗ್ಯಕ್ಕೂ ಕೂಡ ಪ್ರಯೋಜನಕಾರಿಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಹಸಿ ಬಾಳೆಹಣ್ಣಿನ ಸೇವನೆಯಿಂದ ಆಗುವ ಆರೋಗ್ಯ ಪ್ರಯೋಜನಗಳೇನು ಎಂಬುದನ್ನು ತಿಳಿದುಕೊಳ್ಳೋಣ ಬನ್ನಿ.

ಬಾಳೆಕಾಯಿ ಸೇವನೆಯ ಪ್ರಯೋಜನಗಳು

ಹೃದಯ ಆರೋಗ್ಯ ರಕ್ಷಕ

ಹಸಿ ಬಾಳೆಹಣ್ಣಿನ ಸೇವನೆಯು ಹೃದಯವನ್ನು ಆರೋಗ್ಯ ರಕ್ಷಣೆಗೆ ಪ್ರಯೋಜನಕಾರಿಯಾಗಿದೆ. ಹಸಿ ಬಾಳೆಹಣ್ಣಿನಲ್ಲಿ ಉತ್ತಮ ಪ್ರಮಾಣದ ಪೊಟ್ಯಾಸಿಯಮ್ ಇರುತ್ತದೆ. ಇದು ರಕ್ತದೊತ್ತಡದ ಮಟ್ಟವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಇದಲ್ಲದೆ, ಅದು ಹೃದಯವನ್ನು ಆರೋಗ್ಯವಾಗಿಡಲು ಸಹಾಯ ಮಾಡುತ್ತದೆ. ಹೀಗಾಗಿ ನೀವೂ ಕೂಡ ನಿಮ್ಮ ಆಹಾರದಲ್ಲಿ ಹಸಿ ಬಾಳೆಹಣ್ಣನ್ನು ಸೇರಿಸಿಕೊಳ್ಳಬಹುದು.

ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ

ಜೀರ್ಣಕ್ರಿಯೆಯನ್ನು ಸುಧಾರಿಸಲು ಬಾಳೆಕಾಯಿ ಸೇವಿಸುವುದು ತುಂಬಾ ಪ್ರಯೋಜನಕಾರಿ ಎಂದು ಪರಿಗಣಿಸಲಾಗಿದೆ. ಬಾಳೆಕಾಯಿ ಫೈಬರ್‌ನಲ್ಲಿ ಸಮೃದ್ಧವಾಗಿದೆ. ಇದು ಜೀರ್ಣಕ್ರಿಯೆಯನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಇದು ಮಲಬದ್ಧತೆ ಮತ್ತು ಹೊಟ್ಟೆಗೆ ಸಂಬಂಧಿಸಿದ ಅನೇಕ ಸಮಸ್ಯೆಗಳನ್ನು ನಿವಾರಿಸಲು ಸಹಾಯ ಮಾಡುತ್ತದೆ.

ತೂಕ ಇಳಿಕೆಗೆ ಪ್ರಯೋಜನಕಾರಿಯಾಗಿದೆ

ಹಸಿ ಬಾಳೆಹಣ್ಣನ್ನು ಸೇವಿಸುವುದು ತೂಕವನ್ನು ಇಳಿಕೆ ಮಾಡಲು ಸಹಾಯ ಮಾಡುತ್ತದೆ. ಹಸಿ ಬಾಳೆಹಣ್ಣಿನಲ್ಲಿ ಸಾಕಷ್ಟು ನಾರಿನಂಶವಿದೆ. ಇದರಿಂದ ಹೊಟ್ಟೆ ತುಂಬಾ ಹೊತ್ತು ತುಂಬಿದ ಅನುಭವ ನೀಡುತ್ತದೆ ಮತ್ತು ಹಸಿವು ಕೂಡ ಕಡಿಮೆಯಾಗುತ್ತದೆ. ಹೀಗಾಗಿ ಇದು ತೂಕವನ್ನು ಇಳಿಕೆ ಮಾಡಲು ಸಹಾಯಕವಾಗಿದೆ.

ಮೂಳೆಗಳ ಆರೋಗ್ಯ ರಕ್ಷಕ

ಮೂಳೆಗಳನ್ನು ಬಲಪಡಿಸಲು ಹಸಿ ಬಾಳೆಹಣ್ಣು ತುಂಬಾ ಪ್ರಯೋಜನಕಾರಿಯಾಗಿದೆ. ಹಸಿ ಬಾಳೆಹಣ್ಣಿನಲ್ಲಿ ಸಾಕಷ್ಟು ಪ್ರಮಾಣದ ಕ್ಯಾಲ್ಸಿಯಂ ಇದ್ದು ಮೂಳೆಗಳು ಗಟ್ಟಿಯಾಗಲು ಇದು ಸಹಾಯ ಮಾಡುತ್ತದೆ.

## ದೇಹದಿಂದ ವಿಷಕಾರಿ ಪದಾರ್ಥ ಹೊರಹಾಕಲು ಯಕೃತ್ತು ನಮಗೆ ಸಹಾಯ ಮಾಡುತ್ತದೆ



**ಬೆಂಗಳೂರು:** ನಮ್ಮ ದೇಹದ ಪ್ರತಿಯೊಂದು ಭಾಗವೂ ತನ್ನದೇ ಅದ ಮಹತ್ವವನ್ನು ಹೊಂದಿವೆ. ದೇಹದ ಯಾವುದಾದರೂ ಒಂದು ಭಾಗದಲ್ಲಿ ಸಮಸ್ಯೆ ಉಂಟಾದರೆ ಅದು ಇಡೀ ದೇಹದ ಮೇಲೆ ಪರಿಣಾಮ ಬೀರುತ್ತದೆ. ದೇಹದಿಂದ ವಿಷಕಾರಿ ಪದಾರ್ಥಗಳನ್ನು ಹೊರಹಾಕಲು ಯಕೃತ್ತು ನಮಗೆ ಸಹಾಯ ಮಾಡುತ್ತದೆ. ಇದಲ್ಲದೆ, ಯಕೃತ್ತು ಅನೇಕ ಖನಿಜಗಳು ಮತ್ತು ಕಬ್ಬಿಣವನ್ನು ಸಂಗ್ರಹಿಸಿಡುವ ಮೂಲಕ ಮೂಲಕ ದೇಹವನ್ನು ಆರೋಗ್ಯಕರವಾಗಿಡಲು ಸಹಾಯ ಮಾಡುತ್ತದೆ. ಹೀಗಾಗಿ ಪಿತ್ತಜನಕಾಂಗವು ಹಲವಾರು ಕಾರ್ಯಗಳನ್ನು ಮಾಡುವ ಕಾರಣ ಅದನ್ನು ಆರೋಗ್ಯಕರವಾಗಿ ಇರಿಸುವುದು ಸಹ ತುಂಬಾ ಮುಖ್ಯವಾಗಿದೆ. ಇದೇ ವೇಳೆ, ಲಿವರ್ ಡಿಟಾಕ್ಸ್ ಮಾಡುವುದು ಇಂದಿನ ದಿನಗಳಲ್ಲಿ ತುಂಬಾ ಮುಖ್ಯವಾಗಿದೆ. ಯಕೃತ್ತನ್ನು ನಿರ್ವಿಷಗೊಳಿಸಲು ಮನೆಯಲ್ಲಿಯೇ ಸಿಗುವ ಕೆಲ ಸಂಗತಿಗಳನ್ನು ಬಳಸಬಹುದು.

ಯಕೃತ್ತನ್ನು ನಿರ್ವಿಷಗೊಳಿಸುವ ಮನೆಮದ್ದುಗಳು

ಅರಿಶಿನ ನೀರು

ಪ್ರತಿ ಮನೆಯಲ್ಲೂ ಅರಿಶಿನವನ್ನು ಬಳಸುತ್ತಾರೆ. ಅರಿಶಿನವನ್ನು ಆರೋಗ್ಯಕ್ಕೆ ಬಹಳ ಪ್ರಯೋಜನಕಾರಿ ಎಂದು ಪರಿಗಣಿಸಲಾಗುತ್ತದೆ. ಲೀವರ್ ಗೆ ಸಂಬಂಧಿಸಿದ ಸಮಸ್ಯೆ ಇರುವವರಿಗೆ ಪ್ರತಿದಿನ ಅರಿಶಿನ ನೀರನ್ನು ಕುಡಿಯಲು ಸಲಹೆ ನೀಡಲಾಗುತ್ತದೆ. ಅರಿಶಿನ ನೀರು ದೇಹದಲ್ಲಿ ಕಿಣ್ವಗಳನ್ನು ಹೆಚ್ಚಿಸುವ ಮೂಲಕ ಈ ಕೆಲಸ ಮಾಡುತ್ತದೆ. ಇದು ಆಹಾರದ ಜೊತೆಗೆ ಹೊಟ್ಟೆಯೊಳಗೆ ಹೋದ ವಿಷವನ್ನು ಹೊರಹಾಕಲು ಸಹಾಯ ಮಾಡುತ್ತದೆ.

ನಿಂಬೆ ಮತ್ತು ಉಗುರು ಬೆಚ್ಚಗಿನ ನೀರು


ದೇಹದಿಂದ ಕೊಬ್ಬನ್ನು ಕಡಿಮೆ ಮಾಡುವ ವಿಷಯ ಬಂದಾಗ, ಜನರು ಸಾಮಾನ್ಯವಾಗಿ ಉಗುರು ಬೆಚ್ಚಗಿನ ನೀರಿನಲ್ಲಿ ನಿಂಬೆ ರಸವನ್ನು ಬೆರೆಸಿ ಕುಡಿಯಲು ಶಿಫಾರಸು ಮಾಡುತ್ತಾರೆ. ನಿಂಬೆ ಯಕೃತ್ತಿನ ನಿರ್ವಿಶೀಕರಣದ ಕೆಲಸ ಮಾಡುತ್ತದೆ. ಪ್ರತಿದಿನ ಒಂದು ಲೋಟ ನಿಂಬೆ ಮತ್ತು ಉಗುರುಬೆಚ್ಚನೆಯ ನೀರನ್ನು ಕುಡಿಯುವುದು ದೇಹದಿಂದ ವಿಷಕಾರಿ ಪದಾರ್ಥಗಳು ಹೊರಹೋಗುತ್ತವೆ ಮತ್ತು ಯಕೃತ್ತನ್ನು ಆರೋಗ್ಯಕರವಾಗಿಡಲು ಅದು ಸಹಾಯ ಮಾಡುತ್ತದೆ.

ಯಕೃತ್ತು ಆರೋಗ್ಯವಾಗಿರಲು ಏನು ಮಾಡಬೇಕು?

ನಿಮ್ಮ ಯಕೃತ್ತು ಯಾವಾಗಲೂ ಆರೋಗ್ಯವಾಗಿರಿಸಲು ನೀವು ಬಯಸುತ್ತಿದ್ದರೆ, ಇದಕ್ಕಾಗಿ ನೀವು ನಿಮ್ಮ ಆಹಾರ ಮತ್ತು ಪಾನೀಯದಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕು, ನೀವು ಪಿಜ್ಜಾ, ಬರ್ಗರ್, ನೂಡಲ್ಸ್ ಗಳಂತಹ ಜಂಕ್ ಫುಡ್ ಗಳು ಮತ್ತು ಸಿಗರೇಟ್, ಮದ್ಯದಂತಹ ಕೆಟ್ಟ ಚಟಗಳಿಗೆ ಬೈ-ಬೈ ಹೇಳುವ ಮೂಲಕ ಲಿವರ್ ಅನ್ನು ಆರೋಗ್ಯಕರವಾಗಿರಿಸಿಕೊಳ್ಳಬಹುದು.

# ಬದುಕಿನ ಪವಾಡ ಸೃಷ್ಟಿಸಲು ವಿಜ್ಞಾನಕ್ಕೆ ಮಾನವೀಯ ಸ್ಪರ್ಶ

**ಬೆಂಗಳೂರು:** ದಂಪತಿಗಳಿಗೆ ಪಿತೃತ್ವದ ಖುಷಿ ನೀಡುವ IVF ಆದರೆ, ದಂಪತಿಯು ಈ ಸಂತೋಷವನ್ನು ಹೊಂದುವಂತೆ ಮಾಡುವಲ್ಲಿ ವೈದ್ಯರು ಹಾಗೂ ತಂಡದ ಸಮರ್ಪಣಾ ಭಾವ, ಕಠಿಣ ಪರಿಶ್ರಮವು ಈ ಪ್ರಕ್ರಿಯೆಯಲ್ಲಿ ಅದೃಶ್ಯವಾಗಿಯೇ ಉಳಿಯುತ್ತದೆ. ಗರ್ಭಧರಿಸಲು ಅಸಮರ್ಥತೆಯು ನಿರಾಶೆ, ಅಪರಾಧಿ ಭಾವ ಮತ್ತು ಕೆಲವೊಮ್ಮೆ ಕೋಪದ ಭಾವನೆಗಳಿಗೆ ಕಾರಣವಾಗಬಹುದು. ಆದ್ದರಿಂದ, ಫಲವಂತಿಕೆಯ ಸಮಸ್ಯೆಯನ್ನು ನಿಭಾಯಿಸಲು ದಂಪತಿಗಳಿಗೆ ಅಗತ್ಯವಾದ ಚಿಕಿತ್ಸೆ ಮತ್ತು ಭಾವನಾತ್ಮಕ ಮಾರ್ಗದರ್ಶನವನ್ನು ನೀಡುವ ಉತ್ತಮ, ಅರ್ಹ ಹಾಗೂ ತಜ್ಞರ ತಂಡದ ಬೆಂಬಲ ಅಗತ್ಯವಿರುತ್ತದೆ. IVF ಜೋಡಿಯ ಪ್ರಯಾಣ ಹಾಗೂ ಬದುಕಿನಲ್ಲಿ ಅದ್ಭುತವಾದ ಪವಾಡವನ್ನೇ ಸೃಷ್ಟಿಸಲು ವಿಜ್ಞಾನಕ್ಕೆ ಮಾನವೀಯ ಸ್ಪರ್ಶ ನೀಡುವ ಈ ಚಮತ್ಕಾರವನ್ನೊಮ್ಮೆ ಅವಲೋಕಿಸೋಣ



ದಂಪತಿಗಳ IVF ಪ್ರಯಾಣ:

ಫಲವಂತಿಕೆ ಚಿಕಿತ್ಸಾಲಯಕ್ಕೆ ಆಗಮಿಸುವ ಪೂರ್ವದಲ್ಲಿ, ದಂಪತಿಗಳು ಹಲವಾರು ಅಡೆತಡೆಗಳನ್ನು ಎದುರಿಸಿರುತ್ತಾರೆ. ಸ್ವಾಭಾವಿಕ ಗರ್ಭಧಾರಣೆಯ ಅಸಮರ್ಥ ಪರಿಸ್ಥಿತಿ ನಿಜವಾಗಿಯೂ ತುಂಬ ಕಷ್ಟಕರ ಸನ್ನಿವೇಶ. ಈ ಎಲ್ಲ ಸಂದಿಗ್ಧಗಳ ನಡುವೆ, ಖಗಿಈಗೆ ಹೋಗಲು ನಿರ್ಧರಿಸುವುದು ಭಾವನಾತ್ಮಕ ತುಮುಲವನ್ನು ಉಂಟುಮಾಡಬಹುದು. ಒಂದೆಡೆ ಇದು ದಂಪತಿಗಳಿಗೆ ಭರವಸೆಯನ್ನು ಹುಟ್ಟುಹಾಕುತ್ತದೆ ಮತ್ತು ಅದೇ ಸಮಯದಲ್ಲಿ ಭವಿಷ್ಯದ ಫಲಿತಾಂಶದ ಊಹೆಯು ಆತಂಕವನ್ನೂ ಉಂಟುಮಾಡುತ್ತದೆ.

IVF ಚಿಕಿತ್ಸೆಯನ್ನು ಪ್ರಾರಂಭಿಸುವಾಗ ಗಣನೀಯ ಪ್ರಮಾಣದ ಮಾಹಿತಿಯನ್ನು ಸಂಸ್ಕರಿಸುವ ಅಗತ್ಯವಿದೆ. ಇದು ಹಾರ್ಮೋನ್ ಕಟ್ಟುಪಾಡುಗಳು, ಚುಚ್ಚುಮದ್ದುಗಳ ವೇಳಾಪಟ್ಟಿ, ಅಲ್ಟ್ರಾಸೌಂಡ್ ಭೇಟಿಗಳು ಮತ್ತು ಗೊಂದಲಮಯ ವೈದ್ಯಕೀಯ ಭಾಷೆ ಮತ್ತು ಕಾರ್ಯವಿಧಾನಗಳನ್ನು ಒಳಗೊಂಡಿದೆ. ಯಾವ ಕ್ಲಿನಿಕ್ ಸೂಕ್ತ, ಯಾವ ತಜ್ಞರನ್ನು ನೋಡಬೇಕು, ಕೆಲಸದ ಸಮಯವನ್ನೇ ವ್ಯಯಿಸಬೇಕೇ, ಯಾರಿಗೆ ತಿಳಿಸಬೇಕು ಮತ್ತು ಎಷ್ಟು ಭ್ರೂಣಗಳನ್ನು ವರ್ಗಾಯಿಸಬೇಕು ಎಂಬಿತ್ಯಾದಿ ಹಲವು ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. IVF ನ ಒತ್ತಡವು ಸುಲಭವಾಗಿ ಗೊಂದಲಕ್ಕೊಳಗಾಗುವ ಮತ್ತು ಅತಿಯಾದ ಹೊರೆಯ ಭಾವನೆಯನ್ನು ಮೂಡಿಸಬಹುದು. ಅದಕ್ಕಾಗಿಯೇ ವೈದ್ಯರು ಮತ್ತು ಸಲಹೆಗಾರರ ಪಾತ್ರ ಬಹಳ ನಿರ್ಣಾಯಕವಾಗಿದೆ.

ದಂಪತಿಗಳು ಫಲವಂತಿಕೆ ಚಿಕಿತ್ಸಾಲಯಕ್ಕೆ ಬಂದಾಗ, ಅವರು ತಮ್ಮ ನಿರ್ಧಾರದಲ್ಲಿ ಸ್ಪಷ್ಟವಾಗಿದ್ದಾರೆ ಎನ್ನುವುದನ್ನು ತಿಳಿಯುವುದು ಮೊದಲ ಮೈಲಿಗಲ್ಲು. ಅಲ್ಲಿ, ಫಲವಂತಿಕೆ ತಜ್ಞರು ಅವರಿಗೆ ಕೆಲವು ಅಗತ್ಯ ಫಲವಂತಿಕೆ ಪರೀಕ್ಷೆಗಳನ್ನು ಮಾಡಿಸುವಂತೆ ಹಾಗೂ ದಂಪತಿಗಳಿಗೆ ಲಭ್ಯವಿರುವ ಸಮರ್ಪಕ ರೀತಿಯ ಫಲವಂತಿಕೆ ಚಿಕಿತ್ಸೆಯ ಆಯ್ಕೆಗಳ ಕುರಿತು ಸಲಹೆ ನೀಡುತ್ತಾರೆ.

ಅವರು IVF ಅನ್ನು ಶಿಫಾರಸು ಮಾಡಿದರೆ, ಸಲಹೆಗಾರರು ಅವರಿಗೆ ಕೆಲವು ಚುಚ್ಚುಮದ್ದುಗಳನ್ನು ನೀಡುತ್ತಾರೆ ಮತ್ತು ಮಹಿಳೆಯ ದೇಹದಿಂದ ಅಂಡಗಳನ್ನು ಮತ್ತು ಪತಿಯಿಂದ ವೀರ್ಯವನ್ನು ತೆಗೆದುಕೊಳ್ಳುತ್ತಾರೆ. ಭ್ರೂಣಶಾಸ್ತ್ರಜ್ಞರು ಅಂಡ ಮತ್ತು ವೀರ್ಯವನ್ನು ರಕ್ಷಿಸುತ್ತಾರೆ ಮತ್ತು ಗರ್ಭಾಶಯವನ್ನು ಅನುಕರಿಸುವ ಅತ್ಯುತ್ತಮ ಕೃತಕ ವಾತಾವರಣವನ್ನು ಸೃಷ್ಟಿಸುವ ಮೂಲಕ ಪ್ರಯೋಗಾಲಯದಲ್ಲಿ ಅವುಗಳನ್ನು ಫಲವತ್ತಾಗಿಸುತ್ತಾರೆ. ಭ್ರೂಣಗಳಿಗೆ ವಿಶೇಷ ಕಾಳಜಿಯ ಅಗತ್ಯವಿರುತ್ತದೆ. ಏಕೆಂದರೆ, ಅವು 200-300 ಮೈಕ್ರಾನ್ ಗಾತ್ರದಲ್ಲಿರುತ್ತವೆ ಮತ್ತು ಬರಿಗಣ್ಣಿಗೆ ಗೋಚರಿಸುವುದಿಲ್ಲ. ಭ್ರೂಣಗಳು ತಮ್ಮ ಕಾರ್ಯಸಾಧ್ಯತೆಯನ್ನು ಕಳೆದುಕೊಳ್ಳುತ್ತವೆ ಮತ್ತು ಎಚ್ಚರಿಕೆಯಿಂದ ನಿರ್ವಹಿಸದಿದ್ದಲ್ಲಿ ಗರ್ಭಧಾರಣೆ ಸಾಧ್ಯವಾಗುವುದಿಲ್ಲ.

ಭ್ರೂಣಗಳನ್ನು ಬ್ಲಾಸ್ಟೊಸಿಸ್ಟ್ ಹಂತವಾಗಿ ಅಭಿವೃದ್ಧಿಪಡಿಸಿದ ಬಳಿಕ, ಅವುಗಳನ್ನು ಅಳವಡಿಸಲು ಮತ್ತು ಗರ್ಭಾವಸ್ಥೆಯನ್ನು ಸ್ಥಾಪಿಸಲು ಗರ್ಭಾಶಯಕ್ಕೆ ವರ್ಗಾಯಿಸಲಾಗುತ್ತದೆ. ನೋವಾ IVF ಫರ್ಟಿಲಿಟಿಯ ಭ್ರೂಣಶಾಸ್ತ್ರಜ್ಞರಾದ ಅನುಷಾ ಶೆಣೈ ಅವರು ರಚಿಸಿರುವ ವರ್ಣಚಿತ್ರವು, ಗರ್ಭಾಶಯವನ್ನು ಅನುಕರಿಸುವ ಅತ್ಯುತ್ತಮ ಕೃತಕ ವಾತಾವರಣವನ್ನು ಸೃಷ್ಟಿಸುವ ಮೂಲಕ ಅಂಡಾಣು ಮತ್ತು ವೀರ್ಯವನ್ನು ರಕ್ಷಿಸುವಲ್ಲಿ ಮತ್ತು ಪ್ರಯೋಗಾಲಯದಲ್ಲಿ ಫಲವತ್ತಾಗಿಸುವಲ್ಲಿ ಭ್ರೂಣಶಾಸ್ತ್ರಜ್ಞರ ಪಾತ್ರವನ್ನು ತೋರಿಸುತ್ತದೆ.

ಎರಡು ವಾರಗಳ ಕಾಯುವಿಕೆ - ಭ್ರೂಣ ವರ್ಗಾವಣೆ ಮತ್ತು ಗರ್ಭಧಾರಣೆಯ ಪರೀಕ್ಷೆಯ ನಡುವಿನ 10-14 ದಿನಗಳ ಮಧ್ಯಂತರವು ಈ ಚಕ್ರದ ಅತ್ಯಂತ ಸವಾಲಿನ ಭಾಗವಾಗಿದೆ. ಈ ಸಮಯದಲ್ಲಿ ನಿಮ್ಮ ಆಶಾಕಿರಣಗಳಷ್ಟೇ ನಿಮ್ಮ ಆತಂಕಗಳೂ ದೊಡ್ಡದಾಗಿರುತ್ತವೆ. ನಿಯಮಿತ ಚುಚ್ಚುಮದ್ದು, ವೈದ್ಯರ ಭೇಟಿಗಳು ಮತ್ತು ಕಾರ್ಯವಿಧಾನಗಳ ಕಾರಣದಿಂದ ಹಲವಾರು ವಾರಗಳ ಅನಂತರ ಕಾಯುವಿಕೆಯು ಅಹಿತಕರವಾಗಬಹುದು. ಚಿಕಿತ್ಸೆಯ ಈ ಹಂತದಲ್ಲಿ, ಅನೇಕ ಜನರು ವ್ಯಾಪಕವಾದ ಭಾವನೆಗಳನ್ನು ಅನುಭವಿಸುತ್ತಿದ್ದಾರೆ ಮತ್ತು ಗರ್ಭಾವಸ್ಥೆಯ ಲಕ್ಷಣಗಳಿಗೆ ನಿರಂತರ ಎಚ್ಚರಿಕೆಯಿಂದ ಗಮನಿಸುತ್ತಿರುವುದಾಗಿ ವರದಿ ಮಾಡುತ್ತಾರೆ.ಪ್ರಕ್ರಿಯೆಯ ಏರಿಳಿತಗಳನ್ನು ತಿಳಿಯಲು, ಚಿಕಿತ್ಸಾ ಆಯ್ಕೆಗಳೊಂದಿಗೆ ಮಾನಸಿಕ ಆರೋಗ್ಯ ಸಮಾಲೋಚನೆಯನ್ನು ನೀಡುವ ಫಲವಂತಿಕೆ ಕ್ಲಿನಿಕ್ ಅನ್ನು ನೀವು ಆಯ್ಕೆ ಮಾಡಲು ಶಿಫಾರಸು ಮಾಡಲಾಗಿದೆ.

ಭರವಸೆ ಮತ್ತು ಆತಂಕದಲ್ಲಿ ಸಮತೋಲನ- ನಿರಾಶೆಗಳೊಂದಿಗೆ ವ್ಯವಹರಿಸುವಾಗ ಆಶಾವಾದವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುವುದು ಸಂಪೂರ್ಣ IVF ಪ್ರಕ್ರಿಯೆಯ ಕಠಿಣ ಭಾಗವಾಗಿದೆ ಎಂದು ಹಲವರು ಹೇಳುತ್ತಾರೆ. ಆದರೆ, ಬಹುಪಾಲು ಜನರಿಗೆ, ಭರವಸೆ ಮತ್ತು ಆತಂಕಗಳು ಖಗಿಈ ಪ್ರಯಾಣದ ಸಾಮಾನ್ಯ ಅಂಶಗಳಾಗಿವೆ. ಆದರೂ, ಸಂಗಾತಿ ಅಂತಿಮವಾಗಿ ಗರ್ಭಿಣಿಯಾದಾಗ, ಖಗಿಈ ಕಾರ್ಯವಿಧಾನದ ಎಲ್ಲಾ ತೊಂದರೆಗಳು ಸಹ್ಯವೆಂದೂ ಯೋಗ್ಯವೆಂದೂ ತೋರುತ್ತದೆ.

## ನುಗ್ಗೆ ಸೊಪ್ಪು ಅದ್ಭುತವಾದ ಆರೋಗ್ಯ ಪ್ರಯೋಜನ



**ಬೆಂಗಳೂರು:** ನುಗ್ಗೆ ಸೊಪ್ಪು ಅದ್ಭುತವಾದ ಆರೋಗ್ಯ ಪ್ರಯೋಜನಗಳನ್ನು ನೀಡುತ್ತವೆ. ಇದರ ಸೇವನೆಯಿಂದ ಅನೇಕ ಗಂಭೀರ ಕಾಯಿಲೆಗಳು ಹತ್ತಿರವೂ ಸುಳಿಯದಂತೆ ನೋಡಿಕೊಳ್ಳಬಹುದು. ಇದರ ಎಲೆಗಳಲ್ಲಿ ಅನೇಕ ಪೋಷಕಾಂಶಗಳು ಕಂಡುಬರುತ್ತವೆ. ಇದರ ಎಲೆಗಳನ್ನು ಬಳಸುವುದರಿಂದ ಅಧಿಕ ರಕ್ತದೊತ್ತಡದ ಸಮಸ್ಯೆಯಿಂದ ಪರಿಹಾರಸಿಗುತ್ತದೆ.ಮುಂಜಾನೆನುಗ್ಗೆಸೊಪ್ಪಿನಕಷಾಯವನ್ನುಸೇವಿಸುವುದು ಹೆಚ್ಚು ಪ್ರಯೋಜನಕಾರಿಯಾಗಿರಲಿದೆ. ಇದನ್ನು ಬಳಸುವುದರಿಂದ ಅಧಿಕ ರಕ್ತದೊತ್ತಡವನ್ನು ನಿಯಂತ್ರಿಸುವುದು ಮಾತ್ರವಲ್ಲದೆ, ಹಲ್ಲುಗಳನ್ನು ಗಟ್ಟಿಯಾಗಿಸಲು ಇದು ಪ್ರಯೋಜನಕಾರಿಯಾಗಿದೆ.

ನುಗ್ಗೆ ಸೊಪ್ಪಿನ ಕಷಾಯವನ್ನು ಬಳಸಬಹುದು :

ನುಗ್ಗೆ ಸೊಪ್ಪನ್ನು ನಾನಾ ವಿಧಾನಗಳಲ್ಲಿ ಬಳಸಬಹುದು. ನುಗ್ಗೆ ಸೊಪ್ಪಿನ ಕಷಾಯವನ್ನು ತಯಾರಿಸಿ ಸೇವಿಸಬಹುದು. ಇದಕ್ಕಾಗಿ, ಮೊದಲು ಒಂದು ಪಾತ್ರೆಯಲ್ಲಿ ಎರಡು ಕಪ್ ನೀರನ್ನು ಬಿಸಿ ಮಾಡಿ. ಈ ನೀರು ಬಿಸಿಯಾದ ನಂತರ ಅದಕ್ಕೆ ನುಗ್ಗೆ ಸೊಪ್ಪನ್ನು ಸೇರಿಸಿ. ಬೇಕಿದ್ದರೆ ನುಗ್ಗೆ ಬೀಜಗಳನ್ನು ಕೂಡಾ ಸೇರಿಸಬಹುದು. ಈ ನೀರು ಅರ್ಧದಷ್ಟು ಕಡಿಮೆಯಾಗುವವರೆಗೂ ಕುದಿಸಿ. ನಂತರ ಅದಕ್ಕೆ ಕರಿಮೆಣಸಿನ ಪುಡಿ ಮತ್ತು ಉಪ್ಪನ್ನು ಸೇರಿಸಿ. ಫಿಲ್ಟರ್ ಮಾಡಿ ಮತ್ತು ಕುಡಿಯಬಹುದು.

ಅಲ್ಲದೆ ನುಗ್ಗೆ ಸೊಪ್ಪಿನ ಪಲ್ಯವನ್ನು ಮಾಡಿ ಕೂಡಾ ಅದನ್ನು ಸೇವಿಸಬಹುದು.

ಪಲ್ಯವನ್ನು ಒಂದೊಂದು ಭಾಗದಲ್ಲಿ ಒಂದೊಂದು ರೀತಿಯಲ್ಲಿ ತಯಾರಿಸಲಾಗುತ್ತದೆ. ಬೇರೆ ಸೊಪ್ಪಿನ ಪಲ್ಯ ಮಾಡುವಂತೆಯೇ ನುಗ್ಗೆ ಸೊಪ್ಪಿನ ಪಲ್ಯವನ್ನು ಕೂಡಾ ಮಾಡಬಹುದು. ಆದರೆ ಇದರಲ್ಲಿ ಸ್ವಲ್ಪ ಕಹಿ ಅಂಶ ಇರುತ್ತದೆ ಅಷ್ಟೇ.

ನುಗ್ಗೆ ಸೊಪ್ಪಿನಿಂದ ಆರೋಗ್ಯಕ್ಕೆ ಆಗುವ ಪ್ರಯೋಜನಗಳು ಯಾವುವು ?

- ನುಗ್ಗೆ ಸೊಪ್ಪಿನಲ್ಲಿ ಕ್ಯಾಲ್ಸಿಯಂನಲ್ಲಿ ಸಮೃದ್ಧವಾಗಿರುತ್ತದೆ. ಇದು ಮೂಳೆ ಮತ್ತು ಹಲ್ಲುಗಳನ್ನು ಗಟ್ಟಿಗೊಳಿಸುವುದರ ಜೊತೆಗೆ ತೂಕ ನಿಯಂತ್ರಣಕ್ಕೂ ಸಹಕಾರಿ.
- ರಕ್ತವನ್ನು ಶುಚಿಗೊಳಿಸುವಲ್ಲಿಯೂ ನುಗ್ಗೆ ಸೊಪ್ಪು ತುಂಬಾ ಉಪಯುಕ್ತವಾಗಿವೆ.
- ಮಧುಮೇಹ ಮತ್ತು ಹೃದ್ರೋಗಿಗಳಿಗೆ ಈ ಸೊಪ್ಪು ವರದಾನವೇ ಸರಿ.

| ಬೆಳಗಾವಿ | ಬಾಗಲಕೋಟ | ವಿಜಯಪುರ | ಹುಬ್ಬಳ | ಧಾರವಾಡ | ಕೊಪ್ಪಳ | ಕಾರವಾರ | ಹಾವೇರಿ |
|---|---|---|---|---|---|---|---|
| 26/21 °C | 31/24 °C | 31/23 °C | 27/22 °C | 26/21 °C | 30/23 °C | 28/27 °C | 28/26 °C |

**ಕನ್ನಡ ಚಿತ್ರರಂಗದಲ್ಲಿ ಅದ್ದೂರಿ ಮೇಕಿಂಗ್ ಜೊತೆಗೆ ಪ್ರೆಶ್ ಕಂಟೆಂಟ್ ಇರುವ ಸಿನಿಮಾಗಳು ನಿರ್ಮಾಣವಾಗುತ್ತಿದೆ. 2022ರಲ್ಲಿ ಇಡೀ ಭಾರತೀಯ ಚಿತ್ರರಂಗವೇ ಸ್ಯಾಂಡಲ್‌ವುಡ್‌ನತ್ತ ತಿರುಗಿ ನೋಡುವಂತಹ ಸಿನಿಮಾಗಳು ನಿರ್ಮಾಣವಾಗಿವೆ.**

**ಸಿನಿಮಾ ಹಾಗೂ ರಿಯಾಲಿಟಿ ಶೋಗಳಲ್ಲಿ ಮಿಂಚುತ್ತಿರುವ ಹರೀಶ್ ರಾಜ್ ಸಿನಿ ಬದುಕಿಗೆ 25 ವರ್ಷ ತುಂಬಿದೆ. ಈ ಬೆಳ್ಳಿ ಸಂಭ್ರಮದ ಖುಷಿಯಲ್ಲಿರುವ ಹರೀಶ್ ರಾಜ್ ಮತ್ತೆ ನಿರ್ದೇಶನದತ್ತ ಮುಖ ಮಾಡಿದ್ದಾರೆ.**

**ಬಾಲಿವುಡ್ ಕಿಂಗ್ ಶಾರುಖ್ ಖಾನ್ ಅಭಿನಯದ ಮುಂದಿನ ಬಹುನಿರೀಕ್ಷಿತ ಸಿನಿಮಾ 'ಜವಾನ್'. ಪ್ರೇಕ್ಷಕರು ಸಿನಿಮಾ ಕುರಿತು ತಮ್ಮ ಉತ್ಸಾಹ, ಕುತೂಹಲ, ನಿರೀಕ್ಷೆ ವ್ಯಕ್ತಪಡಿಸುತ್ತಿದ್ದಾರೆ. ಚಿತ್ರದ ಮೊದಲ ಹಾಡು ಜಿಂದಾ ಬಂದಾ ಶೀಘ್ರದಲ್ಲೇ ಅನಾವರಣಗೊಳ್ಳಲಿದೆ.**

# ಮೊದಲ ಪಂದ್ಯದಲ್ಲೇ ಸ್ಪೇನ್ ಎದುರು ಭಾರತ ಹಾಕಿ ತಂಡಕ್ಕೆ ಸೋಲು–

ಟೆರಾಸ್ಸಾ (ಸ್ಪೇನ್) : ಇಲ್ಲಿ ನಡೆಯುತ್ತಿರುವ 100ನೇ ವಾರ್ಷಿಕೋತ್ಸವದ ಸ್ಪ್ಯಾನಿಷ್ ಹಾಕಿ ಫೆಡರೇಷನ್ ಅಂತಾರಾಷ್ಟ್ರೀಯ ಪಂದ್ಯಾವಳಿಯ ಆರಂಭಿಕ ಪಂದ್ಯದಲ್ಲಿ ಸ್ಪೇನ್ ವಿರುದ್ಧ 1–2 ಅಂತರದಿಂದ ಭಾರತ ಪುರುಷರ ಹಾಕಿ ತಂಡ ಸೋಲು ಕಂಡಿದೆ.

ಮಂಗಳವಾರ ನಡೆದ ಪಂದ್ಯದಲ್ಲಿ ಭಾರತ ತಂಡವು ಹೋರಾಟದ ಪ್ರದರ್ಶನ ನೀಡಿದ್ದರೂ ಸಹಾ ಆತಿಥೇಯ ಸ್ಪೇನ್ ತಂಡವನ್ನು ಬಗ್ಗು ಬಡಿಯಲು ಸಾಧ್ಯವಾಗಲಿಲ್ಲ.ಪೌ ಕುನಿಲ್ 11ನೇ ನಿಮಿಷದಲ್ಲಿ ಮತ್ತು ಜೋಕ್ವಿನ್ ಮೆನಿನಿ 33ನೇ ನಿಮಿಷದಲ್ಲಿ ಗೋಲು ಹೊಡೆದು ಸ್ಪೇನ್ ಶುಭಾರಂಭ ಮಾಡಲು ಕಾರಣರಾದರು. ಮೊದಲ ಕ್ವಾರ್ಟರ್‌ನಲ್ಲಿ ಭಾರತ ಪ್ರಬಲ ಒತ್ತಡದೊಂದಿಗೆ ಆಕ್ರಮಣಕಾರಿಯಾಗಿ ಪಂದ್ಯ ಪ್ರಾರಂಭಿಸಿತು.

ಆದರೆ, ಮುನ್ನಡೆ ಸಾಧಿಸಲು ವಿಫಲವಾಯಿತು. ಮೊದಲ ಕ್ವಾರ್ಟರ್‌ನಲ್ಲಿ ಬಿಗಿ ಹಿಡಿತ ಸಾಧಿಸಿದ ಸ್ಪೇನ್ ತಾಳ್ಮೆ ಆಟವಾಡಿ ಪೌ ಕುನಿಲ್ 11ನೇ ನಿಮಿಷದಲ್ಲಿ ಹೊಡೆದ ಗೋಲಿನಿಂದ ಮುನ್ನಡೆ ಸಾಧಿಸಿತು.ಬಳಿಕ ಎರಡನೇ ಕ್ವಾರ್ಟರ್‌ನಲ್ಲಿಯೂ ಭಾರತ ಪಂದ್ಯವನ್ನು ಸಮಬಲ ಮಾಡಿಕೊಳ್ಳುವ ಹುಡುಕಾಟದಲ್ಲಿ ಪ್ರತಿದಾಳಿಗಳನ್ನು ಪ್ರಾರಂಭಿಸಲು ಪ್ರಯತ್ನಿಸಿತು. ಆದರೆ, ಎರಡನೇ ಕ್ವಾರ್ಟರ್ ಗೋಲು ರಹಿತವಾಗಿ ಕೊನೆಗೊಂಡಿತ್ತು. ಈ ಮೂಲಕ ಅರ್ಧ ಸಮಯದಲ್ಲಿ ಸ್ಪೇನ್ 1–0 ಮುನ್ನಡೆ ಸಾಧಿಸಿತು. ಮೂರನೇ ಕ್ವಾರ್ಟರ್‌ನಲ್ಲಿ ಭಾರತದ ಗೋಲು ಹೊಡೆಯುವ ಪ್ರಯತ್ನವನ್ನು ಆರಂಭವಾಯಿತು.

ಆದರೂ ರಕ್ಷಣಾ ಕ್ಷೇತ್ರದಲ್ಲಿ ಆತಿಥೇಯರು ಭಾರತವನ್ನು ತಡೆಯುವಲ್ಲಿ ಯಶಸ್ವಿಯಾದರು. ಈ ವೇಳೆ, ಜೋಕ್ವಿನ್ ಮೆನಿನಿ 33ನೇ ನಿಮಿಷದಲ್ಲಿ ಗೋಲು ಗಳಿಸುವ ಮೂಲಕ ಸ್ಪೇನ್ 2–0 ಮುನ್ನಡೆ ಕಾಯ್ದುಕೊಂಡಿತ್ತು.ಮತ್ತೊಂದೆಡೆ ಎರಡು ಗೋಲುಗಳಿಂದ ಹಿನ್ನಡೆಯಲ್ಲಿದ್ದ ಭಾರತವು ಸ್ಪೇನ್ ಮೇಲೆ ನಿರಂತರ ಒತ್ತಡ ಹೇರಲು ತನ್ನ ಗೇರ್ ಬದಲಾಯಿಸಿ ಪೆನಾಲ್ಟಿ ಕಾರ್ನರ್ ಅನ್ನು ಸಹ ಗೆದ್ದಿತು. ಆದರೆ ಪೆನಾಲ್ಟಿ ಲಾಭ ಪಡೆಯುವಲ್ಲಿ ಎಡವಿತು.

ಹರ್ಮನ್‌ಪ್ರೀತ್ ಸಿಂಗ್ ಹೊಡೆದ ಗೋಲನ್ನು ಸ್ಪೇನ್ ಗೋಲ್‌ಕೀಪರ್ ಗೋಲು ತಡೆಯುವಲ್ಲಿ ಯಶಸ್ವಿಯಾದರು. ಇದರೊಂದಿಗೆ ಸ್ಪೇನ್ ಎರಡು ಗೋಲುಗಳ ಮುನ್ನಡೆಯೊಂದಿಗೆ ಪಂದ್ಯದ ಅಂತಿಮ 15 ನಿಮಿಷಗಳನ್ನು ಪ್ರವೇಶಿಸಿತು. ಪಂದ್ಯಕ್ಕೆ ಮರಳುವ ಪ್ರಯತ್ನದಲ್ಲಿ ಭಾರತ ನಾಲ್ಕನೇ ಕ್ವಾರ್ಟರ್‌ನಲ್ಲಿ ಬಲಿಷ್ಠವಾಗಿ ಹೊರಬಂದಿತು. ಕೆಲವು ಉತ್ತಮ ಸ್ಕೋರಿಂಗ್ ಅವಕಾಶಗಳು ಇದ್ದರೂ ಮೊದಲ ಗೋಲು ಹುಡುಕಲು ಹೆಣಗಾಡಿತು. ಭಾರತ ಬ್ಯಾಕ್ ಟು ಬ್ಯಾಕ್ ಪೆನಾಲ್ಟಿ ಕಾರ್ನರ್‌ಗಳನ್ನು ಗೆದ್ದರೂ, ಅವುಗಳಲ್ಲಿ ಯಾವುದನ್ನೂ ಗೋಲನ್ನಾಗಿ ಪರಿವರ್ತಿಸಲು ಸಾಧ್ಯವಾಗಲಿಲ್ಲ.

ಆದರೂ ಧೃತಿಗೆಡದ ಭಾರತವು ಆತಿಥೇಯ ತಂಡದ ರಕ್ಷಣೆಯ ಮೇಲೆ ಒತ್ತಡವನ್ನು ಮುಂದುವರೆಸಿತು. ಈ ವೇಳೆ ನಾಯಕ ಹರ್ಮನ್‌ಪ್ರೀತ್ ಸಿಂಗ್ 59ನೇ ನಿಮಿಷದಲ್ಲಿ ಪೆನಾಲ್ಟಿ ಕಾರ್ನರ್ ಅನ್ನು ಪರಿವರ್ತಿಸಿ ಭಾರತದ ಪರ ಮೊದಲ ಗೋಲು ದಾಖಲಿಸಿದರು. ಆದರೆ ರಕ್ಷಣಾತ್ಮಕ ಆಟವಾಡಿದ ಸ್ಪೇನ್ ಭಾರತವನ್ನು ಮತ್ತೊಂದು ಗೋಲು ಗಳಿಸದಂತೆ ತಡೆಯಿತು. ಇದರಿಂದಾಗಿ ಪಂದ್ಯವು ಆತಿಥೇಯರ ಪರವಾಗಿ 2–1 ರಲ್ಲಿ ಕೊನೆಗೊಂಡಿತು. ಭಾರತ ತನ್ನ ಎರಡನೇ ಪಂದ್ಯದಲ್ಲಿ ನೆದರ್ಲೆಂಡ್ಸ್ ವಿರುದ್ಧ ಸೆಣಸಾಡಲಿದೆ.

# ಭಾರತೀಯ ಫುಟ್ಬಾಲ್ ತಂಡಗಳ ಭಾಗವಹಿಸುವಿಕೆಗೆ ಗ್ರೀನ್ ಸಿಗ್ನಲ್ ನೀಡಿದ ಕ್ರೀಡಾ ಇಲಾಖೆ



ಭಾರತದ ಫುಟ್ಬಾಲ್ ಪ್ರೇಮಿಗಳಿಗೆ ಸಿಹಿಸುದ್ದಿಯೊಂದು ಹೊರಬಿದ್ದಿದೆ. ಮುಂದಿನ ಸೆಪ್ಟೆಂಬರ್‌ನಲ್ಲಿ ಚೀನಾದಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸಲು ಭಾರತ ಪುರುಷ ಮತ್ತು ಮಹಿಳಾ ಫುಟ್‌ಬಾಲ್ ತಂಡಗಳಿಗೆ ಗ್ರೀನ್ ಸಿಗ್ನಲ್ ದೊರೆತಿದೆ. ಏಷ್ಯಾದ ಅತಿ ದೊಡ್ಡ ಕ್ರೀಡಾಕೂಟದಲ್ಲಿ ಈ ಎರಡೂ ತಂಡಗಳು ಭಾಗವಹಿಸಲು ಅನುಕೂಲವಾಗುವಂತೆ ನಿಯಮಗಳನ್ನು ಸಡಿಲಿಸಲು ತಮ್ಮ ಸಚಿವಾಲಯ ನಿರ್ಧರಿಸಿದೆ ಎಂದು ಕ್ರೀಡಾ ಸಚಿವ ಅನುರಾಗ್ ಠಾಕೂರ್ ಟ್ವೀಟ್‌ನಲ್ಲಿ ಖಚಿತಪಡಿಸಿದ್ದಾರೆ.

"ಈಗಾಗಲೇ ಇರುವ ಮಾನದಂಡದ ಪ್ರಕಾರ ಅರ್ಹತೆ ಪಡೆಯದ ಭಾರತದ ಪುರುಷ ಹಾಗೂ ಮಹಿಳಾ ಫುಟ್ಬಾಲ್ ತಂಡಗಳ ಭಾಗವಹಿಸುವಿಕೆಗೆ ಅನುಕೂಲವಾಗುವಂತೆ ನಿಯಮಗಳನ್ನು ಸಡಿಲಿಸಲಾಗಿದೆ. ಭಾರತ ಸರ್ಕಾರದ ಯೂತ್ ಅಫೇರ್ಸ್ ಮತ್ತು ಕ್ರೀಡಾ ಸಚಿವಾಲಯ ಈ ನಿರ್ಧಾರ ತೆಗೆದುಕೊಂಡಿದೆ" ಎಂದು ಅನುರಾಗ್ ಠಾಕೂರ್ ಜುಲೈ 26 ರಂದು ಟ್ವಿಟರ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

"ಇತ್ತೀಚಿನ ದಿನಗಳಲ್ಲಿ ನೀಡುತ್ತಿರುವ ಅತ್ಯುತ್ತಮ ಪ್ರದರ್ಶನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಎರಡು ತಂಡಗಳಿಗೂ ಅನುಕೂಲವಾಗುವ ರೀತಿಯಲ್ಲಿ ನಿಯಮಗಳಲ್ಲಿ ಸಡಿಲಮಾಡಿದೆ. ಏಷ್ಯನ್ ಗೇಮ್ಸ್ ಕ್ರೀಡಾ ಕೂಟದಲ್ಲಿ ಈ ಎರಡು ತಂಡಗಳು ಕೂಡ ಅತ್ಯುತ್ತಮ ಪ್ರದರ್ಶನ ನೀಡುವ ಮೂಲಕ ಇಡೀ ದೇಶ ಹೆಮ್ಮೆ ಪಡುವಂತೆ ಮಾಡಿ ಎನ್ನುವುದು ಆಶಯ" ಎಂದು ಅನುರಾಗ್ ಠಾಕೂರ್ ಟ್ವೀಟ್‌ನಲ್ಲಿ ಬರೆದುಕೊಂಡಿದ್ದಾರೆ.

ಗಮನಾರ್ಹ ಅಂಶವೆಂದರೆ ಭಾರತ 2018ರ ಏಷ್ಯನ್ ಗೇಮ್ಸ್‌ನಲ್ಲಿ ಇದೇ ನಿಯಮದ ಕಾರಣದಿಂದಾಗಿ ಭಾಗವಹಿಸುವ ಅರ್ಹತೆಯನ್ನು ಪಡೆದುಕೊಂಡಿರಲಿಲ್ಲ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಇತ್ತೀಚಿನ ದಿನಗಳಲ್ಲಿ ಹಲವು ಅತ್ಯುತ್ತಮ ಪ್ರದರ್ಶನಗಳನ್ನು ನೀಡಿದ ಹೊರತಾಗಿ ಈ ಬಾರಿಯೂ ಭಾರತದ ಫುಟ್ಬಾಲ್ ತಂಡ ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸುವುದೇ ಹೊರಗುಳಿಯುವ ಸಾಧ್ಯತೆಯೇ ಹೆಚ್ಚಿತ್ತು. ಆದರೆ ನಿಯಮದಲ್ಲಿ ಬದಲಾವಣೆ ಮಾಡಿಕೊಂಡಿರುವ ಕಾರಣ ಮತ್ತೆ ಭಾರತ ಫುಟ್ಬಾಲ್ ತಂಡ ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸುವ ಅವಕಾಶ ಪಡೆದುಕೊಂಡಿದೆ.

ಏಷ್ಯನ್ ಗೇಮ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಲು ತಂಡ ಕ್ರೀಡೆಗಳು ಏಷ್ಯಾದಲ್ಲಿ ಟಾಪ್ 8ರಲ್ಲಿ ಸ್ಥಾನವನ್ನು ಪಡೆಯುವುದು ಕಡ್ಡಾಯ ಎಂಬ ನಿಯಮವನ್ನು ಹೊಂದಿದೆ. ಆದರೆ ಭಾರತದ ಫುಟ್ಬಾಲ್ ತಂಡ ಏಷ್ಯಾದಲ್ಲಿ ಪ್ರಸ್ತುತ 18ನೇ ಸ್ಥಾನದಲ್ಲಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಭಾರತ ಖಂಈಈ ಚಾಂಪೊಯನ್‌ಶಿಪ್ ಹಾಗೂ ಜೂನ್ ಜುಲೈನಲ್ಲಿ ನಡೆದ ಇಂಟರ್‌ಕಾಂಟಿನೆಂಟಲ್ ಕಪ್‌ನಲ್ಲಿ ಅದ್ಭುತ ಪ್ರದರ್ಶನ ನೀಡಿ ಚಾಂಪಿಯನ್ ಎನಿಸಿಕೊಳ್ಳುವ ಮೂಲಕ ಸ್ಥಿರ ಪ್ರದರ್ಶನ ನೀಡಿ ಗಮನಸೆಳೆದುಕೊಂಡಿದೆ.



**ವೆಸ್ಟ್ ಇಂಡೀಸ್ ವಿರುದ್ಧ ಟಿ–20 ಸರಣಿ ಆಡಲು ಯುವ ಬ್ಯಾಟ್ಸ್ ಮನ್ ತಿಲಕ್ ವರ್ಮಾ ಟೀಂ ಇಂಡಿಯಾ ಸೇರಿದ್ದಾರೆ.**

**ಇಶಾನ್ ಕಿಶನ್ (ವಿಕೀ), ಶುಭಮನ್ ಗಿಲ್, ಯಶಸ್ವಿ ಜೈಸ್ವಾಲ್, ತಿಲಕ್ ವರ್ಮಾ, ಸೂರ್ಯಕುಮಾರ್ ಯಾದವ್ (ಉಪನಾಯಕ), ಸಂಜು ಸ್ಯಾಮ್ಸನ್ (ವಿಕೀ), ಹಾರ್ದಿಕ್ ಪಾಂಡ್ಯ (ನಾಯಕ), ಅಕ್ಷರ್ ಪಟೇಲ್, ಯುಜ್ವೇಂದ್ರ ಚಾಹಲ್, ಕುಲದೀಪ್ ಯಾದವ್ , ರವಿ ಬಿಷ್ಣೋಯ್, ಅರ್ಷದೀಪ್ ಸಿಂಗ್, ಉಮ್ರಾನ್ ಮಲಿಕ್, ಅವೇಶ್ ಖಾನ್ ಮತ್ತು ಮುಖೇಶ್ ಕುಮಾರ್.**

# ಕೇವಲ 41 ಎಸೆತಗಳಲ್ಲಿ ಸೆಂಚುರಿ, ಮೇಜರ್ ಲೀಗ್ ಕ್ರಿಕೆಟ್‌ನಲ್ಲಿ ಹೆನ್ರಿಕ್ ಕ್ಲಾಸೆನ್ ದಾಖಲೆ!



ಮೋರಿಸ್ ವಿಲ್(ಅಮೇರಿಕ): ಇಲ್ಲಿ ನಡೆಯುತ್ತಿರುವ ಮೇಜರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಸಿಯಾಟಲ್ ಓರ್ಕಾಸ್ ತಂಡದ ಪರ ಹೆನ್ರಿಕ್ ಕ್ಲಾಸೆನ್ ಚೊಚ್ಚಲ ಶತಕ ಸಿಡಿಸಿದ್ದಾರೆ. ಇವರ ಶತಕದ ಬಲದಿಂದ ಎಂಐ ನ್ಯೂಯಾರ್ಕ್ ತಂಡದ ವಿರುದ್ಧ ಸಿಯಾಟಲ್ ಓರ್ಕಾಸ್ ತಂಡ ಎರಡು ವಿಕೆಟ್‌ಗಳ ರೋಚಕ ಗೆಲುವು ಸಾಧಿಸಿದೆ.

ಇಲ್ಲಿನ ಚರ್ಚ್ ಸ್ಟ್ರೀಟ್ ಪಾರ್ಕ್‌ನಲ್ಲಿ ನಡೆದಿದ್ದ ಪಂದ್ಯದಲ್ಲಿ ಎಂಐ ನ್ಯೂಯಾರ್ಕ್ ನೀಡಿದ್ದ 195 ರನ್ ಕಠಿಣ ಗುರಿ ಹಿಂಬಾಲಿಸಿದ ಓರ್ಕಾಸ್, ಅನುಭವಿ ಸ್ಪಿನ್ನರ್ ರಶೀದ್ ಖಾನ್ ಅವರ ಸ್ಪಿನ್ ಮೋಡಿಗೆ ಸಿಲುಕಿ 37 ರನ್‌ಗಳಿಗೆ ಕ್ವಿಂಟನ್ ಡಿ ಕಾಕ್ (9 ರನ್) ಹಾಗೂ ಶೆಹನ್ ಜಯಸೂರ್ಯ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಆದರೆ 3ನೇ ವಿಕೆಟ್‌ಗೆ ಜೊತೆಯಾದ ನೌಮನ್ ಅನ್ವರ್ (51 ರನ್,6X4,3X6) ಹಾಗೂ ಹೆನ್ರಿಕ್ ಕ್ಲಾಸೆನ್ (110* ರನ್, 9X4, 7X6) 62 ರನ್‌ಗಳ ಜೊತೆಯಾಟವಾಡಿ ತಂಡಕ್ಕೆ ಗೆಲುವಿನ ಭರವಸೆ ಮೂಡಿಸಿದರು.

ಪಂದ್ಯದಲ್ಲಿ ಒಂದು ಮೇಡಿನ್ ಓವರ್‌ನೊಂದಿಗೆ 2 ವಿಕೆಟ್ ಪಡೆದು ಗಮನ ಸೆಳೆದಿದ್ದ ರಶೀದ್ ಖಾನ್ ಅವರ ಕೊನೆಯ ಓವರ್‌ನಲ್ಲಿ ಸಿಯಾಟಲ್ ಓರ್ಕಾಸ್ ಆಟಗಾರ ಹೆನ್ರಿಕ್ ಕ್ಲಾಸೆನ್ ಹ್ಯಾಟ್ರಿಕ್ ಸಿಕ್ಸರ್ ಸಿಡಿಸಿ 26 ರನ್ ಬಾರಿಸಿದ್ದರು. ಆ ಮೂಲಕ 41 ಎಸೆತಗಳಲ್ಲೇ ವೇಗದ ಶತಕ ಸಿಡಿಸಿದರು. ಆ ಮೂಲಕ ಮೇಜರ್ ಲೀಗ್ ಕ್ರಿಕೆಟ್‌ನಲ್ಲಿ ಶತಕ ಸಿಡಿಸಿದ ಮೊದಲ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ.

ಇನಿಂಗ್ಸ್‌ನ ಉದ್ದಕ್ಕೂ ಏಕಾಂಗಿ ಹೋರಾಟ ನಡೆಸಿದ ಕ್ಲಾಸೆನ್ 44 ಎಸೆತಗಳಿಂದ 9 ಮನಮೋಹಕ ಬೌಂಡರಿ ಹಾಗೂ 7 ಭರ್ಜರಿ ಸಿಕ್ಸರ್ ನೆರವಿನಿಂದ 110* ರನ್‌ಗಳನ್ನು ಸಿಡಿಸಿದ್ದಾರೆ. ಇದರೊಂದಿಗೆ ಸಿಯಾಟಲ್ ಓರ್ಕಾಸ್ ತಂಡ 19.2 ಓವರ್‌ಗಳಿಗೆ 2 ವಿಕೆಟ್ ರೋಚಕ ಗೆಲುವು ಪಡೆಯಿತು. ಆ ಮೂಲಕ ಓರ್ಕಾಸ್ ತಂಡ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಎಂಐ ನ್ಯೂಯಾರ್ಕ್ ಪರ ವೇಗಿ ಟ್ರೆಂಟ್ ಬೌಲ್ಟ್ (31 ಕ್ಕೆ 4) ಹಾಗೂ ರಶೀದ್ ಖಾನ್ (41 ಕ್ಕೆ 2) ಯಶಸ್ವಿ ಬೌಲರ್‌ಗಳೆನಿಸಿಕೊಂಡರು.

ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡುವಂತಾದ ಎಂಐ ನ್ಯೂಯಾರ್ಕ್, 65 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಆದರೆ, 4ನೇ ವಿಕೆಟ್ ಗೆ ಜೊತೆಗೂಡಿದ ನಾಯಕ ಕೈರೋನ್ ಪೋಲಾರ್ಡ್ (34 ರನ್, 1X4,3X6) ಹಾಗೂ ನಿಕೋಲಸ್ ಪೂರನ್ (68 ರನ್, 3X4,7X6) 67 ರನ್‌ಗಳ ಜೊತೆಯಾಟವನ್ನು ಆಡಿದರು. ಡೆತ್ ಓವರ್‌ಗಳಲ್ಲಿ ಟ್ರೆಂಟ್ ಬೌಲ್ಟ್ ಸಿಡಿಲಬ್ಬರದ ಬ್ಯಾಟಿಂಗ್ (20 ರನ್, 1ಥಿ4,2ಥಿ6) ನಡೆಸಿದರು. ಇದರ ಫಲವಾಗಿ ನಿಗದಿತ 20 ಓವರ್‌ಗಳಲ್ಲಿ ಎಂಐ ನ್ಯೂಯಾರ್ಕ್ 8 ವಿಕೆಟ್ ನಷ್ಟಕ್ಕೆ 194 ಬೃಹತ್ ಮೊತ್ತ ಕಲೆ ಹಾಕಿತ್ತು.

ಎಂಐ ನ್ಯೂಯಾರ್ಕ್ ವಿರುದ್ಧ 2 ವಿಕೆಟ್ ರೋಚಕ ಗೆಲುವು ಪಡೆದ ಸಿಯಾಟಲ್ ಓರ್ಕಾಸ್ ಲೀಗ್‌ನಲ್ಲಿ ಆಡಿದ 5 ಪಂದ್ಯಗಳಿಂದ 4ರಲ್ಲಿ ಗೆಲುವು ಪಡೆದಿದೆ. ಆ ಮೂಲಕ ಅಂಕಪಟ್ಟಿಯಲ್ಲಿ ಅಗ್ರಸ್ಥಾನದೊಂದಿಗೆ ಪ್ಲೇಆಫ್ಸ್‌ಗೆ ಲಗ್ಗೆ ಇಟ್ಟಿತು. ಫಾಫ್ ಡುಪ್ಲೆಸಿಸ್ ಸಾರಥ್ಯದ ಟೆಕ್ಸಾಸ್ ಸೂಪರ್ ಕಿಂಗ್ಸ್, ವಾಷಿಂಗ್ಟನ್ ಫ್ರೀಡಂ ಹಾಗೂ ಎಂಐ ನ್ಯೂಯಾರ್ಕ್ ತಂಡಗಳು ನಾಕ್‌ಔಟ್‌ಗೆ ಅರ್ಹತೆ ಪಡೆದವು. ಲಾಸ್ ಏಂಜಲೀಸ್ ನೈಟ್ ರೈಡರ್ಸ್ ಹಾಗೂ ಫ್ರಾನ್ಸಿಸ್ಕೊ ಯುನಿಕಾರ್ನ್ಸ್ ತಂಡಗಳು ಟೂರ್ನಿಯಿಂದ ಹೊರಬಿದ್ದಿವೆ.

# ಟೆಸ್ಟ್ ನಾಯಕನಾಗಿ ಕಮ್ಮಿನ್ಸ್ ಮುಂದುವರೆಯಲಿ ಮಾಜಿ ಕ್ರಿಕೆಟಿಗ ಡಾಮಿಯನ್ ಫ್ಲೆಮಿಂಗ್



ನವದೆಹಲಿ : ಆಸ್ಟ್ರೇಲಿಯಾ ಟೆಸ್ಟ್ ತಂಡದ ನಾಯಕತ್ವದ ಬಗ್ಗೆ ಚರ್ಚೆ ಆರಂಭವಾಗಿದ್ದು, ಇದರ ಬೆನ್ನಲೇ ಪ್ಯಾಟ್ ಕಮ್ಮಿನ್ಸ್ ಟೆಸ್ಟ್ ತಂಡದ ನಾಯಕರಾಗಿ ಮುಂದುವರೆಯಲು ಆಸ್ಟ್ರೇಲಿಯಾದ ಮಾಜಿ ಕ್ರಿಕೆಟಿಗ ಡಾಮಿಯನ್ ಫ್ಲೆಮಿಂಗ್ ಬೆಂಬಲ ಸೂಚಿಸಿದ್ದಾರೆ.

ಕಮ್ಮಿನ್ಸ್ ನಾಯಕ ಜವಾಬ್ದಾರಿಯನ್ನು ಚೆನ್ನಾಗಿ ನಿಭಾಯಿಸಿದ್ದಾರೆ ಎಂದಿರುವ ಫ್ಲೆಮಿಂಗ್, ಒಂದು ಅಂತಿಮ ಗೆರೆ ಇದೆ. ಅದರ ಬಗ್ಗೆ ಅವನಿಗೆ (ಕಮ್ಮಿನ್ಸ್) ಮಾತ್ರ ತಿಳಿದಿದೆ. ಅವನು ಅದನ್ನು ಮುಂದುವರಿಸಬೇಕು ಎಂದು ನಾನು ಬಯಸುತ್ತೇನೆ. ಅದು ಯಾರಿಗೆ ಹೋಗುತ್ತದೆ ಎಂದು ನನಗೆ ತಿಳಿದಿಲ್ಲ.


ಈಗಾಗಲೇ ಸ್ಟೀವ್ ಸ್ಮಿತ್ ಅವರು ಎಷ್ಟು ಸಮಯದವರೆಗೆ ಆಡುತ್ತಾರೆ ಎಂದು ಕೆಲವರು ಪ್ರಶ್ನಿಸುತ್ತಿದ್ದಾರೆ. ಟ್ರಾವಿಸ್ ಹೆಡ್ ಚಿಕ್ಕ ವಯಸ್ಸಿನಿಂದಲೂ ದಕ್ಷಿಣ ಆಸ್ಟ್ರೇಲಿಯಾದ ನಾಯಕರಾಗಿದ್ದರಿಂದ ಸಂಭವನೀಯ ಆಯ್ಕೆಯಾಗಿರಬಹುದು ಎಂದು ನಾಯಕತ್ವದ ಕುರಿತು ಡಾಮಿಯನ್ ಫ್ಲೆಮಿಂಗ್ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆಸ್ಟ್ರೇಲಿಯಾ ತಂಡಕ್ಕೆ ಒಬ್ಬ ನಾಯಕ 3 ರಿಂದ 4 ವರ್ಷಗಳು ಸೂಕ್ತ ಎಂದೆನಿಸುತ್ತದೆ. ಏಕೆಂದರೆ ಒಂದೆರಡು ವರ್ಷಗಳಲ್ಲಿ ಕಮ್ಮಿನ್ಸ್ ಯಶಸ್ವಿ ನಾಯಕನಾಗಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಗೆದ್ದಿದ್ದಾರೆ. ಮುಂದಿನ ದಿನಗಳಲ್ಲಿ ಅದನ್ನು ಉಳಿಸಿಕೊಳ್ಳುತ್ತಾರೆ ಎನ್ನುವ ನಂಬಿಕೆ ನನಗೆ ಇದೆ.

ಅಲ್ಲದೇ ಆಸ್ಟ್ರೇಲಿಯಾ ತಂಡಕ್ಕೆ ಕಮಿನ್ಸ್ ನಾಯಕನಾಗಿ ಬೌಲಿಂಗ್ ಮಾಡುವಾಗ ಮೈದಾನದಲ್ಲಿ ಸ್ಮಿತ್‌ಗಿಂತ ಹೆಚ್ಚಿನ ಅಗತ್ಯವಿದೆ. ಸ್ಟೀವ್ ಸ್ಮಿತ್ ಬ್ಯಾಕ್‌ವರ್ಡ್ ಸ್ಕ್ವೇರ್ ಲೆಗ್‌ನಲ್ಲಿ ಫೀಲ್ಡಿಂಗ್‌ಮಾಡುತ್ತಿದ್ದು,ತಂಡಕ್ಕೆಇದುಅನುಕೂಲಕರವಾಗಿದೆ. ಈ ನಿಟ್ಟಿನಲ್ಲಿ ಕೆಲಸವಾಗಬೇಕು.ಏಕೆಂದರೆ ಕಮ್ಮಿನ್ಸ್ ಬೌಲಿಂಗ್ ಮಾಡುತ್ತಿರುವುದರಿಂದ ಎಲ್ಲಿ ಯಾವ ಆಟಗಾರನ್ನು ಫೀಲ್ಡಿಂಗ್ ನಿಲ್ಲಿಸಬೇಕು ಎಂಬುದು ಚೆನ್ನಾಗಿ ಗೊತ್ತಿದೆ. ಸ್ಮಿತ್ ನಾಯಕನಾದರೆ ಬ್ಯಾಕ್‌ವರ್ಡ್ ಸ್ಕೇರ್ ಲೆಗ್‌ನಲ್ಲಿ ಫೀಲ್ಡಿಂಗ್ ಮಾಡಲು ಸಾಧ್ಯವಾಗುವುದಿಲ್ಲ. ಹಾಗೂ ಉಳಿದ ಆಟಗಾರರನ್ನು ಫೀಲ್ಡಿಂಗ್ ನಿಲ್ಲಿಸಲು ಸಮಸ್ಯೆಯಾಗಬಹುದು ಎಂದು ಕಮ್ಮಿನ್ಸ್ ಪರ ಫ್ಲೆಮಿಂಗ್ ಬ್ಯಾಟ್ ಬೀಸಿದ್ದಾರೆ.

ನಾವು ಮೊದಲ ಎರಡು ಟೆಸ್ಟ್‌ಗಳನ್ನು ಗೆದ್ದಿದ್ದು, ನಾವು ಆಶಸ್ ಅನ್ನು ಉಳಿಸಿಕೊಂಡಿದ್ದೇವೆ. ಹೀಗಾಗಿ ಓವಲ್‌ನಲ್ಲಿ ಗುರುವಾರದಿಂದ ಐದನೇ ಆಶಸ್ ಟೆಸ್ಟ್ ಪ್ರಾರಂಭವಾಗುತ್ತಿದೆ. ಇದು ಅಂತಿಮ ಟೆಸ್ಟ್ ಆಗಿರುವುದರಿಂದ ಸರಣಿಯನ್ನು 3–1 ರಿಂದ ಆಸ್ಟ್ರೇಲಿಯಾ ತಮ್ಮದಾಗಿಸಿಕೊಳ್ಳುವ ಎಲ್ಲ ಸಾಮರ್ಥ್ಯ ಹೊಂದಿದೆ ಎಂದು ಫ್ಲೆಮಿಂಗ್ ಹೇಳಿದ್ದಾರೆ. ಕೆಲವು ದಿನಗಳಿಂದೆ ಆಸ್ಟ್ರೇಲಿಯಾ ಮಾಜಿ ನಾಯಕ ರಿಕಿ ಪಾಂಟಿಂಗ್ ಅವರು ಕೂಡ ಪ್ಯಾಟ್ ಕಮ್ಮಿನ್ಸ್ ಅವರನ ಗುಣಗಾನ ಮಾಡಿದ್ದರು. ಕಮ್ಮಿನ್ಸ್ ಹಳೆಯ ಶೈಲಿಯ ಟೆಸ್ಟ್ ನಾಯಕ. ಮೈದಾನದಲ್ಲಿ ಆಟದ ಕುರಿತು ಯೋಜನೆಗಳನ್ನು ಬಿಚ್ಚಿಡಲು ಆಟಗಾರರಿಗೆ ಅವಕಾಶ ನೀಡುತ್ತಾರೆ ಎಂದಿದ್ದರು.

2021 ರ ಆಶಸ್ ಟೆಸ್ಟ್ ಸರಣಿಗೆ ಮುಂಚಿತವಾಗಿ ಆಸ್ಟ್ರೇಲಿಯಾ ಮಾಜಿ ನಾಯಕ ಟಿಮ್ ಪೈನ್ ಅವರ ತಮ್ಮ ಸ್ಥಾನಕ್ಕೆ ಹಠಾತ್ ರಾಜೀನಾಮೆ ನೀಡಿದ್ದರು. ನಂತರ ಟೆಸ್ಟ್ ನಾಯಕನಾಗಿ ಕಮ್ಮಿನ್ಸ್ ಉತ್ತಮ ರನ್ ಗಳಿಸಿದ್ದು, ಆಸ್ಟ್ರೇಲಿಯನ್ ವೇಗದ ಬೌಲಿಂಗ್ ಮುಂಚೂಣಿಯ ತನ್ನ ನಾಯಕತ್ವದಲ್ಲಿ ಕೊನೆಯ ಆಶಸ್ ಸರಣಿಯನ್ನು 4–0 ಅಂತರದಲ್ಲಿ ಗೆದ್ದಿದ್ದರು. ಬಳಿಕ ಪಾಕಿಸ್ತಾನ, ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಆಫ್ರಿಕಾ ವಿರುದ್ಧ ಟೆಸ್ಟ್ ಸರಣಿಗಳನ್ನು ಗೆದ್ದಿತು. ಆದರೆ, ಕಳೆದ ವರ್ಷ ಮಾತ್ರ ಶ್ರೀಲಂಕಾ ವಿರುದ್ಧ ಆಸ್ಟ್ರೇಲಿಯಾ 1–1 ಸಮಬಲ ಸಾಧಿಸಿತ್ತು. ಈಗ ಆಶಸ್ ಸರಣಿಯ ನಾಲ್ಕನೇ ಟೆಸ್ಟ್ ಪಂದ್ಯ ಮಳೆಯಿಂದ ಡ್ರಾ ಆಗುವ ಮೂಲಕ ಆಸ್ಟ್ರೇಲಿಯಾ ಕಪ್ ಅನ್ನು ತನ್ನಲೇ ಉಳಿಸಿಕೊಂಡಿದೆ.

# ರಾಜ್ಯ ಕ್ರಿಕೆಟ್ ಸಂಸ್ಥೆಗಳ ಸಮಾಧಾನಕ್ಕೆ ಮುಂದಾದ ಬಿಸಿಸಿಐ



ನವದೆಹಲಿ:– 2023 ರ ವಿಶ್ವಕಪ್ ಟೂರ್ನಿ ಅಕ್ಟೋಬರ್ 5 ರಿಂದ ಆರಂಭವಾಗಲಿದ್ದು, ನವೆಂಬರ್ 19 ರಂದು ಫೈನಲ್ ನಡೆಯಲಿದೆ. ಹೈದರಾಬಾದ್, ಬೆಂಗಳೂರು, ಅಹಮದಾಬಾದ್ ಸೇರಿದಂತೆ ಒಟ್ಟು 10 ಮೈದಾನಗಳಲ್ಲಿ ಪಂದ್ಯ ನಡೆಯಲಿದೆ. ಇದೇ ವೇಳೆ, ತಮಗೆ ವಿಶ್ವಕಪ್‌ನ ಒಂದು ಪಂದ್ಯಕ್ಕೂ ಆತಿಥ್ಯ ನೀಡಿಲ್ಲ ಎಂದು ಹಲವು ರಾಜ್ಯಗಳ ಕ್ರಿಕೆಟ್ ಸಂಸ್ಥೆಗಳು ಅಸಮಾಧಾನ ವ್ಯಕ್ತಪಡಿಸಿದ್ದರು. ಇದರ ಶಮನಕ್ಕಾಗಿ ಬಿಸಿಸಿಐ ಹೊಸ ಪ್ಲಾನ್ ಮಾಡಿದೆ.

ಅದೇನೆಂದರೆ, 2023–24 ರ ಅವಧಿಯಲ್ಲಿ ಭಾರತ ತಂಡ ತವರಿನಲ್ಲಿ ಆಡುವ ಸರಣಿಗಳನ್ನು ವಿಶ್ವಕಪ್ ಪಂದ್ಯಗಳಿಂದ ವಂಚಿತವಾಗಿರುವ ಮೈದಾನಗಳಿಗೆ ಹೆಚ್ಚಿನ ಪಂದ್ಯಗಳ ಆಯೋಜನೆಗೆ ಅವಕಾಶ ನೀಡಲು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ನಿರ್ಧರಿಸಿದೆ.ವಿಶ್ವಕಪ್‌ಗೂ ಮೊದಲು ಆಸ್ಟ್ರೇಲಿಯಾ ತಂಡ ಭಾರತ ಪ್ರವಾಸ ಮಾಡಲಿದ್ದು, ಮೂರು ಏಕದಿನ ಮತ್ತು 5 ಟಿ 20 ಪಂದ್ಯಗಳನ್ನಾಡಲಿದೆ. ಅಫ್ಘಾನಿಸ್ತಾನ ವಿರುದ್ಧ 3 ಟಿ20 ಪಂದ್ಯಗಳ ಸರಣಿ, 2024 ರಲ್ಲಿ ಇಂಗ್ಲೆಂಡ್ ವಿರುದ್ಧ 5 ಟೆಸ್ಟ್ ಪಂದ್ಯಗಳ ಸರಣಿ ನಡೆಯಲಿದೆ. ಈ ಸರಣಿಗಳ ಪಂದ್ಯಗಳನ್ನು ವಿಶ್ವಕಪ್‌ನಿಂದ ವಂಚಿತವಾಗಿರುವ ಮೊಹಾಲಿ, ಇಂದೋರ್, ರಾಜ್‌ಕೋಟ್ ಮತ್ತು ವಿಶಾಖಪಟ್ಟಣಂನಲ್ಲಿ ಹೆಚ್ಚುವರಿಯಾಗಿ ತಲಾ ಎರಡು ಪಂದ್ಯಗಳನ್ನು ಆಯೋಜಿಸಲು ಬಿಸಿಸಿಐ ಚಿಂತನೆ ನಡೆಸಿದೆ. ಇವುಗಳ ಜೊತೆಗೆ ತಿರುವನಂತಪುರಂ, ಗುವಾಹಟಿ, ನಾಗ್ಪುರ ಮತ್ತು ರಾಂಚಿ ಕೂಡ ದ್ವಿಪಕ್ಷೀಯ ಸರಣಿಯ ಆತಿಥ್ಯ ವಹಿಸಲಿವೆ.

ವಿಶ್ವಕಪ್ ಪಂದ್ಯಗಳ ಆತಿಥ್ಯ ವಹಿಸಿರುವ ಮೈದಾನಗಳ ಪೈಕಿ ಹೈದರಾಬಾದ್, ಬೆಂಗಳೂರು, ಧರ್ಮಶಾಲಾಗಳು ದ್ವಿಪಕ್ಷೀಯ ಸರಣಿ ಆಯೋಜನೆಗೆ ಅವಕಾಶ ಪಡೆದಿವೆ. ಇದರಲ್ಲಿ ಹೈದರಾಬಾದ್‌ನಲ್ಲಿ ಆಸ್ಟ್ರೇಲಿಯಾ ಎದುರಿನ ಟಿ20, ಇಂಗ್ಲೆಂಡ್‌ನ ಟೆಸ್ಟ್ ನಡೆದರೆ, ಬೆಂಗಳೂರಿನಲ್ಲಿ ಅಫ್ಘಾನಿಸ್ತಾನದೊಂದಿಗಿನ ಟಿ20 ಪಂದ್ಯ ಹಾಗೂ ಧರ್ಮಶಾಲಾದಲ್ಲಿ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಪಂದ್ಯ ನಡೆಯಲಿದೆ.ಬಿಸಿಸಿಐ ಈಗಾಗಲೇ ಘೋಷಿಸಿದಂತೆ ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಯನ್ನು ಐದು ದೊಡ್ಡ ನಗರಗಳಾದ ಮುಂಬೈ, ದೆಹಲಿ, ಕೋಲ್ಕತ್ತಾ, ಚೆನ್ನೈ ಮತ್ತು ಬೆಂಗಳೂರು ಮೈದಾನದಲ್ಲಿ ಆಯೋಜಿಸಲಾಗಿತ್ತು. ಆದರೆ, ಅವುಗಳ ಬದಲಿಗೆ ಹೈದರಾಬಾದ್, ವಿಶಾಖಪಟ್ಟಣಂ, ರಾಜ್‌ಕೋಟ್, ರಾಂಚಿ ಮತ್ತು ಧರ್ಮಶಾಲಾ ಮೈದಾನಗಳಿಗೆ ಟೆಸ್ಟ್ ಪಂದ್ಯಗಳನ್ನು ವರ್ಗ ಮಾಡಲಾಗಿದೆ.

ಈ ಎಲ್ಲ ಮೈದಾನಗಳಲ್ಲಿ ಇದುವರೆಗೆ ಐದು ಅಥವಾ ಅದಕ್ಕಿಂತಲೂ ಕಡಿಮೆ ಟೆಸ್ಟ್ ಪಂದ್ಯಗಳು ನಡೆದಿವೆ.ಭಾರತ ತಂಡ 2023–24 ರ ಅವಧಿಯಲ್ಲಿ ಬಿಡುವಿಲ್ಲದ ಸರಣಿಗಳಲ್ಲಿ ಭಾಗವಹಿಸಲಿದೆ. ಆಸ್ಟ್ರೇಲಿಯಾ ಏಕದಿನ ಸರಣಿ, ವಿಶ್ವಕಪ್, ಅಫ್ಘನ್ ಎದುರು ಟಿ20 ಸರಣಿ, ಏಷ್ಯಾಕಪ್, ಇಂಗ್ಲೆಂಡ್ ವಿರುದ್ಧ 5 ಟೆಸ್ಟ್, ಬಳಿಕ ದಕ್ಷಿಣ ಆಫ್ರಿಕಾ ಪ್ರವಾಸ ನಡೆಸಲಿದೆ.

## ವಿಶ್ವಕಪ್‌ಗೂ ಮುನ್ನ ಸರಣಿ

ವಿಶ್ವಕಪ್‌ಗೂ ಮೊದಲು ಭಾರತ ಆಸ್ಟ್ರೇಲಿಯಾ ವಿರುದ್ಧದ ಏಕದಿನ ಸರಣಿ ಆಡುವ ಮೂಲಕ ತವರಿನ ಅಭಿಯಾನ ಆರಂಭಿಸಲಿದೆ. ಇತ್ತಂಡಗಳ ನಡುವಿನ ಸರಣಿ ಸೆಪ್ಟೆಂಬರ್ 22 ರಿಂದ 27 ರವರೆಗೆ ನಡೆಯಲಿದೆ. ಇದರೊಂದಿಗೆ, ಆಫ್ಘನ್ ವಿರುದ್ಧದ ಟಿ 20 ಸರಣಿಯು ವಿಶ್ವಕಪ್ ಫೈನಲ್ ಮುಗಿದ 4 ದಿನಗಳ ನಂತರ ಅಂದರೆ, ನವೆಂಬರ್ 23 ರಂದು ಪ್ರಾರಂಭವಾಗಿ, ಡಿಸೆಂಬರ್ 3 ರವರೆಗೆ ನಡೆಯಲಿದೆ.ಇದರ ನಂತರ, ಮೂರು ಟಿ20 (ಡಿಸೆಂಬರ್ 10 ರಿಂದ 14), ಮೂರು ಏಕದಿನ (ಡಿಸೆಂಬರ್ 17 ರಿಂದ 21) ಮತ್ತು 2 ಟೆಸ್ಟ್ (ಡಿಸೆಂಬರ್ 26–30 ಮತ್ತು ಜನವರಿ 3–7) ಗಾಗಿ ದಕ್ಷಿಣ ಆಫ್ರಿಕಾಕ್ಕೆ ಪ್ರವಾಸ ಮಾಡಬೇಕಾಗಿದೆ. ಮೂರು ದಿನಗಳ ಬಳಿಕ ಜನವರಿ 11 ರಿಂದ 17 ರವರೆಗೆ ಅಫ್ಘಾನಿಸ್ತಾನ ವಿರುದ್ಧದ ಸ್ವದೇಶಿ ಟಿ 20 ಸರಣಿಯು ಆರಂಭವಾಗಲಿದೆ. ಇದು ಭಾರತದ ವಿರುದ್ಧ ಅಫ್ಘಾನಿಸ್ತಾನದ ಮೊದಲ ವೈಟ್ ಬಾಲ್ ದ್ವಿಪಕ್ಷೀಯ ಸರಣಿಯಾಗಿದೆ. ಇದಾದ ನಂತರ ಇಂಗ್ಲೆಂಡ್ ವಿರುದ್ಧ 5 ಟೆಸ್ಟ್ ಪಂದ್ಯಗಳ ಸರಣಿ ನಡೆಯಲಿದೆ.

2023 ರ ಏಕದಿನ ವಿಶ್ವಕಪ್ ಪಂದ್ಯಗಳು ಒಟ್ಟು 10 ಮೈದಾನಗಳಲ್ಲಿ ನಡೆಯಲಿವೆ. ಹೈದರಾಬಾದ್ , ಧರ್ಮಶಾಲಾ, ಅಹಮದಾಬಾದ್, ದಿಲ್ಲಿ, ಚೆನ್ನೈ, ಲಖನೌ, ಪುಣೆ, ಬೆಂಗಳೂರು, ಮುಂಬೈ ಹಾಗೂ ಕೋಲ್ಕತ್ತಾ ಮೈದಾನಗಳು ಆತಿಥ್ಯ ವಹಿಸಲಿವೆ. ಸೆಪ್ಟೆಂಬರ್ 29 ರಿಂದ ಅಕ್ಟೋಬರ್ 3 ರ ವರೆಗೆ ಹೈದರಾಬಾದ್, ಗುವಾಹಟಿ ಮತ್ತು ತಿರುವನಂತಪುರದಲ್ಲಿ ಅಭ್ಯಾಸ ಪಂದ್ಯಗಳು ನಡೆಯಲಿವೆ.

# ನಟಿ ಅಮಿಷಾ ಪಟೇಲ್‌ಗೆ ದಂಡ



**ಸಾಕ್ಷ್ಯಾಧಾರ ವಿಚಾರಣೆ ವೇಳೆ ಅಮೀಶಾ ಪರ ವಕೀಲ ಜಯಪ್ರಕಾಶ್ ಅವರು ತನಗೆ ಕೆಲ ಪ್ರಮಾಣೀಕೃತ ಪ್ರತಿಗಳ ಅಗತ್ಯವಿದೆ ಎಂದು ನ್ಯಾಯಾಲಯಕ್ಕೆ ತಿಳಿಸಿದರು. ಹಾಗಾಗಿ ಮುಂದಿನ ವಿಚಾರಣೆಯ ದಿನಾಂಕವನ್ನು ನಿಗದಿಪಡಿಸಬೇಕಾಯಿತು. ಅರ್ಜಿದಾರ ಅಜಯ್ ಪರವಾಗಿ ಸಾಕ್ಷಿಗಳನ್ನು ಒದಗಿಸಲಾಯಿತು. ಈ ಹಿನ್ನೆಲೆ ಅಮೀಶಾ ಅವರಿಗೆ 500 ರೂಪಾಯಿ ದಂಡ ವಿಧಿಸಲಾಯಿತು. ಸಾಕ್ಷ್ಯಾಧಾರ ಸಂಬಂಧ ಪರೀಕ್ಷೆಗೆ ನ್ಯಾಯಾಲಯ ಆಗಸ್ಟ್ 7 ರಂದು ದಿನ ನಿಗದಿ ಮಾಡಿದೆ. ಇನ್ನೂ ಅಜಯ್ ಸಿಂಗ್ ಅವರಿಗೆ, ಅಮೀಶಾ ಪಟೇಲ್ ಮತ್ತು ಆಕೆಯ ಸಂಗಾತಿ ಹಣಕ್ಕಾಗಿ ಫೋನ್‌ನಲ್ಲಿ ಬೆದರಿಕೆ ಹಾಕಿದ್ದಾರೆ ಎಂದು ಸಹ ಆರೋಪಿಸಲಾಗಿದೆ.**

ಬಾಲಿವುಡ್ ನಟಿ ಅಮೀಶಾ ಪಟೇಲ್ ವಿರುದ್ಧ ದಾಖಲಾಗಿರುವ ಚೆಕ್ ಬೌನ್ಸ್ ಮತ್ತು ವಂಚನೆ ಆರೋಪ ಪ್ರಕರಣ ಸಂಬಂಧ ವಿಚಾರಣೆ ಮುಂದುವರಿದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ವಕೀಲರು ಸಾಕ್ಷಿ ವಿಚಾರಣೆ ಯಲ್ಲಿ ತಮ್ಮ ಸಾಕ್ಷಿ ಪ್ರಸ್ತುತಪಡಿಸದ ಹಿನ್ನೆಲೆಯಲ್ಲಿ ರಾಂಚಿ ನ್ಯಾಯಾಲಯ ಇಂದು ಅವರಿಗೆ 500 ರೂಪಾಯಿ ದಂಡ ವಿಧಿಸಿದೆ.

ನಟಿ ಅಮೀಶಾ ಪಟೇಲ್ ವಿರುದ್ಧ 2018 ರಲ್ಲಿ ಚೆಕ್ ಬೌನ್ಸ್ ಮತ್ತು ವಂಚನೆ ಆರೋಪ ಪ್ರಕರಣ ದಾಖಲಾಗಿದೆ. ಜಾರ್ಖಂಡ್ ಮೂಲದ ಚಲನಚಿತ್ರ ನಿರ್ಮಾಪಕ ಅಜಯ್ ಕುಮಾರ್ ಸಿಂಗ್ ಅವರು ನಟಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಚೆಕ್ ಬೌನ್ಸ್ ಪ್ರಕರಣದಲ್ಲಿ, ಅರ್ಜಿದಾರ – ನಿರ್ಮಾಪಕ ಅಜಯ್ ಕುಮಾರ್ ಸಿಂಗ್ ಪರವಾಗಿ, ಅವರ ಕಂಪನಿಯ ಮ್ಯಾನೇಜರ್ ರಾಂಚಿಯ ಮ್ಯಾಜಿಸ್ಟ್ರೇಟ್ ಡಿಎನ್ ಶುಕ್ಲಾ ಅವರಿದ್ದ ನ್ಯಾಯಾಲಯದಲ್ಲಿ ತಮ್ಮ ಮೊದಲ ಸಾಕ್ಷ್ಯವನ್ನು ನೀಡಿದರು.

"ಈ ಹಿಂದೆ ನಟಿಯ ಆಪ್ತರೊಂದಿಗೆ ಹರ್ಮು ಮೈದಾನದಲ್ಲಿ ಅಜಯ್ ಕುಮಾರ್ ಸಿಂಗ್ ಅವರ ಚಿತ್ರಕ್ಕೆ ಹಣ ಹೂಡಿಕೆ ಮಾಡುವ ಬಗ್ಗೆ ಚರ್ಚೆ ನಡೆಸಲಾಯಿತು. ಚರ್ಚೆ ನಂತರ, ನಟಿ ನಿರ್ಮಾಪಕ ಅಜಯ್ ಸಿಂಗ್ ಅವರೊಂದಿಗೆ ರಾಂಚಿಯ ರಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಮೀಟಿಂಗ್ ನಡೆಸಿದರು. ಆ ವೇಳೆ 'ದೇಸಿ ಮ್ಯಾಜಿಕ್' ಚಿತ್ರದ ಬಗ್ಗೆ ಚರ್ಚೆ ನಡೆಯಿತು. ಸಿನಿಮಾ ನಿರ್ಮಾಣಕ್ಕೆ ಅಜಯ್ ಕುಮಾರ್ ಸಿಂಗ್ ಹಣ ಹೂಡಿದರೆ ಬರುವ ಲಾಭದಲ್ಲಿ ಪಾಲು ಸಿಗುತ್ತದೆ ಎಂದು ನಿರ್ಧರಿಸಲಾಗಿತ್ತು" ಎಂದು ಅಜಯ್ ಕುಮಾರ್ ಸಿಂಗ್ ಕಂಪನಿಯ ಮ್ಯಾನೇಜರ್ ತಿಳಿಸಿದ್ದಾರೆ. ಈಟಿವಿ ಭಾರತ್ ಜೊತೆ ಮಾತನಾಡಿರುವ ಅಜಯ್ ಕುಮಾರ್ ಸಿಂಗ್ ಪರ ವಕೀಲರು, "ಅಜಯ್ ಅವರು ಅಮೀಶಾ ಅವರ ಖಾತೆಗೆ 2.5 ಕೋಟಿ ರೂ. ಹಣ ಹಾಕಿದ್ದಾರೆ. ಆದರೆ ಆರು ತಿಂಗಳು ಕಳೆದರೂ, ಸಿನಿಮಾ ವಿಷಯ ಮುಂದುವರಿಯದಿದ್ದಾಗ ಅಜಯ್ ಹಣವನ್ನು ಹಿಂತಿರುಗಿಸುವಂತೆ ಒತ್ತಾಯಿಸಿದ್ದಾರೆ. ನಂತರ ಅಮೀಶಾ ಪಟೇಲ್ ಅಜಯ್ ಅವರನ್ನು ಮುಂಬೈಗೆ ಕರೆಸಿ 2.5 ಕೋಟಿ ಮತ್ತು 50 ಲಕ್ಷದ ಎರಡು ಚೆಕ್‌ಗಳನ್ನು ನೀಡಿದ್ದಾರೆ. ಆ ಎರಡೂ ಚೆಕ್‌ಗಳು ಬೌನ್ಸ್ ಆದ ಹಿನ್ನೆಲೆ, ಅಜಯ್ ಕಾನೂನಿನ ಮೊರೆ ಹೋಗಿದ್ದಾರೆ" ಎಂದು ತಿಳಿಸಿದ್ದಾರೆ.

ವಕೀಲರಾದ ವಿಜಯ ಲಕ್ಷ್ಮಿ ಶ್ರೀವಾಸ್ತವ ಅವರು ಈ ಪ್ರಕರಣ ಕುರಿತು ಹೆಚ್ಚಿನ ಮಾಹಿತಿ ನೀಡಿದ್ದು, "ಈ ಪ್ರಕರಣದ ಸುದೀರ್ಘ ವಿಚಾರಣೆಯ ನಂತರ ನ್ಯಾಯಾಲಯವು ಇತ್ತೀಚೆಗೆ ನಟಿ ವಿರುದ್ಧ ವಾರಂಟ್ ಹೊರಡಿಸಿತು. ನಂತರ ಅಮೀಶಾ ಅವರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದರು. ಆ ಸಮಯದಲ್ಲಿ, ನ್ಯಾಯಾಲಯವು ಅವರಿಗೆ ಸಂಧಾನ ಪ್ರಕ್ರಿಯೆಯ ಆಯ್ಕೆಯನ್ನು ಸಹ ನೀಡಿತು. ಆದರೆ ಅವರು ಅದನ್ನು ಸ್ವೀಕರಿಸರಿರಲಿಲ್ಲ. ಈ ಹಿನ್ನೆಲೆ ಇಂದು (ಜುಲೈ 26) ಸಾಕ್ಷಿ ವಿಚಾರಣೆ ನಡೆಯಬೇಕಿತ್ತು.

# ಲಾಂಗ್ ಟೈಂ ಬಳಿಕ ಹೈದ್ರಾಬಾದ್‌ಗೆ ಬಂದ ಪ್ರಭಾಸ್



ಹೈದರಾಬಾದ್: ಆದಿಪುರುಷ್ ಬಿಡುಗಡೆ ಬಳಿಕ ವಿದೇಶಕ್ಕೆ ಹಾರಿದ್ದ ಡಾರ್ಲಿಂಗ್ ಪ್ರಭಾಸ್, ಇದೀಗ ಮತ್ತೆ ವಾಪಸ್ ಭಾರತಕ್ಕೆ ಬಂದಿದ್ದಾರೆ. ಅಮೆರಿಕದಲ್ಲಿ ಪ್ರತಿಷ್ಠಿತ ಸ್ಯಾನ್ ಡಿಯಾಗೋ ಕಾಮಿಕ್–ಕಾನ್ ಈವೆಂಟ್‌ನಲ್ಲಿ ಭಾಗವಹಿಸಿದ್ದ ಅವರು, ಬುಧವಾರ ಹೈದರಾಬಾದ್ ವಿಮಾನ ನಿಲ್ದಾಣದಲ್ಲಿ ಕಾಣಿಸಿಕೊಂಡರು.

ಅಂತಾರಾಷ್ಟ್ರೀಯ ಮಟ್ಟದ ಸ್ಯಾನ್ ಡಿಯಾಗೋ ಕಾಮಿಕ್–ಕಾನ್ ಸಮಾರಂಭದಲ್ಲಿ ಪ್ರಭಾಸ್ ಜೊತೆಗೆ 'ಕಲ್ಕಿ 2898 ಂಆ' ಚಿತ್ರ ತಂಡದ ಎಲ್ಲ ನಟ–ನಟಿಯರು ಕೂಡ ಭಾಗಿಯಾಗಿದ್ದರು. ಚಿತ್ರೀಕರಣ ವೇಳೆ ಪೆಟ್ಟು ಬಿದ್ದು ಸುರಿಸುಮಾರು 50 ದಿನಗಳನ್ನು ವಿದೇಶದಲ್ಲಿಯೇ ಕಳೆದ ಡಾರ್ಲಿಂಗ್ ಪ್ರಭಾಸ್, ಇದೀಗ ಭಾರತಕ್ಕೆ ಮರಳಿದ್ದಾರೆ. ಹೈದರಾಬಾದ್ ವಿಮಾನ ನಿಲ್ದಾಣದಲ್ಲಿ ಅವರು ಆಗಮಿಸುತ್ತಿದ್ದಂತೆ ಕ್ಯಾಮರಾಗಳ ಕಣ್ಣು ಅವರ ಮೇಲೆ ಬಿದ್ದಿವೆ. ಕಪ್ಪು ಪ್ಯಾಂಟ್ ಮತ್ತು ಅದೇ ಬಣ್ಣದ ದೊಡ್ಡ ಸ್ವೆಟ್‌ಶರ್ಟ್ ಧರಿಸಿದ್ದರು. ಅದರ ಜೊತೆ ಟೋಪಿ ಧರಿಸಿದ್ದ ಅವರು ಮುಖಕ್ಕೆ ಮಾಸ್ಕ್ ಹಾಕಿಕೊಂಡಿದ್ದರು. ಅವರ ಈ ವಿಶೇಷ ಲುಕ್ ಕಂಡ ಅಭಿಮಾನಿಗಳು ಫಿದಾ ಆಗಿದ್ದಾರೆ.

ಸಲಾರ್ ಚಿತ್ರೀಕರಣ ಮೊಣಕಾಲಿಗೆ ಪೆಟ್ಟು ಬಿದ್ದಿದ್ದರಿಂದ ಅಮೆರಿಕಕ್ಕೆ ತೆರಳಿದ್ದ ಪ್ರಭಾಸ್, ಅದರ ನಿವಾರಣೆಗಾಗಿ ಅಲ್ಲಿಯೇ ಫಿಸಿಯೋಥೆರಪಿಗೆ ಒಳಗಾಗಿದ್ದರು. ಬಳಿಕ ಅಲ್ಲಿಯೇ ನೆರವೇರಿದ್ದ ಸ್ಯಾನ್ ಡಿಯಾಗೋ ಕಾಮಿಕ್–ಕಾನ್‌ಇವೆಂಟ್‌ನಲ್ಲಿಯೂ ಕಾಣಿಸಿಕೊಂಡಿದ್ದರು. ಇದೀಗ ಎಲ್ಲವನ್ನು ಯಶಸ್ವಿಗೊಳಿಸಿ ಮತ್ತೆ ತಾಯ್ನಾಡಿಗೆ ಬಂದಿದ್ದಾರೆ.

ಪ್ರತಿಷ್ಠಿತ 'ಸ್ಯಾನ್ ಡಿಯಾಗೋ ಕಾಮಿಕ್ ಕಾನ್' ಸಮಾರಂಭದಲ್ಲಿ 'ಕಲ್ಕಿ 2898 ಎಡಿ' ಚಿತ್ರದ ಗ್ಲಿಂಪ್ಸಸ್ ಮತ್ತು ಶೀರ್ಷಿಕೆ ಅನಾವರಣಗೊಂಡಿದ್ದು ಜಾಲತಾಣದಲ್ಲಿ ಜಾಗ ಪಡೆದಿದೆ. ಬಿಗ್ ಬಜೆಟ್ ಚಿತ್ರ ಇದಾಗಿದ್ದು, ಇಂಗ್ಲಿಷ್ ಚಿತ್ರಗಳಿಗೂ ಪೈಪೋಟಿ ನೀಡುವ ರೀತಿಯಲ್ಲೇ ಸಿದ್ಧಗೊಳ್ಳುತ್ತಿದೆ. ಇತ್ತೀಚೆಗೆ ಸಂದರ್ಶನವೊಂದರಲ್ಲಿ ಮಾತನಾಡಿದ್ದ ನಟ ಪ್ರಭಾಸ್, ಚಿತ್ರದ ಬಗ್ಗೆ ಹಾಗೂ ತಮ್ಮ ಪಾತ್ರದ ಬಗ್ಗೆ ಬಹಿರಂಗಪಡಿಸಿದ್ದರು.

ಇದೇ ವೇಳೆ, ಪ್ರಭಾಸ್ ಅವರ ನಟನಾ ಕೌಶಲ್ಯದ ಬಗ್ಗೆ ಚಿತ್ರ ನಿರ್ದೇಶಕ ನಾಗ್ ಅಶ್ವಿನ್ ಕೂಡ ಶ್ಲಾಘಿಸಿದ್ದರು.'ಕಲ್ಕಿ 2898 ಎಡಿ' ಇದೊಂದು ಬಹುನಿರೀಕ್ಷಿತ ಮತ್ತು ಪ್ಯಾನ್ ಚಿತ್ರವಾಗಿದ್ದು ದೊಡ್ಡ ತಾರಾ ಬಳಗವೇ ಇದೆ. ಮಹಾನಟಿ ಖ್ಯಾತಿಯ ನಿರ್ದೇಶಕ ನಾಗ್ ಅಶ್ವಿನ್ ಆಕ್ಷನ್ ಕಟ್ ಹೇಳುತ್ತಿರುವ ಈ ಸಿನಿಮಾದಲ್ಲಿ ಪ್ಯಾನ್ ಇಂಡಿಯಾ ಸ್ಟಾರ್ ಪ್ರಭಾಸ್ ಅಲ್ಲದೇ ಬಿಗ್ ಬಿ ಅಮಿತಾಭ್ ಬಚ್ಚನ್, ಕಾಲಿವುಡ್ ಸೂಪರ್ ಸ್ಟಾರ್ ಕಮಲ್ ಹಾಸನ್, ಬಾಲಿವುಡ್ ಬಹುಬೇಡಿಕೆ ನಟಿ ದೀಪಿಕಾ ಪಡುಕೋಣೆ, ಫಿಟ್ನೆಸ್ ಐಕಾನ್ ದಿಶಾ ಪಟಾನಿ ಕೂಡ ಪ್ರಮುಖ ಪಾತ್ರಗಳಲ್ಲಿ ನಟಿಸುತ್ತಿದ್ದಾರೆ. ರಾಣಾ ದಗ್ಗುಬಾಟಿ ಕೂಡ ಇದೀಗ ಸೇರಿಕೊಂಡಿದ್ದು, ಚಿತ್ರದ ಕುತೂಹಲ ಮತ್ತಷ್ಟು ಹೆಚ್ಚಿಸಿದೆ. ಸಿನಿಮಾ ಪ್ರೊಡಕ್ಷನ್ ಹೌಸ್ ವೈಜಯಂತಿ ಮೂವೀಸ್ ಹಣ ಹೂಡಿದ್ದು ಸಂತೋಷ್ ನಾರಾಯಣನ್ ಸಂಗೀತವಿದೆ.

ಕಲ್ಕಿ ಜೊತೆಗೆ, ಪ್ರಭಾಸ್ ಅವರು ಪ್ರಶಾಂತ್ ನೀಲ್ ನಿರ್ದೇಶನ 'ಸಲಾರ್' ಚಿತ್ರದಲ್ಲಿ ನಟಿಸುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಹೊಂಬಾಳೆ ಸಂಸ್ಥೆ ಈ ಚಿತ್ರಕ್ಕೆ ಹಣ ಹೂಡಿದ್ದು ಪ್ಯಾನ್ ಇಂಡಿಯಾ ಮಟ್ಟದಲ್ಲಿ ಬಿಡುಗಡೆ ಮಾಡಲು ಸಿದ್ಧತೆ ಮಾಡಿಕೊಂಡಿದೆ. ಶ್ರುತಿ ಹಾಸನ್ ಈ ಚಿತ್ರದ ನಾಯಕಿಯಾಗಿ ನಟಿಸಲಿದ್ದಾರೆ. ಪ್ರಶಾಂತ್ ಮತ್ತು ಶ್ರುತಿ ಹಾಸನ್ ಜೊತೆಗೆ ಮಲಯಾಳಂನ ಪೃಥ್ವಿರಾಜ್ ಸುಕುಮಾರನ್ ಕೂಡ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ.